# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 30-03-2017ರಂದು ನಡೆದ ಸಭೆಯ ನಡವಳಿಗಳು*

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಎಂ.ಕೆ.ಗುಣಶೇಖರ್ – ಅಧ್ಯಕ್ಷರು | ಸಂಬಂಧಪಟ್ಟ ಅಧಿಕಾರಿಗಳು, |
| ಬಿ.ಎನ್.ನಿತೀಶ್ ಪುರುಶೋತ್ತಮ – ಸದಸ್ಯರು | – |
| ಕೆ.ಎಂ.ಮಮತ – ಸದಸ್ಯರು | –– |
| ಜೆ.ಎನ್.ಶ್ರೀನಿವಾಸಮೂರ್ತಿ – ಸದಸ್ಯರು | – |
| ಎಂ.ಮಹದೇವ – ಸದಸ್ಯರು | –– |
| ಪದ್ಮಾವತಿ ನರಸಿಂಹಮೂರ್ತಿ – ಸದಸ್ಯರು | –– |
| ಮಮತ ಕೆ.ಬಿ. ವಾಸುದೇವ – ಸದಸ್ಯರು | – |
| ಎಂ.ಪದ್ಮಾವತಿ ಶ್ರೀನಿವಾಸ್ – ಸದಸ್ಯರು | –– |
| ಎನ್.ಲೋಕೇಶ್ – ಸದಸ್ಯರು | – |
| ಎಂ. ಶಶಿರೇಖಾ – ಸದಸ್ಯರು | –– |
| ಬಿ.ಸುಮಂಗಲ – ಸದಸ್ಯರು | – |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

### *01]. ವಿಷಯದ ಸಂಖ್ಯೆ: ತೆಆಸ್ಥಾಸ/50/2016-17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015-16 ನೇ ಸಾಲಿನ ಆಯವ್ಯಯದಲ್ಲಿ ಬಿಬಿಎಂಪಿಗೆ ಘೋಷಿಸಿರುವ ರೂ. 1500.00 ಕೋಟಿಗಳ ಅನುದಾನದ ಪೈಕಿ ಸರ್ಕಾರದ ಆದೇಶ ಸಂಖ್ಯೆ : ನಅಇ 279 ಎಸ್.ಎಫ್.ಸಿ 2015, ಬೆಂಗಳೂರು ದಿನಾಂಕ : 08.01.2016 ರಲ್ಲಿ ರೂ. 976.00 ಕೋಟಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಿದೆ. ಅದರಲ್ಲಿ ಕ್ರ.ಸಂ 1 ರಲ್ಲಿ ಬೆಂಗಳೂರು ನಗರದಲ್ಲಿ ಘನತ್ಯಾಜ್ಯ ಸಂಸ್ಕರಣ ಘಟಕಗಳ ಕಾರ್ಯಾರಂಭಕ್ಕೆ ರೂ. 200.00 ಕೋಟಿಗಳ ಅನುದಾನ ನಿಗಧಿಪಡಿಸಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 238 ಎಸ್.ಎಫ್.ಸಿ 2016, ಬೆಂಗಳೂರು ದಿನಾಂಕ : 18-06-2016 ರಲ್ಲಿ ಮೇಲ್ಕಂಡ ರೂ. 200.00 ಕೋಟಿಗಳಲ್ಲಿ ವಾರ್ಡ್ ಸಂಖ್ಯೆ 40ರ ದೊಡ್ಡಬಿದರಕಲ್ಲು ಘಟಕ, ವಾರ್ಡ್ 198ರ ಲಿಂಗಧೀರನಹಳ್ಳಿ ಘಟಕ, ಸುಬ್ಬರಾಯನ ಪಾಳ್ಯ ಘಟಕ, ಸೀಗೆಹಳ್ಳಿ, ಕನ್ನಹಳ್ಳಿ ಘಟಕಗಳ ಒಟ್ಟು 32 ಕಾಮಗಾರಿಗಳ ಅಂದಾಜು ಮೊತ್ತ ರೂ. 66.00 ಕೋಟಿಗಳಿಗೆ ನಗರೋತ್ಥಾನ ಯೋಜನೆಯ ಲೆಕ್ಕಶೀರ್ಷಿಕೆ ಅಡಿ ಭರಿಸಲು ಅನುಮೋದನೆ ನೀಡಿದೆ. ನಗರೋತ್ಥಾನ ಯೋಜನೆಯ ಕಾಮಗಾರಿಗಳನ್ನು 2016-17ರ ಲೆಕ್ಕಶೀರ್ಷಿಕೆ "P-3106 ನಗರೋತ್ಥಾನ ಕಾಮಗಾರಿಗಳು" Current Works ಅಡಿ ಜಾಬ್‌ಸಂಖ್ಯೆ ನೀಡಬೇಕಿದೆ. ಕಾಮಗಾರಿಗಳಿಗೆ ಜಾಬ್‌ಸಂಖ್ಯೆ ನೀಡಲು ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ. 2016-17ರ ಆಯವ್ಯಯದಲ್ಲಿ (ಪುಟಸಂಖ್ಯೆ 184) ಲೆಕ್ಕಶೀರ್ಷಿಕೆ P-3106ನ CurrentWorks ಅಡಿ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದ ಅನುಮೋದನೆಯಂತೆ ಕಾಮಗಾರಿಗಳನ್ನು ಸಾರ್ವಜನಿಕ

ಹಿತದೃಷ್ಟಿಯಿಮದ ತುರ್ತಾಗಿ ಕೈಗೊಳ್ಳಬೇಕಿದೆ. ಆಯವ್ಯಯದಲ್ಲಿ ಅನುದಾನ ಮೀಸಲಿರಿಸದ ಕಾರಣ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ 32 ಕಾಮಗಾರಿಗಳ ಮೊತ್ತ ರೂ. 6600.00 ಲಕ್ಷಗಳ ಅನುದಾನವನ್ನು 2016–17ರ ಲೆಕ್ಕಶೀರ್ಷಿಕೆ P–3106ನ Current Works ಅಡಿ ಅಳವಡಿಸಿಕೊಂಡು 310–17–000026 ರಿಂದ 310–17–000057 ರವರೆಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## ***02]. ವಿಷಯದ ಸಂಖ್ಯೆ: ತೆಆಸ್ಥಾಸ/130/2016–17***

ಆಯುಕ್ತರ ದಿನಾಂಕ: 18.01.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ರಾಜ್ ಪಾಟೀಲ್, ಅಧ್ಯಕ್ಷರು, 9ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ–2016 ಅಟ್ಲಾಂಟಿಕ್ ಸಿಟಿ ಕನ್ವೆನ್ಷನ್ ಸೆಂಟರ್, ಅಟ್ಲಾಂಟಿಕ್ ಸಿಟಿ ರವರ ಕೋರಿಕೆಯ ಮೇರೆಗೆ, ಸನ್ಮಾನ್ಯ ಶ್ರೀರಾಮಲಿಂಗಾ ರೆಡ್ಡಿ, ಮಾನ್ಯ ಸಾರಿಗೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಪೂಜ್ಯ ಮಹಾಪೌರರು ತಮ್ಮ ಪತ್ರಗಳಲ್ಲಿ ತಿಳಿಸಿರುವಂತೆ, ಕನ್ನಡ ಕೂಟಾಸ್ ಆಫ್ ಅಮೇರಿಕಾ–ಅಕ್ಕಾ 1998ರಲ್ಲಿ ಸ್ಥಾಪನೆಗೊಂಡು 2 ಲಕ್ಷ ಸದಸ್ಯರನ್ನು ಹೊಂದಿರುವ ಲಾಭರಹಿತ ಸಂಸ್ಥೆಯಾಗಿದ್ದು, ಅಂತರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಭಾಷೆಯ ಪ್ರಚಾರ ಹಾಗೂ ಏಳಿಗೆಗಾಗಿ ಶ್ರಮಿಸುತ್ತಿರುವ ಸದರಿ ಸಂಸ್ಥೆಯು 2016 ಸೆಪ್ಟೆಂಬರ್ 2, 3 ಮತ್ತು 4ರಂದು ಆಯೋಜಿಸಿರುವ ಸಮ್ಮೇಳನಕ್ಕಾಗಿ ಸೂಕ್ತ ಧನಸಹಾಯ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲು ಆದೇಶಿಸಿರುತ್ತಾರೆ.

ಮುಂದುವರೆದಂತೆ, 2016–17ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 24 ಸಂಸ್ಕೃತಿ ಮತ್ತು ಕ್ರೀಡೆ, ಪಿ–048 ಕೊಡುಗೆಗಳು ಮತ್ತು ಸಹಾಯಧನಕ್ಕಾಗಿ ರೂ.500.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಇದರಂತೆ ಅನುಬಂಧ–2ರಲ್ಲಿ 30 ಸಂಘ/ಸಂಸ್ಥೆಗಳ ಸಹಾಯಧನ ಹಂಚಿಕೆ ಪಟ್ಟಿಯಲ್ಲಿ ಸದರಿ ಸಂಸ್ಥೆಯ ಹೆಸರು ಸೇರ್ಪಡೆಗೊಂಡಿರುವುದಿಲ್ಲ.

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 9ನೇ ಅಕ್ಕ ವಿಶ್ವ ಕನ್ನಡ ಸಮ್ಮೇಳನ–2016 ರವರಿಗೆ ಸಹಾಯಧನ ಮಂಜೂರಾತಿ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## ***03]. ವಿಷಯದ ಸಂಖ್ಯೆ: ತೆಆಸ್ಥಾಸ/133/2016–17***

ಆಯುಕ್ತರ ದಿನಾಂಕ: 04–08–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಘನತ್ಯಾಜ್ಯ ನಿರ್ವಹಣೆ ನಿಯಮ 2016 ದಂತೆ ನಗರ ಸ್ಥಳೀಯ ಸಂಸ್ಥೆಗಳು ಘನತ್ಯಾಜ್ಯ ವಸ್ತುವನ್ನು ಮೂಲದಿಂದಲೇ ಅಂದರೆ ಮನೆಮನೆಗಳಿಂದ ಮತ್ತು ಇತರೆ ತ್ಯಾಜ್ಯ ಉತ್ಪಾದಕರಿಂದ ಸಂಗ್ರಹಿಸಿ ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಬೇಕಾಗಿರುತ್ತದೆ.ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸದರಿ ನಿಯಮಾನುಸಾರ ಘನತ್ಯಾಜ್ಯ ನಿರ್ವಹಣೆಗಾಗಿ ವಾರ್ಷಿಕ ಸುಮಾರು 500 ಕೋಟಿಯಷ್ಟು ಮೊತ್ತವನ್ನು ವೆಚ್ಚಮಾಡುತ್ತಿದ್ದು, ಈ ಮೊತ್ತವು ಪ್ರತಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುತ್ತದೆ.ಈ ನಿಟ್ಟಿನಲ್ಲಿ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಕಟ್ಟಡದ ಪ್ರದೇಶವನ್ನು ಆಧಾರವಾಗಿರಿಸಿಕೊಂಡು ಕರ್ನಾಟಕ ಪೌರ ನಿಗಮಗಳ ಕಾಯಿದೆ 1976 ಪ್ರಕರಣ 103 B ಅನ್ವಯ, ತೆರಿಗೆ ನಿಯಮಾವಳಿ 19 A ರಲ್ಲಿ ಘನತ್ಯಾಜ್ಯ ನಿರ್ವಹಣೆಗೆ

ಉಪಕರ ದರಗಳನ್ನು ನಿಗಧಿಪಡಿಸಲಾಗಿರುತ್ತದೆ. ಇದರ ಆಧಾರದಲ್ಲಿ, ಉಲ್ಲೇಖ 3ರಂತೆ ಘನತ್ಯಾಜ್ಯ ನಿರ್ವಹಣಾ ಉಪಕರವನ್ನು ಕಂದಾಯ ಇಲಾಖೆಯು ಆಸ್ತಿ ತೆರಿಗೆ ಸಂಗ್ರಹಿಸುವ ಸಮಯದಲ್ಲಿ ಆಸ್ತಿ ತೆರಿಗೆಯೊಂದಿಗೆ ವಸೂಲಿ ಮಾಡಲು ದಿನಾಂಕ: 29–12–2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ನಿರ್ಣಯದಂತೆ, 2011–12ನೇ ಸಾಲಿನಿಂದ ಉಪಕರಗಳನ್ನು ಲೆಕ್ಕ ಶೀರ್ಷಿಕೆ 'ಘನತ್ಯಾಜ್ಯ ನಿರ್ವಹಣೆ ಕರ ಸಂಖ್ಯೆ R0194' ರಡಿಯಲ್ಲಿ ನಿರ್ವಹಿಸಲು ಸೂಚಿಸಿ ಈ ಕೆಳಕಂಡ ಉಪಕರಗಳನ್ನು ವಸೂಲಿ ಮಾಡಲು ದಿನಾಂಕ: 15–02–2011 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ.

**I. ವಾಸದ ಕಟ್ಟಡಗಳಿಗೆ**

| ವಿವರ | ಮಾಹೆಯಾನ |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 10 |
| • 1001 ಚದರಡಿ ಇಂದ' 3000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 30 |
| • 3001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 50 |

**II . ವಾಣಿಜ್ಯ ಕಟ್ಟಡಗಳಿಗೆ**

| ವಿವರ | **ಮಾಹೆಯಾನ** |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 50 |
| • 1001 ಚದರಡಿ ಇಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 100 |
| • 5001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 200 |

**III . ಕೈಗಾರಿಕ ಕಟ್ಟಡಗಳಿಗೆ**

| ವಿವರ | **ಮಾಹೆಯಾನ** |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 100 |
| • 1001 ಚದರಡಿ ಇಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 200 |
| • 5001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 300 |

**IV. ಹೋಟೆಲ್‌ಗಳು, ಕಲ್ಯಾಣ ಮಂಟಪಗಳು, ನರ್ಸಿಂಗ್ ಹೋಂಗಳು**

| **ವಿವರ** | **ಮಾಹೆಯಾನ** |
|---|---|
| • 1000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 300 |
| • 1001 ಚದರಡಿ ಇಂದ 5000 ಚದರಡಿ ವರೆಗೆ ಇರುವ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 500 |
| • 5001 ಚದರಡಿ ಗಿಂತ ಮೇಲ್ಪಟ್ಟ ಆವರಣಕ್ಕೆ ಪ್ರತಿ ತಿಂಗಳಿಗೆ | ರೂ. 600 |

ಘನತ್ಯಾಜ್ಯಗಳ ನಿರ್ವಹಣೆಗಾಗಿ2011–12ನೇ ಸಾಲಿನಿಂದ 2014–15ರವರೆಗೂ ಘನತ್ಯಾಜ್ಯದ ನಿರ್ವಹಣೆ ವೆಚ್ಚ ಮತ್ತು ಘನತ್ಯಾಜ್ಯ ಉಪಕರ ಸಂಗ್ರಹವಾಗಿರುವ ಮೊತ್ತವು ಈ ಕೆಳಕಂಡಿರುತ್ತದೆ.ಅದರಂತೆ ಘನತ್ಯಾಜ್ಯ ನಿರ್ವಹಣೆಗೆ ಮಾಡಿರುವ ವೆಚ್ಚಕ್ಕೆ ಹೋಲಿಸಿದರೆ ಸಂಗ್ರಹವಾಗಿರುವ ಘನತ್ಯಾಜ್ಯ ಉಪಕರ ಮೊತ್ತವು ಕೇವಲ ಶೇ.9 ರಿಂದ 15% ರಷ್ಟು ಮಾತ್ರ.

| ಕ್ರ. ಸಂ | ವಿವರ | ವಾರ್ಷಿಕ ವೆಚ್ಚ (ರೂ. ಕೋಟಿಗಳಲ್ಲಿ) | | ವಾರ್ಷಿಕ ಘನತ್ಯಾಜ್ಯ ಉಪಕರ ಸಂಗ್ರಹಣೆ (ರೂ. ಕೋಟಿಗಳಲ್ಲಿ) | ವೆಚ್ಚ ಭರಿತ (Cost recovery) |
|---|---|---|---|---|---|
| 1. | • ಸ್ವಚ್ಚತೆ ಮತ್ತು ಕಸ ಸಾಗಾಣಿಕೆ<br>• ಘನತ್ಯಾಜ್ಯ ನಿರ್ವಹಣೆ ಕೇಂದ್ರ ಹಳೆ ಹಾಗೂ ಹೊಸ ಪ್ರದೇಶಗಳಲ್ಲಿ<br>• ಘನತ್ಯಾಜ್ಯ ವಿಲೇವಾರಿ ನಿರ್ವಹಣೆ ವೆಚ್ಚ<br>• ಘನತ್ಯಾಜ್ಯ ವಿಲೇವಾರಿ ನಿರ್ವಹಣೆ | 2011–12 | 237.42 | 36.18 | 15.23% |
| 2. | | 2012–13 | 286.28 | 37.67 | 13.15% |
| 3. | | 2013–14 | 352.21 | 37.67 | 10.60% |
| 4. | | 2014–15 | 421.13 | 41.07 | 9.75% |

ಮುಂದುವರೆದಂತೆ, ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಸುಧಾರಿಸಲು ಸೇವಾ ವೆಚ್ಚವನ್ನು ಭರಿಸಲು ಬಳಕೆದಾರರಿಗೆ ವೆಚ್ಚಗಳನ್ನು ವಿಧಿಸುವುದು ಮತ್ತು ವಸೂಲಾತಿ ಮಾಡುವುದು ಕೇಂದ್ರ ಸರ್ಕಾರದ ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಅಭಿಯಾನದ (ಜೆ.ಎನ್.ಎನ್.ಯು.ಆರ್.ಎಂ) ಅಡಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಅಗತ್ಯವಿದ್ದಂತಹ ಕಡ್ಡಾಯ ಸುಧಾರಣೆಗಳಲ್ಲಿ ಒಂದಾಗಿದ್ದು, ಪೂರ್ಣ ಪ್ರಮಾಣದ ಘನತ್ಯಾಜ್ಯದ ನಿರ್ವಹಣೆ ವೆಚ್ಚವನ್ನು (Operation and Maintenance cost) ಉಪಕರ (ಸೇವಾ ಶುಲ್ಕ) ಮೂಲಕ ಸಂಗ್ರಹಣೆ ಮಾಡಿ ನಿರ್ವಹಣೆ ಮಾಡಬೇಕಾಗಿದ್ದು, ಈ ನಿಟ್ಟನಲ್ಲಿ ಉಪಕರ (ಸೇವಾ ಶುಲ್ಕ)ವನ್ನು ಪರಿಷ್ಕರಿಸಲು ಜಂಟಿ ಕಾರ್ಯದರ್ಶಿಗಳು,ಕೇಂದ್ರ ನಗರಾಭಿವೃದ್ಧಿ ಇಲಾಖೆ ರವರು ದಿನಾಂಕ: 02–07–2012 ರಲ್ಲಿಯೇ ಸೂಚಿಸಿರುತ್ತಾರೆ ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಸ್ಥಳೀಯ ಸಂಸ್ಥೆಗಳ ವರದಿ ಮಾರ್ಚ್ 2013ಕ್ಕೆ (CAG-2013) ಕೊನೆಗೊಂಡ ವರ್ಷದ ವರದಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಉಪಕರ ಕುರಿತು ಕೆಲವೊಂದು ಸಲಹೆಗಳೊಂದಿಗೆ ಉತ್ಪತ್ತಿ ಮಾಡಲಾದ ತ್ಯಾಜ್ಯಗಳ ಸ್ವರೂಪ ಮತ್ತು ಪರಿಮಾಣಕ್ಕೆ ತಕ್ಕಂತೆ ಸೂಕ್ತವಾದ ಸೆಸ್ಸ್ ಮೊತ್ತವನ್ನು ವಿಧಿಸುವಂತೆ ಅಭಿಪ್ರಾಯ ನೀಡಲಾಗಿರುತ್ತದೆ.

ಈ ಕುರಿತಂತೆ ದಿನಾಂಕ:10–02–2016 ರಂದು ಅಪರ ಮುಖ್ಯ ಕಾರ್ಯದರ್ಶಿಯವರು, ನಗರಾಭಿವೃದ್ಧಿ ಇಲಾಖೆರವರ ಅಧ್ಯಕ್ಷತೆಯಲ್ಲಿ ರಾಜಸ್ಥಾನ ಸರ್ಕಾರವು ಘನತ್ಯಾಜ್ಯ ವಿಲೇವಾರಿಯ ಬಗ್ಗೆ ಬಳಕೆದಾರರ ಮೇಲೆ ಶುಲ್ಕ ವಿಧಿಸುವ ಬಗ್ಗೆ ಹಾಗೂ ಘನತ್ಯಾಜ್ಯವನ್ನು ಸಂಗ್ರಹಿಸುವ, ಸಾಗಾಣಿಕೆ ಹಾಗೂ ಘನತ್ಯಾಜ್ಯವನ್ನು ಉಪಯೋಗಿಸಿ ಪುನರ್ ಬಳಕೆಯ ಬಗ್ಗೆ ನಡೆದ ಸಭೆಯಲ್ಲಿ ಪ್ರಸ್ತುತ ಘನತ್ಯಾಜ್ಯ ನಿರ್ವಹಣೆಗೆ ಪಾಲಿಕೆಯು ಮಾಡುತ್ತಿರುವ ವೆಚ್ಚ ಮತ್ತು ವಸೂಲಾತಿಯಾಗುವ ಘನತ್ಯಾಜ್ಯ ನಿರ್ವಹಣೆ ಕರದಲ್ಲಿ ತುಂಬಾ ವ್ಯತ್ಯಾಸವಿರುವುದರ ಕುರಿತು ಸಭೆಯಲ್ಲಿ ಚರ್ಚಿಸಲಾಗಿ ಪಾಲಿಕೆಯು ಆಸ್ತಿ ತೆರಿಗೆ ವಸೂಲಾತಿ ಮಾಡುವ ಸಂದರ್ಭದಲ್ಲಿ ಇನ್ನಿತರ ಇಲಾಖೆಯ ನಿಯಮಾವಳಿಯಂತೆ ಆರೋಗ್ಯ ಕರ, ಗ್ರಂಥಾಲಯ ಕರ ಮತ್ತು ಭಿಕ್ಷುಕರ ಕರಗಳನ್ನು ಶೇಖಡವಾರು ವಸೂಲಾತಿ ಮಾಡುತ್ತಿದ್ದು ಇದರಂತೆ ಘನತ್ಯಾಜ್ಯ ನಿರ್ವಹಣೆಯ ಕರವನ್ನು ಸಹ ಶೇಕಡವಾರು ದರದಲ್ಲಿ ವಸೂಲಿ ಮಾಡುವುದರಿಂದ ಪಾಲಿಕೆಯ ಸಂಪನ್ಮೂಲಗಳನ್ನು ವೃದ್ಧಿಸಬಹುದಾಗಿದ್ದು, ಈ ಉದ್ದೇಶಕ್ಕಾಗಿ ಪಾಲಿಕೆಯು ಮಾಡುವ ವೆಚ್ಚವನ್ನು ಸರದೂಗಿಸಲು ಕ್ರಮವಹಿಸುವ ಕುರಿತು, ಸದರಿ ಸಭೆಯಲ್ಲಿ ಗಂಭೀರವಾಗಿ ಚರ್ಚಿಸಿ ಈ ಕೆಳಕಂಡಂತೆ' ಆದೇಶಿಸಲಾಗಿರುತ್ತದೆ.

"ಘನತ್ಯಾಜ್ಯ ನಿರ್ವಹಣೆಗೆ ಪಾಲಿಕೆಯು ಮಾಡುತ್ತಿರುವ ವೆಚ್ಚವನ್ನು ಈ ಉದ್ದೇಶಕ್ಕಾಗಿ ವಿಧಿಸುವ ಕರವಸೂಲಾತಿಯಲ್ಲಿ ಸರಿದೂಗಿಸುವ ದೃಷ್ಟಿಯಿಂದ ಆಸ್ತಿ ತೆರಿಗೆ ಮೇಲೆ ಶೇ.15% ರಷ್ಟು ಘನತ್ಯಾಜ್ಯ ನಿರ್ವಹಣೆ ಕರ ವಸೂಲಾತಿ ಮಾಡಲು ಮುನ್ಸಿಪಲ್ ಕಾಯ್ದೆ/ ನಿಯಮಾವಳಿಗೆ ಸೂಕ್ತ ತಿದ್ದುಪಡಿ ಮಾಡಿ, ಪಾಲಿಕೆಯಿಂದ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲಿನೆಗೆ ತುರ್ತಾಗಿ ಸಲ್ಲಿಸುವಂತೆ ಹಾಗೂ ರಾಜಸ್ಥಾನ ನಿಯಮಗಳಲ್ಲಿರುವಂತೆ ದಂಡಗಳನ್ನುವಿಧಿಸಲು ಸಹಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಲಾಗಿರುತ್ತದೆ."

ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದನ್ವಯ ಘನತ್ಯಾಜ್ಯ ಕರವನ್ನು ಪರಿಷ್ಕೃತಗೊಳಿಸಲು ಕರ್ನಾಟಕ ಮುನ್ಸಿಪಲ್ ಕಾಯ್ದೆ/ ನಿಯಮಾವಳಿ ತಿದ್ದುಪಡಿ ತರುವ ಅವಶ್ಯಕತೆಯಿರುವುದರಿಂದ ಪ್ರಸ್ತುತ ಆಸ್ತಿ ತೆರಿಗೆಯ ಶೇ.15%ರಷ್ಟು ಹೆಚ್ಚಿಸಿದಲ್ಲಿ ವಾರ್ಷಿಕ ಆಸ್ತಿ ತೆರಿಗೆ ರೂ. 2000 ಕೋಟಿ ಎಂದುಕೊಂಡಲ್ಲಿ ರೂ. 300 ಕೋಟಿ ಘನತ್ಯಾಜ್ಯ ಉಪಕರಗಳನ್ನು ಸಂಗ್ರಹಿಸಬಹುದಾಗಿದ್ದು ಮತ್ತು ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಸ್ಥಳೀಯ ಸಂಸ್ಥೆಗಳ ವರದಿ ಮಾರ್ಚ್ 2013ಕ್ಕೆ (ಸಿಎಜಿ-2013)ರವರ ವರದಿಯಲ್ಲಿ ಘನತ್ಯಾಜ್ಯ ನಿರ್ವಹಣೆಯ ಉಪಕರ ಕುರಿತು ನೀಡಿರುವಸಲಹೆಗಳಂತೆ ಧಾರ್ಮಿಕ ಸಂಸ್ಥೆಗಳಲ್ಲಿಯೂ ಹಾಗೂ ಬಾಡಿಗೆ ನೀಡಿರುವ ಪಾಲಿಕೆಯ ಕಟ್ಟಡಗಳಲ್ಲೂ ಕೂಡ ತ್ಯಾಜ್ಯ ಉತ್ಪಾದನೆ ಪ್ರಮಾಣದ ಮೇಲೆ ಉಪಕರಗಳನ್ನು ಸಂಗ್ರಹಿಸಬೇಕಾಗಿದ್ದು, ಈ ಬಗ್ಗೆಕಾನೂನು ಕೋಶದ ಮುಖ್ಯಸ್ಥರಿಗೆ' ಅಭಿಪ್ರಾಯಹಾಗೂ ಶೇ. 15%ರಷ್ಟು ಘನತ್ಯಾಜ್ಯ ಕರಗಳನ್ನು ವಿಧಿಸಿದಲ್ಲಿ ಪ್ರಸ್ತುತ ಪಡೆಯುತ್ತಿರುವ ಕರಗಳ ಯಾವುದೇ ಪ್ರಕರಣಗಳಲ್ಲಿ ಕಡಿಮೆಗೊಳ್ಳುವ ಕುರಿತಂತೆ ಉಪ ಆಯುಕ್ತರು ಕಂದಾಯ ರವರ ಅಭಿಪ್ರಾಯ ಕೂಡ ಪಡೆಯಲಾಗಿರುತ್ತದೆ. ಅದರಂತೆ ಕಾನೂನು ಕೋಶದ ಮುಖ್ಯಸ್ಥರು ಕರ್ನಾಟಕ ಮುನ್ಸಿಪಲ್ ಕಾಯ್ದೆ 1976 ರಲ್ಲಿ ಸೆಕ್ಷನ್ 103B (2) ರಲ್ಲಿ ತಿದ್ದುಪಡಿ ತರಲು ಪ್ರತಿ ಆಸ್ತಿ ತೆರಿಗೆಗೆ ಗರಿಷ್ಠ ರೂ. 5 ಸಾವಿರ ಪ್ರತಿ ಮಾಹೆ ಮೀರದಂತೆ ನಿಗಧಿಪಡಿಸಲು ಅಭಿಪ್ರಾಯಿಸಿರುತ್ತಾರೆ.ಸದರಿ ಪ್ರಸ್ತಾನೆಯ ಕುರಿತು ಉಪ ಆಯುಕ್ತರು ಕಂದಾಯ ರವರು ವಾರ್ಷಿಕ ರೂ. 5ಲಕ್ಷಕ್ಕಿಂತ ಮೇಲ್ಪಟ್ಟು ಆಸ್ತಿ ತೆರಿಗೆ ಪಾವತಿಸುತ್ತಿರುವ ಹಲವಾರು ಪ್ರಕರಣಗಳಿದ್ದು, ಈ ರೀತಿ ಮಿತಿಗೊಳಿಸಿದ್ದಲ್ಲಿ ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುತ್ತದೆಂದು ಅಭಿಪ್ರಾಯಿಸಿರುವ ಹಿನ್ನೆಲೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಕಟ್ಟಡಗಳಿಗೆ ಹಾಗೂ ಖಾಲಿ ನಿವೇಶನಗಳಿಗೆ ಆಸ್ತಿತೆರಿಗೆಯ ಮೇಲೆ ಶೇ.15% ರಷ್ಟು ಘನತ್ಯಾಜ್ಯ ಉಪಕರಗಳನ್ನು ಸಂಗ್ರಹಿಸುವುದು ಸೂಕ್ತವಾಗಿರುತ್ತದೆ. ಇದಲ್ಲದೇಪಾಲಿಕೆಯು ಹಾಲಿ ಕೆ.ಎಂ.ಸಿ ತಿದ್ದುಪಡಿ ಕಾಯ್ದೆ ಷೆಡ್ಯೂಲ್-13 ಸೆಕ್ಷನ್ 431 (A) ರಲ್ಲಿ ಸೂಚಿಸಿರುವಂತೆ ಘನತ್ಯಾಜ್ಯ ನಿಯಮ ಉಲ್ಲಂಘನೆಗಳಿಗೆ ದಂಡ ವಿಧಿಸಲಾಗುತ್ತಿದ್ದು, ಅವುಗಳನ್ನು ಒಳಗೊಂಡಂತೆ ರಾಜಸ್ಥಾನ ಸರ್ಕಾರವು ವಿಧಿಸುತ್ತಿರುವ ಘನತ್ಯಾಜ್ಯ ನಿಯಮದಡಿ ವಿವಿಧ ಉಲ್ಲಂಘನೆಯ ಪ್ರಕರಣಗಳಿಗೆ ದಂಡ ವಿಧಿಸುತ್ತಿರುವ ರೀತ್ಯಾ ಪಾಲಿಕೆಯು ಅಳವಡಿಸಿಕೊಳ್ಳಬಹುದಾಗಿರುತ್ತದೆ.(ಅನುಬಂಧ-ಅ ಲಗತ್ತಿಸಿದೆ) ಮೇಲೆ ವಿವರಿಸಿದ ಹಿನ್ನಲೆಯಲ್ಲಿ ಈ ಕೆಳಕಂಡ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಿದೆ.

1. ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಕಟ್ಟಡಗಳಿಗೆ ಹಾಗೂ ಖಾಲಿ ನಿವೇಶನಗಳಿಗೆ ಆಸ್ತಿತೆರಿಗೆಯ ಮೇಲೆ ಶೇ.15% ರಷ್ಟು ಘನತ್ಯಾಜ್ಯ ಉಪಕರಗಳನ್ನು 2017-18 ಸಾಲಿನಿಂದ ಸಂಗ್ರಹಿಸುವ ಬಗ್ಗೆ.
2. ರಾಜಸ್ಥಾನ ಸರ್ಕಾರವು ವಿಧಿಸುತ್ತಿರುವ ಘನತ್ಯಾಜ್ಯ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ದಂಡ ವಿಧಿಸುತ್ತಿರುವ ರೀತ್ಯಾ ಪಾಲಿಕೆಯು ಅಳವಡಿಸಿಕೊಳ್ಳುವ ಕುರಿತು.

**ದಿನಾಂಕ: 29-12-2016 ರ ಪಾಲಿಕೆ ಸಭೆಯಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಪರಿಶೀಲನೆಗಾಗಿ ವಿಷಯವನ್ನು ಕಳುಹಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

***-ಮುಂದೂಡಿದೆ-***

## *04]. ವಿಷಯದ ಸಂಖ್ಯೆ: ತೆಆಸ್ಥಾಸ/157/2016-17*

ಆಯುಕ್ತರ ದಿನಾಂಕ: 20-01-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ:ನಅಇ 344 ಎಂಎನ್‌ಜಿ 2016, ದಿನಾಂಕ:22-10-2016 ರಲ್ಲಿ ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯ ಕಛೇರಿ ಆದೇಶ ಸಂಖ್ಯೆ: ಆಪಸಂ/ಸಿಬ್ಬಂದಿ-3/ ವಿವ-31/2016-17 ದಿನಾಂಕ:30-08-2016 ರಂತೆ ಶ್ರೀ ಲಕ್ಷ್ಮೀನಾರಾಯಣ ಮತ್ತು ಶ್ರೀ ಜಿ.ಚಿನ್ನುಮ್ಮಲಾದ್ರಿ

ಬೃಹನ್ಮಠ್, ಹಿರಿಯ ಪಶು ವೈದ್ಯಕೀಯ ಪರಿವೀಕ್ಷಕರು, ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೊ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಹಿರಿಯ ಪರಿವೀಕ್ಷಕರ ಹುದ್ದೆಗೆ ನಿಯೋಜಿಸಲಾಗಿರುತ್ತದೆ.

ಶ್ರೀ ಲಕ್ಷ್ಮೀನಾರಾಯಣ ಮತ್ತು ಶ್ರೀ ಜಿ.ಚಿನ್ನುಮಲಾದ್ರಿ ಬೃಹನ್ಮಠ್, ಹಿರಿಯ ಪಶು ವೈದ್ಯಕೀಯ ಪರಿವೀಕ್ಷಕರು, ಮಾನ್ಯ ಆಯುಕ್ತರು ರವರ ಕಛೇರಿಯಲ್ಲಿ ದಿನಾಂಕ: 24-10-2016 ರಂದು ಕರ್ತವ್ಯದ ಮೇಲೆ ಹಾಜರಾತಿಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಪಾಲಿಕೆಯಲ್ಲಿ ಹಿರಿಯ ಪಶು ವೈದ್ಯಕೀಯ ಪರಿವೀಕ್ಷಕರ ಹುದ್ದೆ ಖಾಲಿ ಇರುತ್ತದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಶ್ರೀ.ಜಿ.ಚಿನ್ನುಮಲಾದ್ರಿ ಬೃಹನ್ಮಠ್, ಹಿರಿಯ ಪಶು ವೈದ್ಯಕೀಯ ಪರಿವೀಕ್ಷಕರು, ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ಹಿರಿಯ ಪಶುವೈದ್ಯಕೀಯ ಪರಿವೀಕ್ಷಕರ ಹುದ್ದೆಯಲ್ಲಿ ಕರ್ತವ್ಯದ ಮೇಲೆ ತೆಗೆದುಕೊಳ್ಳುವ ಬಗ್ಗೆ ಕಡತವನ್ನು ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿಯ ಮೇರೆಗೆ **ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಡಿ ಪಶುವೈದ್ಯಕೀಯ ವಿಭಾಗ ಕಛೇರಿ ಹಾಗೂ ಸದರಿ ಕಛೇರಿಗೆ ಯಾವುದೇ ಹುದ್ದೆಗಳು ಮಂಜೂರಾಗದೆ ಇದ್ದಾಗ್ಯೂ ಹಲವಾರು ಅಧಿಕಾರಿಗಳು ಪಶುವೈದ್ಯಕೀಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಪಾಲಿಕೆಯ ಅಧೀನದಲ್ಲಿರುವ 04 ವಧಾಗಾರಗಳ ಮೇಲುಸ್ತುವಾರಿ ಹಾಗೂ ಕೋಳಿ ಮತ್ತು ಮಾಂಸದ ಅಂಗಡಿಗಳಿಗೆ ಉದ್ದಿಮೆ ಪರವಾನಗಿ ನೀಡುವ ಕೆಲಸ ಕಾರ್ಯಗಳನ್ನು ಮಾತ್ರ ಈ ವಿಭಾಗದಿಂದ ನಿರ್ವಹಿಸುತ್ತಿದ್ದು, ಪಶು ವೈದ್ಯಕೀಯ ವಿಭಾಗ ಜಾರಿಯಲ್ಲಿ ಇಲ್ಲದ ಸಮಯದಲ್ಲಿ, ಸದರಿಯವರು ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳನ್ನು ಪಾಲಿಕೆಯ ಆರೋಗ್ಯ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿದುದ್ದರಿಂದ, ಪಶುಪಾಲನೆ ವಿಭಾಗದಲ್ಲಿ ಸುಮಾರು 28 ಮಂದಿ ಅಧಿಕಾರಿ / ನೌಕರರುಗಳು ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಸದರಿಯವರುಗಳಿಗೆ ವೇತನ ಹಾಗೂ ಇತರೆ ಭತ್ಯೆಗಳ ಪಾವತಿಯಿಂದಾಗಿ ಪಾಲಿಕೆಗೆ ಆರ್ಥಿಕ ಹೊರೆ ಹೆಚ್ಚಾಗಿರುತ್ತದೆ.**

**ಆದ್ದರಿಂದ, ಅನಗತ್ಯ ಹಾಗೂ ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಪಶುವೈದ್ಯಕೀಯಕ್ಕೆ ಸಂಬಂಧಿಸಿದ ಅಧಿಕಾರಿ/ನೌಕರರುಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಇವರುಗಳ ಅವಶ್ಯಕತೆ ಕಂಡು ಬರುತ್ತಿಲ್ಲವಾದ್ದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗಿ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಗೆ ಸಭೆಯ ಮುಂದೆ ಕಡತವನ್ನು ಮಂಡಿಸುವುದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 22.02.2017ರ ಸಭೆಯ ನಿರ್ಣಯ.**

***-ಮುಂದೂಡಿದೆ-***

## *05]. ವಿಷಯದ ಸಂಖ್ಯೆ: ತೆಆಸ್ಥಾಸ/158/2016-17*

ಆಯುಕ್ತರ ದಿನಾಂಕ: 25-10-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಈ ಕೆಳಕಂಡ ಹಿರಿಯ ಪಶುವೈದ್ಯಕೀಯ ಪರೀಕ್ಷಕರುಗಳನ್ನು ಸದರಿಯವರ ಹೆಸರಿನ ಮುಂದೆ ಸೂಚಿಸಿರುವ ಸರ್ಕಾರದ

ಆದೇಶದಂತೆ ಪಾಲಿಕೆಯಲ್ಲಿ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗೆ ನಿಯೋಜನೆ ಮೇಲೆ ಮರುಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿರುತ್ತಾರೆ.

| ಕ್ರ.ಸಂ. | ಅಧಿಕಾರಿ / ನೌಕರರ ಹೆಸರು | ಹಾಜರಾತಿ ದಿನಾಂಕ | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ |
|---|---|---|---|
| 1 | ಶ್ರೀ ರಮೇಶ್, ಎಸ್.ಟಿ | 06-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 306 ಎಂಎನ್‌ಜಿ 2016, ದಿನಾಂಕ:03-09-2016 |
| 2 | ಶ್ರೀಮತಿ ಕೆ.ಎಸ್.ಸುಧಾಮಣಿ | 01-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 269 ಎಂಎನ್‌ಜಿ 2016, ದಿನಾಂಕ:31-08-2016 |
| 3 | ಶ್ರೀಮತಿ ಬಿ.ಆರ್.ಚಂದ್ರಿಕ | 06-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 268 ಎಂಎನ್‌ಜಿ 2016, ದಿನಾಂಕ:31-08-2016 |
| 4 | ಶ್ರೀ ಬಿ.ರಮೇಶ್ | 06-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 305 ಎಂಎನ್‌ಜಿ 2016, ದಿನಾಂಕ:03-09-2016 |
| 5 | ಶ್ರೀ ಬಿ.ನಾಗೇಶ್ | 08-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 275 ಎಂಎನ್‌ಜಿ 2016, ದಿನಾಂಕ:03-08-2016 |
| 6 | ಶ್ರೀ ವಿ.ನಾರಾಯಣಸ್ವಾಮಿ | 06-09-2016 | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ನಅಇ 307 ಎಂಎನ್‌ಜಿ 2016, ದಿನಾಂಕ:03-09-2016 |

ಪರಿಶೀಲಿಸಲಾಗಿ, ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ ಪಶುವೈದ್ಯಕೀಯ ವಿಭಾಗದಲ್ಲಿ ಯಾವುದೇ ಮಂಜೂರಾದ ಹುದ್ದೆಗಳು ಇರುವುದಿಲ್ಲ. ಆದರೆ, ಈ ಕೆಳಕಂಡಂತೆ ಪಾಲಿಕೆಯ ಪಶುವೈದ್ಯಕೀಯ ವಿಭಾಗದ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಹುದ್ದೆಗಳನ್ನು ಗುರುತಿಸಿ ಈ ಸಂಬಂಧ ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ತಿದ್ದುಪಡಿ ಮಾಡುವ ಸಂಬಂಧ ಕಡತವು ವ್ಯವಹರಣೆಯಲ್ಲಿರುತ್ತದೆ.

| ಕ್ರ. ಸಂ. | ಹುದ್ದೆಗಳ ವಿವರ | ಮಂಜೂರಾಗಬೇಕಾದ ಹುದ್ದೆಗಳ ಸಂಖ್ಯೆ |
|---|---|---|
| 1 | ಜಂಟಿ ನಿರ್ದೇಶಕರು (ಪಶುಪಾಲನೆ) | 01 |
| 2 | ಉಪ ನಿರ್ದೇಶಕರು (ಪಶುಪಾಲನೆ) | 01 |
| 3 | ಸಹಾಯಕ ನಿರ್ದೇಶಕರು (ಪಶುಪಾಲನೆ) | 10 |
| 4 | ಪಶುವೈದ್ಯಾಧಿಕಾರಿಗಳು | 13 |
| 5 | ಜಾನುವಾರು ಅಧಿಕಾರಿಗಳು | 08 |
| 6 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 27 |

ಅದರಂತೆ ಪಾಲಿಕೆಯಲ್ಲಿ ಸದರಿ ಹುದ್ದೆಗಳನ್ನು ಪಶುಪಾಲನೆ ಮತ್ತು ಪಶುಸೇವಾ ಇಲಾಖೆ ವತಿಯಿಂದ ಎರವಲು ಸೇವೆಯ ಮೇಲೆ ನಿಯೋಜಿಸಿಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ. ಪ್ರಸ್ತುತ ಪಾಲಿಕೆಯಲ್ಲಿ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳು ಖಾಲಿ ಇರುತ್ತದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಂತೆ ಸದರಿ ಹಿರಿಯ ಪಶುವೈದ್ಯಕೀಯ ಪರಿವೀಕ್ಷಕರುಗಳನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ಕರ್ತವ್ಯದ ಮೇಲೆ ತೆಗೆದುಕೊಳ್ಳುವ ಬಗ್ಗೆ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿಯ ಮೇರೆಗೆ **ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಡಿ ಪಶುವೈದ್ಯಕೀಯ ವಿಭಾಗ ಕಛೇರಿ ಹಾಗೂ ಸದರಿ ಕಛೇರಿಗೆ ಯಾವುದೇ ಹುದ್ದೆಗಳು ಮಂಜೂರಾಗದೆ ಇದ್ದಾಗ್ಯೂ ಹಲವಾರು ಅಧಿಕಾರಿಗಳು ಪಶುವೈದ್ಯಕೀಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಪಾಲಿಕೆಯ ಅಧೀನದಲ್ಲಿರುವ 04 ವಧಾಗಾರಗಳ ಮೇಲುಸ್ತುವಾರಿ ಹಾಗೂ ಕೋಳಿ ಮತ್ತು ಮಾಂಸದ ಅಂಗಡಿಗಳಿಗೆ ಉದ್ದಿಮೆ ಪರವಾನಗಿ ನೀಡುವ ಕೆಲಸ ಕಾರ್ಯಗಳನ್ನು ಮಾತ್ರ ಈ ವಿಭಾಗದಿಂದ ನಿರ್ವಹಿಸುತ್ತಿದ್ದು, ಪಶು ವೈದ್ಯಕೀಯ ವಿಭಾಗ ಜಾರಿಯಲ್ಲಿ ಇಲ್ಲದ ಸಮಯದಲ್ಲಿ, ಸದರಿಯವರು ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳನ್ನು ಪಾಲಿಕೆಯ ಆರೋಗ್ಯ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿದುದ್ದರಿಂದ, ಪಶುಪಾಲನೆ ವಿಭಾಗದಲ್ಲಿ ಸುಮಾರು 28 ಮಂದಿ ಅಧಿಕಾರಿ / ನೌಕರರುಗಳು ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಸದರಿಯವರುಗಳಿಗೆ ವೇತನ ಹಾಗೂ ಇತರೆ ಭತ್ಯೆಗಳ ಪಾವತಿಯಿಂದಾಗಿ ಪಾಲಿಕೆಗೆ ಆರ್ಥಿಕ ಹೊರೆ ಹೆಚ್ಚಾಗಿರುತ್ತದೆ.**

**ಆದ್ದರಿಂದ, ಅನಗತ್ಯ ಹಾಗೂ ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಪಶುವೈದ್ಯಕೀಯಕ್ಕೆ ಸಂಬಂಧಿಸಿದ ಅಧಿಕಾರಿ/ನೌಕರರುಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಇವರುಗಳ ಅವಶ್ಯಕತೆ ಕಂಡು ಬರುತ್ತಿಲ್ಲವಾದ್ದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗಿ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಗೆ ಸಭೆಯ ಮುಂದೆ ಕಡತವನ್ನು ಮಂಡಿಸುವುದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 22.02.2017ರ ಸಭೆಯ ನಿರ್ಣಯ.**

**_–ಮುಂದೂಡಿದೆ–_**

**_06]. ವಿಷಯದ ಸಂಖ್ಯೆ: ತೆಆಸ್ಥಾಸ/159/2016–17_**

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, Shifting of UGD lines coming in METRO alignment from Adigas Restaurant to Gana Sweekar School Valley on Kanakapuran road form EP No.195 to EP No.320 ವರಗಿನ ಕಾಮಗಾರಿಯ ಅಂದಾಜು ಮೊತ್ತ ರೂ.89.75 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲು ಮುಖ್ಯ ಅಭಿಯಂತರರು (ರಾಜರಾಜೇಶ್ವರಿನಗರ) ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯನ್ನು ಪಾಲಿಕೆ ವತಿಯಿಂದ ಕೈಗೊಳ್ಳಲು Bangalore Metro Rail Corporation Ltd ರವರು ರೂ.89.75 ಲಕ್ಷಗಳ ಚೆಕ್ ಸಂಖ್ಯೆ: 717296, ದಿನಾಂಕ: 25.01.2017ನ್ನು ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಖಾತೆಗೆ ಜಮಾ ಮಾಡಲಾಗಿರುತ್ತದೆ. ತದ ನಂತರ ದಿ.16.02.2017 ರಂದು ಮುಖ್ಯ ಲೆಕ್ಕಾಧಿಕಾರಿಗಳು ಸೂಚಿಸಿರುವಂತೆ ಸದರಿ ಅನುದಾನವನ್ನು ಬ್ಯಾಂಕ್ ಖಾತೆ ಸಂಖ್ಯೆ : 84011320000040ರಲ್ಲಿ ಜಮಾ ಮಾಡಲಾಗಿದೆ. Deposit Contribution works ಕಾಮಗಾರಿಯನ್ನು ಲೆಕ್ಕಶೀರ್ಷಿಕೆ ಪಿ2348 Deposit Contribution works ಅಡಿ ಪರಿಗಣಿಸಬಹುದಾಗಿದೆ ಮತ್ತು ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಅನುಮೋದನೆ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ 2016–17ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–2348ನ ಚಾಲ್ತಿ ಕಾಮಗಾರಿಗಳ ಅಡಿ ರೂ10.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ಪ್ರಸ್ತಾವನೆಯು ರೂ.89.75 ಲಕ್ಷಗಳಿದ್ದು, 2016–17ರ ಲೆಕ್ಕಶೀರ್ಷಿಕೆ ಪಿ2348ರ ಚಾಲ್ತಿ ಕಾಮಗಾರಿಗಳು ಅಡಿ ರೂ.89.75 ಲಕ್ಷಗಳ

ಅನುದಾನ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## ***07]. ವಿಷಯದ ಸಂಖ್ಯೆ: ತೆಆಸ್ಥಾಸ/160/2016–17***

ಆಯುಕ್ತರ ದಿನಾಂಕ: 21–12–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಇಂದಿರಾ ಗಾಂಧಿ ಸ್ಮಾರಕ ದತ್ತಿ ಸಂಸ್ಥೆಗೆ ಪ್ಲೈನ್ ರಸ್ತೆಯಲ್ಲಿರುವ ನಗರಪಾಲಿಕೆಗೆ ಸೇರಿರುವ ಕಟ್ಟಡದ ವಿಸ್ತೀರ್ಣ 152.6 + 153.6/2 x 133 ಒಟ್ಟು 20,362.3 ಚದರ ಅಡಿಗಳ ಈ ಸ್ಥಳವನ್ನು ದಿನಾಂಕ: 15–04–1991 ರಿಂದ ಜಾರಿಗೆ ಬರುವಂತೆ ತಿಂಗಳ ಗುತ್ತಿಗೆ ಬಾಡಿಗೆ ಮೊತ್ತ 1500/– ರೂ.ಗಳ ಆಧಾರದ ಮೇಲೆ 12–ತಿಂಗಳ ಅವಧಿಗೆ ಸಿಮೀತವಾಗುವಂತೆ ಕರಾರು ಪತ್ರದ ಮುಖೇನ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಮೇಲ್ಕಂಡ ಸಂಸ್ಥೆಯವರು ಮಿಲ್ಲರ್ ಕೆರೆ ಅಂಗಳದಲ್ಲಿ ಕಛೇರಿ ಕಟ್ಟಡವನ್ನು ಕಟ್ಟಿಕೊಳ್ಳುವ ಸಲುವಾಗಿ ದಿನಾಂಕ: 29.04.1991 ವಿಷಯದ ಸಂಖ್ಯೆ: 5(41) ರ ನಿರ್ಣಯದ ಪ್ರಕಾರ ಈ ಸಂಸ್ಥೆಯವರಿಗೆ (112+123)/2 x (144+166)/2 (117.5 x 155)= 18,212.5 ಚ. ಅಡಿ ವಿಸ್ತೀರ್ಣವುಳ್ಳ ಖಾಲಿ ಜಾಗವನ್ನು ವಾರ್ಷಿಕ 100/– ಗಳ ಆಧಾರದ ಮೇಲೆ ಗುತ್ತಿಗೆಗೆ ಹಣ ವಿಧಿಸಿ 99–ವರ್ಷಗಳ ದೀರ್ಘಾವಧಿಗೆ ಹಂಚಿಕೆ ಮಾಡಲಾಗಿರುತ್ತದೆ ಹಾಗೂ ಈ ಸ್ಥಳದಲ್ಲಿ ಕಟ್ಟಡ ಕಟ್ಟಿದ ನಂತರ ಪ್ಲೈನ್ ಬೀದಿಯಲ್ಲಿ ಹಂಚಿಕೆ ಮಾಡಿರುವುದನ್ನು ಗುತ್ತಿಗೆ ಅವಧಿ ಮುಗಿದ ನಂತರ ತೆರವು ಮಾಡುವ ನಿಬಂಧನೆಯೊಂದಿಗೆ ಈ ಸಂಸ್ಥೆಗೆ ಹಂಚಿಕೆ ಮಾಡಲಾಗಿರುತ್ತದೆ.

ಮೇಲ್ಕಂಡ ಸಂಸ್ಥೆಯವರು ಗುತ್ತಿಗೆ ಕರಾರು ಪತ್ರದ ಪ್ರಕಾರ ಗುತ್ತಿಗೆ ಅವಧಿ ಪೂರ್ಣಗೊಂಡಿದ್ದರು ಸಹ ತೆರವು ಮಾಡಿರುವುದಿಲ್ಲ ಮತ್ತು ಜನರಲ್ ಸೆಕ್ರೆಟರಿ ಸ್ಟೇಟ್ ಟ್ಯಾಕ್ಸ್ ಪೇಯರ್ಸ್ ವೆಲ್‌ಫೇರ್ ಕೌನ್ಸಿಲ್(ರಿ) ನ ಸದಸ್ಯರು ಸದರಿ ಆಸ್ತಿಯನ್ನು ನಗರ ಪಾಲಿಕೆ ವಶಕ್ಕೆ ತೆಗೆದುಕೊಂಡು ಸಂರಕ್ಷಿಸಲು ಮನವಿ ನೀಡಿರುವುದರಿಂದ ಅರ್ಜಿದಾರರ ಮನವಿಯ ಮೇರೆಗೆ ಹಾಗೂ ಈಗಾಗಲೇ ಒಂದೇ ಸಂಸ್ಥೆಗೆ ಒಂದೇ ವ್ಯಾಪ್ತಿಯಲ್ಲಿ ಎರಡು ಜಾಗಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ವಿಷಯದ ಸಂಖ್ಯೆ:343, ದಿ:27–09–2001 ರಂದು ನಡೆದ ಪಾಲಿಕೆ ಸಭೆಯ ನಿರ್ಣಯದಲ್ಲಿ ಸದರಿ ಸಂಸ್ಥೆಯೂ ಒಂದು ಉನ್ನತ ಸಂಸ್ಥೆಯಾಗಿದ್ದು, ಸಮಾಜ ಸೇವಾ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿರುವ ಹಿನ್ನಲೆಯಲ್ಲಿ ಪಾಲಿಕೆಯಲ್ಲಿ ಸದರಿ ಕಟ್ಟಡವನ್ನು 30–ವರ್ಷಗಳ ಗುತ್ತಿಗೆ ಆಧಾರದ ಮೇಲೆ ನೀಡುವುದು ಹಾಗೂ ಗುತ್ತಿಗೆ ಮೊತ್ತ 1500/– ಬದಲು ಮಾಸಿಕ 3000/– ರೂ.ಗಳ ಗುತ್ತಿಗೆ ಹಣ ನಿಗದಿಪಡಿಸಿ ಗುತ್ತಿಗೆ ನೀಡಲು ಒಪ್ಪುವುದೆಂದು ತೀರ್ಮಾನಿಸಿರುತ್ತದೆ. ಈ ತೀರ್ಮಾನದ ನಿರ್ಣಯವನ್ನು ಸರ್ಕಾರದ ಅನುಮೋದನೆ ಕೋರಿ,ದಿನಾಂಕ:05–07–2002 ರಂದು ಪತ್ರದ ಸಂಖ್ಯೆ:ಎ3(2)/ಪಿಆರ್/14/2002–03 ರಲ್ಲಿ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ರವರನ್ನು ಕೋರಲಾಗಿತ್ತು. ತದನಂತರ ವಿಷಯದ ಸಂಖ್ಯೆ:343, ದಿ: 27.09.2001 ರಂದು ನಡೆದ ಮಹಾನಗರ ಪಾಲಿಕೆಯ ಸಭೆಯ ತೀರ್ಮಾನವನ್ನು ರದ್ದುಪಡಿಸಲು ಕೋರಿ ಮಾನ್ಯ ಆಡಳಿತಗಾರರ ಮುಂದೆ ದಿನಾಂಕ:16–12–2009 ರಲ್ಲಿ ಟಿಪ್ಪಣಿ ಮಂಡಿಸಿರುತ್ತಾರೆ. ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ: 08–01–2010ರ ನಡವಳಿಯ ವಿಷಯದ ಸಂಖ್ಯೆ:496/2009–10ರ ಪ್ರಸ್ತಾವನೆಯಂತೆ ಮಾನ್ಯ ಆಡಳಿತಗಾರರು ಈ ರೀತಿ ತೀರ್ಮಾನ ನೀಡಿರುತ್ತಾರೆ. Approved as proposed. However such cases should not be dealt with in isolation, meaning that similar cases be brought up by collecting information from the subordinate offices

and similar decision should be taken in such cases. ಎಂಬುದಾಗಿ ಮಾನ್ಯ ಆಡಳಿತಗಾರರು ನಿರ್ಣಯವನ್ನು ಸರ್ಕಾರದ ಅನುಮತಿ ಪಡೆಯಲು ದಿನಾಂಕ: 19-01-2010 ರಂದು ಪತ್ರದ ಸಂಖ್ಯೆ: ಎ3(2)/ಪಿಆರ್/14/2002-03ರ ಪತ್ರ ರವಾನಿಸಿರುತ್ತಾರೆ.

ಸದರಿ ಕಟ್ಟಡಕ್ಕೆ ದಿನಾಂಕ: 15-10-1992 ರಿಂದ ಮಾರ್ಗಸೂಚಿ ದರಗಳಂತೆ ಗುತ್ತಿಗೆ ಮೊತ್ತ ಮಾಸಿಕ ರೂ.1500/-ಗಳ ಬದಲು ಮಾಸಿಕ ಗುತ್ತಿಗೆ ಮೊತ್ತ ರೂ.3000/- ಗಳಿಗೆ ನಿಗಧಿಪಡಿಸಲಾಗಿರುತ್ತದೆ. ದಿನಾಂಕ:12-08-2013 ರಿಂದ 12.01.2014 ರ ಮಾರ್ಗಸೂಚಿ ದರ ರೂ.4000/- ಶೇ:40% ರಷ್ಟು ಹೆಚ್ಚಿಸಿದಾಗ (4000+1600)=ರೂ.5600/-) ಹಾಗೂ ಪ್ರಸ್ತುತದಲ್ಲಿ ಮಾರ್ಗಸೂಚಿ ದರ ರೂ.49800/- ಶೇ:40% ರಷ್ಟು ಹೆಚ್ಚಿಸಿದಾಗ (49800+19920) = ರೂ.69720/-ಗಳಾಗಿರುತ್ತದೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು ರವರು ದಿನಾಂಕ:18-02-2012 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಪತ್ರ ಬರೆದು ದಿ:27-09-2001 ರಂದು ವಿಷಯ ಸಂಖ್ಯೆ:343 ರಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಾಧಿಕಾರಿಗಳು ದಿ:08-01-2010 ರಂದು ವಿಷಯದ ಸಂಖ್ಯೆ:496/2010 ರಲ್ಲಿ ರದ್ದುಪಡಿಸಿರುವ ನಿರ್ಣಯದನ್ವಯ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ನಿರ್ದೇಶಿಸಿರುತ್ತಾರೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ದಿ: 02-06-2003, ಪಾಲಿಕೆಯ ಸುತ್ತೋಲೆ ಸಂಖ್ಯೆ: ಎ3(4)/ಪಿಆರ್/119/ 2012-13, ದಿನಾಂಕ: 01-07-2013 ರಂತೆ ಗುತ್ತಿಗೆ ಆಧಾರದ ಮೇಲೆ ನೀಡಿರುವ ಸ್ವತ್ತುಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು, ಈ ಸಂಬಂಧ ಬೆಂಗಳೂರು ಮಹಾನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಪಾಲಿಕೆ ದಿ:03-06-2016 ರಂದು ಮನವಿ ಸಲ್ಲಿಸಿ ಗುತ್ತಿಗೆ ಅವಧಿಯನ್ನು ಮುಂದಿನ 30-ವರ್ಷಗಳ ಕಾಲಾವಧಿಗೆ ನವೀಕರಿಸಲು ಕೋರಿರುವ ಮೇರೆಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿ ಹಾಗೂ ನಗರ ಪಾಲಿಕೆಯ ಸಭೆ ಮುಂದೆ ವಲಯಾಧಿಕಾರಿಗಳು ಮಂಡಿಸಿರುವ ಟಿಪ್ಪಣಿಯನ್ನು ಮಾನ್ಯ ಆಯುಕ್ತರು ದಿನಾಂಕ:06-09-2016 ರಂದು ಒಪ್ಪಿ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿಸಮಿತಿ ಮುಂದೆ ಮಂಡಿಸಲಾಗಿ, ವಿಷಯದ ಸಂಖ್ಯೆ:ನಯೋಸ್ಥಾಸ/16/2016-17, ದಿ:20-08-2016 ರಂದು ನಡೆದ ಸಭೆಯಲ್ಲಿ ಗುತ್ತಿಗೆ ನವೀಕರಣ ಕುರಿತಂತೆ ಸರ್ಕಾರದ ಹಂತದಲ್ಲಿಯೇ ತೀರ್ಮಾನಿಸಲು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಮಿತಿಯು ತೀರ್ಮಾನಿಸಿದ್ದು, ವಿಷಯದ ಸಂಖ್ಯೆ:ತೆಆಸ್ಥಾಸ/55/2016-17, ದಿ:22-08-2016ರ ಸಭೆಯಲ್ಲಿ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿಸಮಿತಿಯ ತೀರ್ಮಾನವನ್ನು ಒಪ್ಪುವುದೆಂದು ತೀರ್ಮಾನಿಸಿ ಬಿಬಿಎಂಪಿ ಸಭೆ ಮುಂದೆ ಟಿಪ್ಪಣಿ ಮಂಡಿಸಲಾಗಿ, ವಿಷಯದ ಸಂಖ್ಯೆ:01(232)2016-17,

ದಿ:26-08-2016 ರಂದು ನಡೆದ ಸಭೆಯಲ್ಲಿ ದಿನಾಂಕ:22-08-2016ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಗಿದೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ದಿನಾಂಕ:02-06-2003 ರಲ್ಲಿ ಹರಾಜಿನ ಮೂಲಕವೇ ವಿಲೇವಾರಿ ಮಾಡಬೇಕೆಂಬ ನಿಬಂಧನೆಯನ್ನು ಸಡಿಲಿಸಿ ವಾರ್ಡ್ ನಂ:110(ಹಳೇ ವಾರ್ಡ್ ನಂ:78) ಶಿವಾಜಿನಗರ, ಸಂಪಂಗಿರಾಮನಗರ, ಫ್ಲೈನ್ ರಸ್ತೆ ವ್ಯಾಪ್ತಿಯಲ್ಲಿರುವ ಆಸ್ತಿ ಸಂಖ್ಯೆ:7/1 ರಲ್ಲಿನ ನಗರಪಾಲಿಕೆಯ ಕಟ್ಟಡವನ್ನು ಇಂಧಿರಾ ಗಾಂಧಿ ಸ್ಮಾರಕ ದತ್ತಿ ಸಂಸ್ಥೆಗೆ ನೀಡಿರುವ ಗುತ್ತಿಗೆ ಅವಧಿಯನ್ನು 30 ವರ್ಷಗಳಿಗೆ ನವೀಕರಿಸಲು ಹಾಗೂ ವಾರ್ಷಿಕ ಗುತ್ತಿಗೆ ದರ ರೂ.69,720/-ಗಳಿಗೆ ನಿಗಧಿಪಡಿಸಲು ಸರ್ಕಾರವು ಅನುಮೋದನೆ ನೀಡಿದೆ.

ಆದುದರಿಂದ, ಸರ್ಕಾರದ ಆದೇಶವನ್ನು ಸ್ಥಾಯಿಸಮಿತಿಗಳು ಹಾಗೂ ಬಿಬಿಎಂಪಿ ಸಭೆಯಲ್ಲಿ ದಾಖಲಾತಿ ಮಾಡಿಕೊಳ್ಳುವ ಸಲುವಾಗಿ ಮುಂದಿನ ಸೂಕ್ತ ನಿರ್ಣಯಕ್ಕೆ ಮಂಡಿಸಿರುವ **ದಿನಾಂಕ: 21-12-2016 ರ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ಸರ್ಕಾರದ ಆದೇಶ ಸಂಖ್ಯೆ: ನಅಇ370ಎಂ.ಎನ್.ಜಿ.2016, ದಿನಾಂಕ: 06.12.2016ರ ಆದೇಶವನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 16.02.2017ರ ಸಭೆಯ ನಿರ್ಣಯ.**

**ನಿರ್ಣಯ: ಆಯುಕ್ತರ ದಿನಾಂಕ: 21.12.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***08]. ವಿಷಯದ ಸಂಖ್ಯೆ: ತೆಆಸ್ಥಾಸ/161/2016-17***

ಆಯುಕ್ತರ ದಿನಾಂಕ: 09-01-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿ (ಪುಲಿಕೇಶಿನಗರ) ಉಪ ವಿಭಾಗದ ವಾರ್ಡ್-61, ಎಸ್.ಕೆ.ಗಾರ್ಡನ್ ವ್ಯಾಪ್ತಿಯಲ್ಲಿರುವ ವಿಲಿಯಮ್ಸ್ ಟೌನ್‌ನಲ್ಲಿರುವ ಪಾಲಿಕೆ ವಸತಿ ಗೃಹಗಳನ್ನು ಆಯಾ ವಸತಿ ಗೃಹದಲ್ಲಿ ವಾಸಿಸುತ್ತಿದ್ದ ನಿವಾಸಿಗಳಿಗೆ ಹಂಚಿಕೆ ಮಾಡಿ, ಕ್ರಯಕ್ಕೆ ನೀಡಲು ಈ ಹಿಂದೆ ಸರ್ಕಾರವು ಆದೇಶ ಸಂಖ್ಯೆ:ಹೆಚ್‌ಯುಡಿ 251 ಎಂಎನ್‌ಜಿ 77 ದಿನಾಂಕ:18-05-1978 ರಲ್ಲಿ ಅನುಮೋದನೆ ನೀಡಿರುತ್ತದೆ.

ಸರ್ಕಾರದ ಆದೇಶದ ಅನ್ವಯ ಈ ಪ್ರದೇಶದಲ್ಲಿನ ಪಾಲಿಕೆ ವಸತಿ ಗೃಹಗಳನ್ನು ಆಯಾ ಹಂಚಿಕೆದಾರರು/ ವಾರಸ್ಸುದಾರರಿಗೆ ನಿಗಧಿತ ಶುಲ್ಕವನ್ನು ಪಡೆದು ಕ್ರಯಪತ್ರವನ್ನು ನೊಂದಾಯಿಸಿ ಕೊಡಲಾಗಿರುತ್ತದೆ. ಈ ಪ್ರಕರಣದಲ್ಲಿ ವಸತಿ ಗೃಹದ ಸಂಖ್ಯೆ:50, ವಿಲಿಯಮ್ಸ್ ಟೌನ್‌ನಲ್ಲಿರುವ ವಸತಿ ಗೃಹವನ್ನು ಲಭ್ಯವಿರುವ ದಾಖಲೆಗಳಂತೆ ಶ್ರೀ.ಪಿ.ವಿ.ಸುಬ್ರಮಣಿಯಮ್ ಎಂಬುವವರಿಗೆ ಹಂಚಿಕೆ ಆಗಿರುವುದು ಕಂಡು ಬಂದಿರುತ್ತದೆ. ಇವರಿಗೆ ಸರ್ಕಾರವು ನಿಗಧಿಪಡಿಸಿರುವ ಕ್ರಯದ ಮೊತ್ತ ರೂ.11,913/- ಗಳನ್ನು ಪಾವತಿಸಲು 1978ನೇ ಸಾಲಿನಲ್ಲಿ ಮತ್ತು ತದನಂತರ ದಿನಾಂಕ:05-03-1998 ರಲ್ಲಿ ಅಂತಿಮ ಹಿಂಬರಹವನ್ನು ಜಾರಿಗೊಳಿಸಿದ್ದು, ಈ ತಹಲ್‌ವರೆವಿಗೆ ನಿಗಧಿತ ಕ್ರಯದ ಮೊತ್ತವನ್ನು ಪಾವತಿಸದೇ ಇರುವುದು ಕಂಡು ಬಂದಿರುತ್ತದೆ.

ಶ್ರೀಮತಿ.ಸುಬ್ಬಲಕ್ಷ್ಮೀ ಎಂಬುವರು ಮನವಿ ಸಲ್ಲಿಸಿ, ಈ ವಸತಿ ಗೃಹವು ಅವರ ಗಂಡನಾದ ಸುಬ್ಬರಾಮನ್ ಎಂಬುವರಿಗೆ ಹಂಚಿಕೆಯಾಗಿರುವುದಾಗಿಯೂ ಈ ಕಛೇರಿಯಲ್ಲಿ ಹಂಚಿಕೆದಾರರ ಹೆಸರು ತಪ್ಪಾಗಿ ಪಿ.ವಿ.ಸುಬ್ರಮಣಿಯಮ್ ಎಂದು ದಾಖಲಾಗಿರುವುದಾಗಿ ತಿಳಿಸಿ, ಸದರಿ ವಸತಿ ಗೃಹಕ್ಕೆ ನಿಗಧಿತ ಕ್ರಯದ ಮೊತ್ತವನ್ನು ಪಾವತಿಸಲು ಸಿದ್ಧರಿರುವುದಾಗಿ ತಿಳಿಸಿ ಇತರೆ ವಾರಸುದಾರರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು ಇವರ ಹೆಸರಿಗೆ ಕ್ರಯಪತ್ರವನ್ನು ನೊಂದಾಯಿಸಿಕೊಡಲು ಕೋರಿರುತ್ತಾರೆ.

ಈ ಪ್ರದೇಶದಲ್ಲಿ ಪಾಲಿಕೆಯಿಂದ ಹಂಚಿಕೆ ಮಾಡಿರುವ ವಸತಿ ಗೃಹಗಳಿಗೆ ಕ್ರಯದ ಮೊತ್ತವನ್ನು ಪಾವತಿಸಿ ಕ್ರಯಪತ್ರ ಪಡೆಯಲು ಸರ್ಕಾರವು ನಿಗಧಿಪಡಿಸಿದ ಅವಧಿಯು ಮುಕ್ತಾಯಗೊಂಡಿರುತ್ತದೆ.

ಆದ ಕಾರಣ ಕಾನೂನು ಕೋಶದ ಅಭಿಪ್ರಾಯ ಕೋರಲಾಗಿದ್ದು, ಕಾನೂನು ಕೋಶದ ಮುಖ್ಯಸ್ಥರು ಸದರಿ ಸ್ವತ್ತು ಪಾಲಿಕೆಯ ಸ್ವತ್ತಾಗಿದ್ದು, ಪಾಲಿಕೆಯ ಆರ್ಥಿಕ ಹಿತದೃಷ್ಟಿಯನ್ನು ಗಮನದಲ್ಲಿ ಇರಿಸಿಕೊಂಡು ದರದ ಪರಿಷ್ಕರಣೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕಾಗಿರುವುದರಿಂದ ಆಸ್ತಿ ವಿಭಾಗದ ಅಭಿಪ್ರಾಯ ಪಡೆದು ತದ ನಂತರ ಸಕ್ಷಮ ಪ್ರಾಧಿಕಾರದ ಹಾಗೂ ಸಂಬಂಧಪಟ್ಟ ಪಾಲಿಕೆಯ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿ ಮಂಡಿಸಿ ಅನುಮತಿ ಹಾಗೂ ಅನುಮೋದನೆಯನ್ನು ಪಡೆದುಕೊಂಡು ಅರ್ಜಿದಾರರಾದ

ಶ್ರೀಮತಿ.ಸುಬ್ಬಲಕ್ಷ್ಮೀ ರವರ ಹೆಸರಿಗೆ ಕ್ರಯಪತ್ರ ನೊಂದಾಯಿಸಿಕೊಡುವ ಕುರಿತು ನಿರ್ಧರಿಸಬಹುದಾಗಿ ಅಭಿಪ್ರಾಯಿಸಿರುತ್ತಾರೆ.

ಸರ್ಕಾರದ ಆದೇಶದ ಅನ್ವಯ ನಿಗಧಿತ ಅವಧಿಯೊಳಗಾಗಿ ವಿಲಿಯಮ್ಸ್ ಟೌನ್‌ನಲ್ಲಿರುವ ವಸತಿ ಗೃಹದ ಸಂಖ್ಯೆ:50ನೇ ಸಂಖ್ಯೆಯ ವಸತಿ ಗೃಹಕ್ಕೆ ನಿಗಧಿತ ಕ್ರಯದ ಮೊಬಲುಗಳನ್ನು ಹಂಚಿಕೆದಾರರು ಪಾವತಿಸದ ಕಾರಣ ಹಾಗೂ ಹಂಚಿಕೆದಾರರು ಮರಣ ಹೊಂದಿರುವುದಾಗಿಯೂ ಮತ್ತು ಅವರ ವಾರಸ್ಸುದಾರರೆಂಬುದಾಗಿ ತಿಳಿಸಿ ಸದರಿ ವಸತಿ ಗೃಹದಲ್ಲಿ ಸುಮಾರು ವರ್ಷಗಳಿಂದ ವಾಸ ಮಾಡುತ್ತಿರುವ ಶ್ರೀಮತಿ.ಸುಬ್ಬಲಕ್ಷ್ಮೀ ರವರು ಮನವಿಯಲ್ಲಿ ಇತರೆ ವಾರಸುದಾರರ ನಿರಾಪೇಕ್ಷಣಾ ಪತ್ರದಂತೆ ಕ್ರಯದ ಮೊತ್ತವನ್ನು ಪಾವತಿಸಿಕೊಂಡು ಅವರ ಹೆಸರಿಗೆ ಕ್ರಯಪತ್ರವನ್ನು ನೊಂದಾಯಿಸಿಕೊಡಲು ಕೋರಿರುವ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ವಿಲಿಯಮ್ಸ್ ಟೌನ್‌ನಲ್ಲಿರುವ ವಸತಿ ಗೃಹದ ಸಂಖ್ಯೆ:50ನೇ ಸಂಖ್ಯೆಯ ವಸತಿ ಗೃಹಕ್ಕೆ ಪಾಲಿಕೆಯ ಆರ್ಥಿಕ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಕಾಲ ವಿಳಂಬ ಮನ್ನಾ ಮಾಡಿ, ಹಾಲಿ ಇರುವ ಮಾರುಕಟ್ಟೆ ದರಗಳ ಹಾಗೂ ಸರ್ಕಾರದ ಆದೇಶಗಳ ಅನ್ವಯ ಪರಿಗಣಿಸಿ ಕ್ರಯದ ಮೊತ್ತವನ್ನು ನೊಂದಾಯಿಸಿ ಕೊಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆ ಮುಖಾಂತರ ಸರ್ಕಾರದ ಅನುಮೋದನೆ ಪಡೆಯಬೇಕಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ, **ದಿನಾಂಕ: 09-01-2017ರ ಮಾನ್ಯ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಾನವಿಯತೆಯ ದೃಷ್ಟಿಯಿಂದ ಶ್ರೀಮತಿ ಸುಬ್ಬಲಕ್ಷ್ಮೀ ನಂ.50 ವಿಲಿಯಮ್ಸ್ ಟೌನ್‌ನಲ್ಲಿರುವ ವಸತಿ ಗೃಹಕ್ಕೆ ಕ್ರಯಪತ್ರ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 16.02.2017ರ ಸಭೆಯ ನಿರ್ಣಯ.**

**_-ಮುಂದೂಡಿದೆ-_**

### *09]. ವಿಷಯದ ಸಂಖ್ಯೆ: ತೆಆಸ್ಥಾಸ/162/2016-17*

ಆಯುಕ್ತರ ದಿನಾಂಕ: 28-12-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀಮತಿ ವೆಳ್ಳಿಯಮ್ಮ ಕೋಂ ಲೇಟ್ ಆಲ್ಬರ್ಟ್, ನಂ:08/16, 14ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ಇವರಿಗೆ ದೊಮ್ಮಲೂರು ರಿಂಗ್ ರಸ್ತೆ ಬಳಿ ನಿರ್ಮಿಸಲಾಗುತ್ತಿರುವ ಬಿ.ಎಂ.ಟಿ.ಸಿ ಬಸ್ ನಿಲ್ದಾಣದ ಪಕ್ಕದಲ್ಲಿ ಕೋರಮಂಗಲ ಮತ್ತು ಛಲಘಟ್ಟ ಕಡೆಗೆ ಹೋಗುವ ಈ ಎರಡು ರಸ್ತೆಗಳು ಕೊಡುವ ಸ್ಥಳದಲ್ಲಿ 10x10 ಅಡಿಗಳ ಜಾಗವನ್ನು ನಂದಿನಿ ಹಾಲಿನ ಕೇಂದ್ರ ತೆರೆಯಲು ಕೋರಿರುತ್ತಾರೆ.

ಅಮರ ಜ್ಯೋತಿ ಬಡಾವಣೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪಾಲಿಕೆಗೆ ಆಡಳಿತ ನಿರ್ವಹಣೆಗಾಗಿ ದಿನಾಂಕ:01-10-2005 ರಿಂದ ಜಾರಿಗೆ ಬರುವಂತೆ ಹಸ್ತಾಂತರಗೊಂಡಿರುವುದಾಗಿ ಈ ಜಾಗ ಪಾಲಿಕೆಯ ಆಸ್ತಿಯಾಗಿರುತ್ತದೆಯೆಂದು ವಲಯ ಕಂದಾಯ ಪರಿವೀಕ್ಷಕರು ವರದಿಸಿರುತ್ತಾರೆ.

ಪ್ರಸ್ತಾಪಿತ ಆಸ್ತಿಯ ಬಗ್ಗೆ ಆಸ್ತಿ ವಿಭಾಗದ ಸರ್ವೇಯರ್ ರವರ ವರದಿ ಕೋರಲಾಗಿ ಈ ಸ್ವತ್ತು ಮೂಲತಃ ದೊಮ್ಮಲೂರು ಗ್ರಾಮದ ಸರ್ವೆ ನಂ.68/1ರ ಪೈಕಿ ಜಾಗವಾಗಿದ್ದು, ಲಭ್ಯವಿರುವ ದಾಖಲೆಗಳಾದ ಅಮರಜ್ಯೋತಿ ನಕ್ಷೆ ಹಾಗೂ ಅಮರಜ್ಯೋತಿ ಬಡಾವಣೆಗೆ ಭೂಸ್ವಾಧೀನವಾಗಿರುವ ಜಮೀನುಗಳಂತೆ ಅಮರಜ್ಯೋತಿ ಬಡಾವಣೆ ನಕ್ಷೆಯಂತೆ ಪಾರ್ಕ್‌ಗೆ ಮೀಸಲಿರಿಸಿರುವ ಜಾಗದ ಪೈಕಿ ಪ್ರದೇಶವಾಗಿರುತ್ತದೆ ಎಂದು ನಕ್ಷೆಯೊಂದಿಗೆ ವರದಿಸಿರುತ್ತಾರೆ.

ಈ ಮೇಲಿನ ಹಿನ್ನಲೆಯಲ್ಲಿ ದಿನಾಂಕ:01-07-2013ರ ಸುತ್ತೋಲೆಯನ್ವಯ ವಲಯ ಅಪರ / ಜಂಟಿ ಆಯುಕ್ತರ ಮಟ್ಟದಲ್ಲಿಯೇ ತಿರಸ್ಕರಿಸಿ ಅರ್ಜಿದಾರರಿಗೆ ಹಿಂಬರಹ ನೀಡಿ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ತದ ನಂತರ ತೋಟಗಾರಿಕೆ ಅಧೀಕ್ಷಕರು (ಪೂರ್ವ) ರವರು ಸದರಿ ಜಾಗವು ಉದ್ಯಾನವನಕ್ಕಾಗಿ ಮೀಸಲಿಟ್ಟ ಸ್ಥಳವಾದ್ದರಿಂದ ಸದರಿ ಜಾಗದಲ್ಲಿ ಯಾವುದೇ ಮಳಿಗೆ ನಡೆಸಲು ಅವಕಾಶವಿಲ್ಲವೆಂದು Preservation Actನ ಪ್ರತಿಯನ್ನು ಲಗತ್ತಿಸಿ ವರದಿಸಿರುವ ಮೇರೆಗೆ ಜಂಟಿ ಆಯುಕ್ತರು (ಪೂರ್ವ) ರವರು ಮರು ಪರಿಶೀಲಿಸಲು ಕೋರಿರುತ್ತಾರೆ.

ಪ್ರಸ್ತಾಪಿತ ಆಸ್ತಿಯ ಸ್ವತ್ತಿನ ಅಳತೆ 10x10ಅಡಿ =100 ಚದರಡಿ /10.76=9.29 ಚದರ ಮೀಟರ್‌ಗಳಾಗಿದ್ದು, ಮಾರುಕಟ್ಟೆ ಮೌಲ್ಯ ದಿನಾಂಕ:01-04-2016 ರಂತೆ ಚದರಡಿ ಒಂದಕ್ಕೆ 7695/- ರೂಗಳಾಗಿದ್ದು, ವಾಣಿಜ್ಯಕ್ಕೆ ಶೇ40% ರಷ್ಟು ರೂ.3078/- ಒಟ್ಟಾರೆ ಚದರಡಿ ಒಂದಕ್ಕೆ ರೂ.10773/- ಗಳಾಗಿರುತ್ತದೆ. ಸ್ವತ್ತಿನ ಮೌಲ್ಯ 10773 x100=1077300/- ರೂಗಳಾಗುತ್ತದೆ. ಶೇ10% ರಂತೆ ಪರಿಗಣಿಸಿದ್ದಲ್ಲಿ ವಾರ್ಷಿಕ ರೂ. 107730/- ಮಾಸಿಕ 8977.5 ರೌಂಡೆಡ್ 89778/- ರೂಗಳಾಗುತ್ತದೆ.

ಆದರೆ, ಎ3(4)ಪಿಆರ್/119/12-13, ದಿನಾಂಕ:01-07-2013ರ ಸುತ್ತೋಲೆಯನ್ವಯ ಪಾದಚಾರಿ ರಸ್ತೆ ಸರ್ಕಾರಿ ಅಧಿಸೂಚನೆಗಳಲ್ಲಿ ಪ್ರಕಟಗೊಂಡಿರುವ ಆಟದ ಮೈದಾನ, ಉದ್ಯಾನವನ ಮತ್ತು ತೆರೆದ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ಸುತ್ತೋಲೆಗಳನ್ವಯ ಅನುಮತಿ ನೀಡಲು ಅವಕಾಶವಿರುವುದಿಲ್ಲ.

ದಿನಾಂಕ:02-06-2003ರ ಸುತ್ತೋಲೆ ಕ್ರಮ ಸಂಖ್ಯೆ:VI ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು. ಮೇಲ್ಕಾಣಿಸಿದ ಮಾರ್ಗಸೂಚಿಗಳನ್ನು ಉಲ್ಲಂಘಿಸತಕ್ಕದ್ದಲ್ಲ ಎಂದಿದೆ. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿಯವರ ಮನವಿಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲವೆಂಬ ಅಂಶವನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ, **ದಿನಾಂಕ: 28-12-2016ರ ಮಾನ್ಯ ಆಯುಕ್ತರು ಟಿಪ್ಪಣಿಯನ್ನು ಪರಿಶೀಲಿಸಲಾಗಿ ಶ್ರೀಮತಿ ವೆಳ್ಳಿಯಮ್ಮ ಕೋಂ ಲೇ.ಆಲ್ಬರ್ಟ್ ರವರ ಜೀವನೋಪಾಯದ ಹಿತದೃಷ್ಟಿಯಿಂದ 10*10 ಅಳತೆಯ ಜಾಗವನ್ನು 5ವರ್ಷಗಳ ಅವದಿಗೆ ಗುತ್ತಿಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 16.02.2017ರ ಸಭೆಯ ನಿರ್ಣಯ.**

***-ಮುಂದೂಡಿದೆ-***

***10]. ವಿಷಯದ ಸಂಖ್ಯೆ: ತೆಆಸ್ಥಾಸ/163/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26-12-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ಸಂಖ್ಯೆ: 104 ಗೋವಿಂದರಾಜನಗರ ವಾರ್ಡ್ ವ್ಯಾಪ್ತಿಯಲ್ಲಿನ ಬಿಬಿಎಂಪಿ ಸಮುದಾಯ ಭವನವನ್ನು ಶ್ರೀ ಗೋವಿಂದರಾಜ ಸ್ವಾಮಿ ಮತ್ತು ಶ್ರೀ ಪೂಜಮ್ಮ ತಾಯಿ ದೇವಸ್ಥಾನದ ಟ್ರಸ್ಟ್ ರವರಿಗೆ ಪಾಲಿಕೆ ಸಭೆ ದಿನಾಂಕ: 28-01-2015ರ ವಿಷಯದ ಸಂಖ್ಯೆ: 286/14-15 ರಂತೆ 5 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡುವ ಬಗ್ಗೆ ತೀರ್ಮಾನಿಸಿರುವುದು ಕಂಡುಬಂದಿರುತ್ತದೆ. ಸದರೀ ತೀರ್ಮಾನದಂತೆ ಕ್ರಮವಹಿಸುವ ಬಗ್ಗೆ ಆಸ್ತಿ ವಿಭಾಗದ ವರದಿ ಕಂಡಿಕೆ 28 ರಿಂದ 35 ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಇ129 ಟಿಎಂಡಿ

2002 ದಿನಾಂಕ: 02–06–2003 ಹಾಗೂ ಆಯುಕ್ತರ ಸುತ್ತೋಲೆ ಸಂಖ್ಯೆ: ಎ3(4)ಪಿಆರ್/119/12–13 ದಿನಾಂಕ: 01–07–2013ರಂತೆ ಸಾರ್ವಜನಿಕ ಹರಾಜು ಮೂಲಕ ಗುತ್ತಿಗೆ ನೀಡುವ ಬಗ್ಗೆ ಕ್ರಮವಹಿಸುವಂತೆ ವರದಿಸಿದ್ದು ಪ್ರಸ್ತಾವನೆ ಸಲ್ಲಿಸಿರುತ್ತಾರೆ ಹಾಗೂ ಕಂದಾಯ ಅಧಿಕಾರಿಗಳು ಕೂಡ ಮೇಲ್ಕಂಡ ಸುತ್ತೋಲೆ ಮತ್ತು ಸರ್ಕಾರದ ಆದೇಶ ಹಾಗೂ ಈಗಾಗಲೇ ದಿನಾಂಕ: 28–01–2015ರಂದು ಪಾಲಿಕೆಯ ಸಭೆಯಲ್ಲಿ ಐದು ವರ್ಷಗಳ ಅವಧಿಗೆ ಶ್ರೀ ಗೋವಿಂದರಾಜ್ ಸ್ವಾಮಿ ಮತ್ತು ಶ್ರೀ ಪೂಜಮ್ಮ ತಾಯಿ ದೇವಸ್ಥಾನದ ಟ್ರಸ್ಟ್‌ಗೆ ಗುತ್ತಿಗೆ ನೀಡಲು ಪಾಲಿಕೆಯ ಸಭೆಯಲ್ಲಿ ತೀರ್ಮಾನಿಸಿರುತ್ತಾರೆ.

ಸದರಿ ಪ್ರಸ್ತಾವನೆಯ ಬಗ್ಗೆ ಕಾನೂನು ಕೋಶ ಮುಖ್ಯಸ್ಥರು ದಿನಾಂಕ: 11–11–2016ರಂದು ಈ ಕಡತವನ್ನು ಪರಿಶೀಲಿಸುವುದಾಗಿ ಸಂಬಂಧಪಟ್ಟ ಸ್ಥಾಯಿ ಸಮಿತಿಯ ಮುಂದೆ ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ ಹಾಗೂ ಪಾಲಿಕೆಯ ಸಭೆಯ ಮುಂದೆ ಮರು ಪ್ರಸ್ತಾವನೆಯನ್ನು ಸಲ್ಲಿಸಲು ನೀರ್ದೇಶಿರುತ್ತಾರೆ.

ಸದರಿ ಪ್ರಸ್ತಾವನೆಯ ಬಗ್ಗೆ ಈಗಾಗಲೇ ಸಭೆಯಲ್ಲಿ ನಿರ್ಣಯವನ್ನು ಕೈಗೊಡಿರುವುದರಿಂದ ವಿಷಯವನ್ನು ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ, **ದಿನಾಂಕ: 26–12–2016ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ವಾರ್ಡ್ ಸಂಖ್ಯೆ: 104, ಗೋವಿಂದರಾಜನಗರ ವಾರ್ಡ್ ವ್ಯಾಪ್ತಿಯಲ್ಲಿನ ಬಿ.ಬಿ.ಎಂ.ಪಿ. ಸಮುದಾಯ ಭವನವನ್ನು ಶ್ರೀ ಗೋವಿಂದರಾಜ ಸ್ವಾಮಿ ಮತ್ತು ಪೂಜಮ್ಮ ತಾಯಿ ದೇವಸ್ಥಾನದ ಟ್ರಸ್ಟ್ ರವರಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 16.02.2017ರ ಸಭೆಯ ನಿರ್ಣಯ.**

***–ಮುಂದೂಡಿದೆ–***

## *11]. ವಿಷಯದ ಸಂಖ್ಯೆ: ತೆಆಸ್ಥಾಸ/164/2016–17*

ಆಯುಕ್ತರ ದಿನಾಂಕ: 25.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ:ನಅಇ 449 ಬೆಂಅಸೇ 2016, ಬೆಂಗಳೂರು ದಿನಾಂಕ: 14–09–2016ರ ಸರ್ಕಾರದ ಆದೇಶದನ್ವಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಶದಲ್ಲಿರುವ 60 ಕೆರೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲು ಸರ್ಕಾರವು ಆದೇಶ ಮಾಡಿರುತ್ತದೆ.

ಸರ್ಕಾರದ ಆದೇಶದಲ್ಲಿ ನಮೂದಿಸಿರುವ ಕೆರೆಗಳು ಕೆಳಕಂಡಂತೆ ಇರುತ್ತವೆ;

| ಕ್ರ. ಸಂ. | ಹಸ್ತಾಂತರಿಸುವ ಕೆರೆಗಳ ಪಟ್ಟಿ | ತಾಲ್ಲೂಕು ಹೆಸರು | ಕೆರೆ ವಿಸ್ತೀರ್ಣ | |
|---|---|---|---|---|
| | | | ಎಕರೆ | ಗುಂಟೆ |
| 1 | ಜಿಮ್‌ಕೆನಹಳ್ಳಿ ಕೆರೆ | ಬೆಂಗಳೂರು ಪೂರ್ವ | 8 | 24 |
| 2 | ಕಲ್ಕರೆ–ರಾಂಪುರ ಕೆರೆ | ಬೆಂಗಳೂರು ಪೂರ್ವ | 107 | 2 |
| 3 | ನಗರೇಶ್ವರ ನಾಗೇನಹಳ್ಳಿ ಕೆರೆ | ಬೆಂಗಳೂರು ಪೂರ್ವ | 11 | 8 |
| 4 | ಚಿಕ್ಕಬೆಟ್ಟಹಳ್ಳಿ ಕೆರೆ | ಬೆಂಗಳೂರು ಉತ್ತರ | 1 | 32 |
| 5 | ಅಬ್ಬಿಗೆರೆ ಕೆರೆ | ಬೆಂಗಳೂರು ಉತ್ತರ–ಹೆಚ್ಚುವರಿ | 47 | 13 |
| 6 | ಬೆಲ್ಲಹಳ್ಳಿ ಕೆರೆ | ಬೆಂಗಳೂರು–ಉತ್ತರ–ಹೆಚ್ಚುವರಿ | 18 | 32 |
| 7 | ಲಕ್ಷ್ಮೀಪುರ ಕೆರೆ | ಬೆಂಗಳೂರು–ಉತ್ತರ–ಹೆಚ್ಚುವರಿ | 10 | 20 |

| | | | | |
|---|---|---|---|---|
| 8 | ಶಿವನಹಳ್ಳಿ ಕೆರೆ | ಬೆಂಗಳೂರು ಉತ್ತರ–ಹೆಚ್ಚುವರಿ | 18 | 12 |
| 9 | ಶ್ರೀನಿವಾಸಪುರ ಕೆರೆ | ಬೆಂಗಳೂರು ಉತ್ತರ–ಹೆಚ್ಚುವರಿ | 3 | 14 |
| 10 | ವಡೇರಹಳ್ಳಿ ಕೆರೆ | ಬೆಂಗಳೂರು ಉತ್ತರ–ಹೆಚ್ಚುವರಿ | 9 | 34 |
| 11 | ವಿಭೂತಿಪುರ ಕೆರೆ | ಬೆಂಗಳೂರು ಪೂರ್ವ | 45 | 18 |
| 12 | ಕೋನಸಂದ್ರ ಕೆರೆ | ಬೆಂಗಳೂರು ದಕ್ಷಿಣ | 37 | 14 |
| 13 | ಕೋತ್ತನೂರು ಕೆರೆ | ಬೆಂಗಳೂರು ದಕ್ಷಿಣ | 18 | 9 |
| 14 | ಸೋಂಪುರ ಕೆರೆ | ಬೆಂಗಳೂರು ದಕ್ಷಿಣ | 18 | 20 |
| 15 | ತಲಘಟ್ಟಪುರ ಕೆರೆ | ಬೆಂಗಳೂರು ದಕ್ಷಿಣ | 19 | 16 |
| 16 | ವೆಂಟೇಶಪುರ ಕೆರೆ | ಬೆಂಗಳೂರು ಉತ್ತರ | 10 | 35 |
| 17 | ಬೆಳ್ಳಂದೂರು ಕೆರೆ | ಬೆಂಗಳೂರು ಪೂರ್ವ | 919 | 17 |
| 18 | ವರ್ತೂರು ಕೆರೆ | ಬೆಂಗಳೂರು ಪೂರ್ವ | 470 | 34 |
| 19 | ಹರಳುಕುಂಟೆ ಕೆರೆ / ಸೋಮಸಂದ್ರ ಕೆರೆ | ಬೆಂಗಳೂರು ದಕ್ಷಿಣ | 16 | 29 |
| 20 | ಮಹದೇವಪುರ ಕೆರೆ | ಬೆಂಗಳೂರು ಪೂರ್ವ | 13 | 11 |
| 21 | ಮೇಸ್ತ್ರೀಪಾಳ್ಯ ಕೆರೆ | ಬೆಂಗಳೂರು ದಕ್ಷಿಣ | 9 | 18 |
| 22 | ಜುನ್ನಸಂದ್ರ ಕೆರೆ | ಬೆಂಗಳೂರು ಪೂರ್ವ | 24 | 33 |
| 23 | ಸೀತಾರಾಂಪಾಳ್ಯ ಕೆರೆ | ಬೆಂಗಳೂರು ಪೂರ್ವ | 23 | 37 |
| 24 | ನಲ್ಲೂರಹಳ್ಳಿ ಕೆರೆ | ಬೆಂಗಳೂರು ಪೂರ್ವ | 47 | 39 |
| 25 | ಕೆಳಗಿನ ಕೆರೆ / ಬೈರಸಂದ್ರ ಕೆರೆ | ಬೆಂಗಳೂರು ಪೂರ್ವ | 12 | 21 |
| 26 | ಗುಂಜೂರು ಮೌಜಿ ಕೆರೆ | ಬೆಂಗಳೂರು ಪೂರ್ವ | 63 | 39 |
| 27 | ಗುಂಜೂರು ಪಾಳ್ಯ ಕೆರೆ | ಬೆಂಗಳೂರು ಪೂರ್ವ | 36 | 27 |
| 28 | ಆಲಹಳ್ಳಿ / ಅಂಜನಾಪುರ ಕೆರೆ | ಬೆಂಗಳೂರು ದಕ್ಷಿಣ | 21 | 25 |
| 29 | ಬಸಾಪುರ ಕೆರೆ | ಬೆಂಗಳೂರು ದಕ್ಷಿಣ | 10 | 29 |
| 30 | ಬಸವನಪುರ ಕೆರೆ | ಬೆಂಗಳೂರು ದಕ್ಷಿಣ | 7 | 94 |
| 31 | ಚೌಡೇಶ್ವರಿ ಕೆರೆ / ಬೆರಟನ ಅಗ್ರಹಾರ ಕೆರೆ | ಬೆಂಗಳೂರು ದಕ್ಷಿಣ | 11 | 34 |
| 32 | ಚಿಕ್ಕಬೇಗೂರು ಕೆರೆ | ಬೆಂಗಳೂರು ದಕ್ಷಿಣ | 43 | 5 |
| 33 | ಚುಂಚಘಟ್ಟ ಕೆರೆ | ಬೆಂಗಳೂರು ದಕ್ಷಿಣ | 20 | 31 |
| 34 | ದೇವರ ಕೆರೆ | ಬೆಂಗಳೂರು ದಕ್ಷಿಣ | 7 | 15 |
| 35 | ದೊಡ್ಡಕಲ್ಲಸಂದ್ರ ಕೆರೆ | ಬೆಂಗಳೂರು ದಕ್ಷಿಣ | 21 | 16 |
| 36 | ಗೌಡನಪಾಳ್ಯ ಕೆರೆ (ಕದಿರೇನಹಳ್ಳಿ) | ಬೆಂಗಳೂರು ದಕ್ಷಿಣ | 9 | 30 |
| 37 | ಗುಬ್ಬಲಾಳು ಕೆರೆ | ಬೆಂಗಳೂರು ದಕ್ಷಿಣ | 8 | 10 |
| 38 | ಹುಳಿಮಾವು ಕೆರೆ | ಬೆಂಗಳೂರು ದಕ್ಷಿಣ | 145 | 26 |
| 39 | ಕೋನಪ್ಪನ ಅಗ್ರಹಾರ ಕೆರೆ | ಬೆಂಗಳೂರು ದಕ್ಷಿಣ | 5 | 17 |
| 40 | ಲಿಂಗಧೀರನಹಳ್ಳಿ ಕೆರೆ | ಬೆಂಗಳೂರು ದಕ್ಷಿಣ | 5 | 22 |
| 41 | ಮೀನಾಕ್ಷಿ ಕೆರೆ | ಬೆಂಗಳೂರು ದಕ್ಷಿಣ | 18 | 32 |
| 42 | ನ್ಯಾನಪ್ಪನಹಳ್ಳಿ ಕೆರೆ | ಬೆಂಗಳೂರು ದಕ್ಷಿಣ | 6 | 7 |
| 43 | ಪಟ್ಟಣಗೆರೆ / ಕೆಂಚನಹಳ್ಳಿ ಕೆರೆ | ಬೆಂಗಳೂರು ದಕ್ಷಿಣ | 4 | 30 |
| 44 | ಸುಬೇದಾರನ ಕೆರೆ | ಬೆಂಗಳೂರು ದಕ್ಷಿಣ | 6 | 5 |

| | | | | |
|---|---|---|---|---|
| 45 | ವರಹಸಂದ್ರ ಕೆರೆ | ಬೆಂಗಳೂರು ದಕ್ಷಿಣ | 17 | 20 |
| 46 | ವಸಂತಪುರ ಕೆರೆ | ಬೆಂಗಳೂರು ದಕ್ಷಿಣ | 7 | 10 |
| 47 | ಎಲ್ಲೇನಹಳ್ಳಿ ಕೆರೆ | ಬೆಂಗಳೂರು ದಕ್ಷಿಣ | 4 | 39 |
| 48 | ಚಿಕ್ಕಮ್ಮನಹಳ್ಳಿ ಕೆರೆ | ಬೆಂಗಳೂರು ದಕ್ಷಿಣ | 6 | 19 |
| 49 | ಸ್ವರ್ಣಕುಂಟೆ ಗುಡ್ಡೆ ಕೆರೆ | ಬೆಂಗಳೂರು ದಕ್ಷಿಣ | 9 | 5 |
| 50 | ಭೀಮಪ್ಪನಕುಪ್ಪೆ ಕೆರೆ | ಬೆಂಗಳೂರು ದಕ್ಷಿಣ | 39 | 24 |
| 51 | ಚಿಕ್ಕಬಸ್ತಿ ಕೆರೆ | ಬೆಂಗಳೂರು ದಕ್ಷಿಣ | 7 | 2.7 |
| 52 | ಗಾಂಧಿನಗರ ಕೆರೆ (ಹೊಸಕೆರೆ) | ಬೆಂಗಳೂರು ಉತ್ತರ | 43 | 30 |
| 53 | ಕನ್ನಲ್ಲಿ ಕೆರೆ | ಬೆಂಗಳೂರು ದಕ್ಷಿಣ | 68 | 19 |
| 54 | ಕೆಂಚನಪುರ ಕೆರೆ | ಬೆಂಗಳೂರು ದಕ್ಷಿಣ | 17 | 20 |
| 55 | ನರಸಪ್ಪನಹಳ್ಳಿ ಕೆರೆ | ಬೆಂಗಳೂರು ಉತ್ತರ | 53 | 24 |
| 26 | ಶ್ರೀಗಂಧಕಾವಲು ಕೆರೆ | ಬೆಂಗಳೂರು ಉತ್ತರ | 6 | 33 |
| 57 | ಸೂಲಿ ಕೆರೆ | ಬೆಂಗಳೂರು ದಕ್ಷಿಣ | 53 | 7 |
| 58 | ದೊಡ್ಡಬಿದರಕಲ್ಲು ಕೆರೆ | ಬೆಂಗಳೂರು ಉತ್ತರ | 40 | 5 |
| 59 | ಕೆ.ಆರ್.ಪುರಂ (ಬಿ.ಇ.ಎಂ.ಎಲ್ ಕೆರೆ)–ಬೆನ್ನಿಗಾನಹಳ್ಳಿ ಕೆರೆ | ಬೆಂಗಳೂರು ಪೂರ್ವ | 45 | 39 |
| 60 | ಕೋಣನಕುಂಟೆ ಕೆರೆ | ಬೆಂಗಳೂರು ದಕ್ಷಿಣ | 10 | 14 |

ಪ್ರಸ್ತುತ ಪಾಲಿಕೆಯ ವ್ಯಾಪ್ತಿಯಲ್ಲಿ ಇರುವ 90 ಜೀವಂತ (ಕೆರೆಗಳನ್ನು) ನಿರ್ವಹಣೆ ಮಾಡುತ್ತಿದ್ದು, ಈ ಪೈಕಿ 55 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಉಳಿದ ಕೆರೆಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರವು 2016–17ನೇ ಸಾಲಿನಲ್ಲಿ ನಗರೋತ್ಥಾನ ಅನುದಾನದಲ್ಲಿ ರೂ.106 ಕೋಟಿಗಳನ್ನು ಮತ್ತು ರಾಜ್ಯ ಸರ್ಕಾರದ ಸರೋವರ ಅಭಿವೃದ್ಧಿ ಅನುದಾನದಲ್ಲಿ ರೂ.50.00 ಕೋಟಿಗಳನ್ನು ಒದಗಿಸಿದ್ದು ಕ್ರಿಯಾ ಯೋಜನೆಯು ಸರ್ಕಾರದಿಂದ ಅನುಮೋದನೆಗೊಂಡಿರುತ್ತದೆ.

ದಿನಾಂಕ: 14–09–2016ರ ಸರ್ಕಾರದ ಆದೇಶದ ಪ್ರಸ್ತಾವನೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಶದಲ್ಲಿರುವ ಕೆರೆಗಳ ಅಭಿವೃದ್ಧಿಗಾಗಿ ಸುಮಾರು ರೂ.2000.00 ಕೋಟಿಗಳಿಗಿಂತ ಹೆಚ್ಚು ಆರ್ಥಿಕ ಸಂಪನ್ಮೂಲದ ಅವಶ್ಯವಿದ್ದು, ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ಸ್ಥಿತಿಯು ಉತ್ತಮವಾಗಿಲ್ಲದಿರುವ ಕಾರಣ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಗರಕ್ಕೆ ಅನೇಕ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬೃಹತ್ ಯೋಜನೆಗಳನ್ನು ಕೈಗೊಳ್ಳಲು ಕಷ್ಟಸಾಧ್ಯವಾಗಿದ್ದು, ಇದರ ಜೊತೆಯಲ್ಲಿ ಕೆರೆಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯವ್ಯಾಪ್ತಿಯಲ್ಲಿರುವ 91 ಕೆರೆಗಳ ಪೈಕಿ 60 ಕೆರೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸುತ್ತಿರುವುದಾಗಿ ತಿಳಿಯಪಡಿಸಲಾಗಿದೆ.

ಸರ್ಕಾರದ ಆದೇಶದಂತೆ 60 ಕೆರೆಗಳನ್ನು ಪಾಲಿಕೆಗೆ ಹಸ್ತಾಂತರಿಸಿಕೊಂಡಲ್ಲಿ ಇವುಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಈ ಸಾಲಿನಲ್ಲಿ ಯಾವುದೇ ಅನುದಾನದ ಲಭ್ಯತೆ ಇರುವುದಿಲ್ಲ. ಪ್ರಸ್ತುತ ಸರ್ಕಾರವು ನೀಡಿರುವ ಅನುದಾನ (2016–17) ವನ್ನು ಪಾಲಿಕೆ ವಶದಲ್ಲಿರುವ ಕೆರೆಗಳ ಅಭಿವೃದ್ಧಿಗಾಗಿ ಬಳಸಲಾಗುತ್ತಿದೆ.

ಪಾಲಿಕೆಗೆ ಹಸ್ತಾಂತರಿಸಲು ಉದ್ದೇಶಿಸಿರುವ 60 ಕೆರೆಗಳ ಪೈಕಿ ಬೆಳ್ಳಂದೂರು ಕೆರೆ (ಸುಮಾರು 919 ಎಕರೆ ವಿಸ್ತೀರ್ಣ) ಮತ್ತು ವರ್ತೂರು ಕೆರೆ (ಸುಮಾರು 470 ಎಕರೆ ವಿಸ್ತೀರ್ಣ) ಗಳು ಅತಿ ದೊಡ್ಡ ಕೆರೆಗಳಾಗಿದ್ದು

ಈ ಎರಡು ಕೆರೆಗಳ ಅಭಿವೃದ್ಧಿಗಾಗಿಯೇ ಸುಮಾರು ರೂ.750 ಕೋಟಿ ಅನುದಾನದ ಅವಶ್ಯಕತೆ ಇರುತ್ತದೆ. ಅಲ್ಲದೆ ಇತರೆ ಕೆರೆಗಳ ಸಮಗ್ರ ಅಭಿವೃದ್ಧಿಗಾಗಿ ಮತ್ತು ನಿರ್ವಹಣೆಗಾಗಿ ಐದು ವರ್ಷಗಳ ಕಾಲಾವಧಿಯಲ್ಲಿ ಪ್ರತಿ ವರ್ಷ ಕನಿಷ್ಠ ರೂ.200.00 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 60 ಕೆರೆಗಳನ್ನು ಪಾಲಿಕೆಯ ವಶಕ್ಕೆ ಪಡೆಯುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿತ್ತು.

ಸದರಿ ವಿಷಯವಾಗಿ ತೋಟಗಾರಿಕೆ ಸ್ಥಾಯಿ ಸಮಿತಿಯು ದಿನಾಂಕ: 11-01-2017 ರಂದು ನಡೆದ ಸಮಿತಿಯ ಸಭೆಯಲ್ಲಿ ಸದರಿ ವಿಷಯವನ್ನು ಪಾಲಿಕೆಯ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ತೀರ್ಮಾನಿಸಲಾಗಿರುತ್ತದೆ. ಇದರಂತೆ ಈ ವಿಷಯವಾಗಿ **ದಿನಾಂಕ: 30.01.217ರಂದು ನಡೆದ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಕಡತವನ್ನು ಸಮಿತಿಗೆ ಕಳುಹಿಸಿ, ಸಮಿತಿಯ ನಿರ್ಣಯದೊಂದಿಗೆ ಕಡತವನ್ನು ಕೌನ್ಸಿಲ್ ಸಭೆಗೆ ಮರು ಮಂಡಿಸಲು ಅಗತ್ಯ ಕ್ರಮವಹಿಸುವದು" ಎಂಬುದಾಗಿ ನಿರ್ಣಯವಾಗಿರುತ್ತದೆ. ಈ ಮೇರೆಗೆ ಸದರಿ ವಿಷಯವಾಗಿ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.**

***-ಮುಂದೂಡಿದೆ-***

## *12]. ವಿಷಯದ ಸಂಖ್ಯೆ: ತೆಆಸ್ಥಾಸ/167/2016-17*

ಮಾನ್ಯ ಆಯುಕ್ತರ ದಿ: 07-01-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, "ಬೆಂಗಳೂರು ಕ್ರೋಂ ಟ್ಯಾನರೀ" ಸಂಸ್ಥೆ ಇದರ ಪಾಲುದಾರರಾದ ಶ್ರೀ. ಹೆಚ್.ಎಸ್. ರವಿಕುಮಾರ್ ಬಿನ್ ಲೇ|| ಹೆಚ್.ಸಿ. ಶ್ರೀಕಂಠಯ್ಯ ರವರಿಗೆ ಸೇರಿದ ಕೆ.ಜಿ. ಹಳ್ಳಿ ಗ್ರಾಮದ ಸರ್ವೆ ನಂ: 37 ರಲ್ಲಿ ಬಿ ರಿಜಿಸ್ಟರ್ ಸಂಖ್ಯೆ: 37ಎ, 38ಎ, 8ಎ,9ಎ,24ಎ,25ಎ, 50ಎ, 51ಎ, 66ಎ, 67ಎ, 81ಎ, 82ಎ, 90ಎ, ಮತ್ತು 9ಬಿ, 29ಬಿ, 38ಬಿ, 51ಬಿ, 67ಬಿ, 82ಬಿ ಮತ್ತು 90ಬಿ ಈ ಸ್ವತ್ತಿನಲ್ಲಿ ಟ್ಯಾನರಿ ರಸ್ತೆಯಿಂದ ಶ್ಯಾಂಪುರದ ವರೆಗೆ ಲಿಂಕ್ ರಸ್ತೆಯ ಅಗಲೀಕರಣಕ್ಕೆ ಪಡೆದ ಜಾಗಕ್ಕೆ ಟಿ.ಡಿ.ಆರ್ ನೀಡುವ ಕುರಿತು ಪ್ರಕ್ರಿಯೆಯು ಈಗಾಗಲೇ ಜಾರಿಯಲ್ಲಿತ್ತು. ಆದರೆ, ದಿನಾಂಕ: 10.09.2015 ರ ಕರ್ನಾಟಕ ಸರ್ಕಾರದ ಅಧಿಸೂಚನೆಯನ್ವಯ ಕೆ.ಟಿ.ಸಿ.ಪಿ. ಕಾಯ್ದೆಯ ಸೆಕ್ಷನ್ 14(ಬಿ) ಗೆ ತಿದ್ದುಪಡಿ ತಂದು ಟಿ.ಡಿ.ಆರ್ ನೀಡುವ ಅಧಿಕಾರವನ್ನು ಯೋಜನಾ ಪ್ರಾಧಿಕಾರಕ್ಕೆ ನೀಡಿದ್ದು, ನಿಯಮಗಳನ್ನು ಅಂತಿಮವಾಗಿ ರೂಪಿಸುವ ಪ್ರಕ್ರಿಯೆಯ ಕುರಿತು ಸರ್ಕಾರದ ಹಂತದಲ್ಲಿ ಕ್ರಮಕೈಗೊಳ್ಳಲಾಗುತ್ತಿದ್ದು, ಈ ಹಂತದಲ್ಲಿ ಟಿ.ಡಿ.ಆರ್ ನೀಡಲು ಬಿಬಿಎಂಪಿಗೆ ಅವಕಾಶವಿಲ್ಲದಿರುವ ಕಾರಣ, ಮಾನ್ಯ ಆಯುಕ್ತರಿಂದ ಅನುಮೋದನೆ ಪಡೆದು ಕಡತವನ್ನು ಜಂಟಿ ಆಯುಕ್ತರು(ಪೂರ್ವ ವಲಯ) ರವರಿಗೆ ಹಿಂದಿರುಗಿಸಲಾಯಿತು. ಈ ಮೇರೆಗೆ ಜಂಟಿ ಆಯುಕ್ತರು(ಪೂರ್ವ ವಲಯ) ರವರು ಕೆ.ಟಿ.ಸಿ.ಪಿ ಕಾಯ್ದೆ ಸೆಕ್ಷನ್ 14(ಬಿ)ಗೆ ಆಗಿರುವ ತಿದ್ದುಪಡಿಗೆ ಹೊಸದಾಗಿ ಟಿ.ಡಿ.ಆರ್ ನಿಯಮಗಳನ್ನು ರೂಪಿಸಿ ಸರ್ಕಾರದಿಂದ ಆದೇಶ ಹೊರಡಿಸುವವರೆಗೆ ಬಿಬಿಎಂಪಿಯಿಂದ ಟಿ.ಡಿ.ಆರ್ ನೀಡಲು ಬರುವುದಿಲ್ಲವೆಂದು ಅರ್ಜಿದಾರರಿಗೆ ದಿನಾಂಕ: 28.04.2016 ರಂದು ಹಿಂಬರಹದ ಮುಖೇನ ತಿಳಿಸಲಾಗಿದೆ.

ಮುಂದುವರೆದು, ದಿನಾಂಕ: 28.04.2016 ರಂದು ನೀಡಲಾದ ಹಿಂಬರಕ್ಕೆ ಸಂಬಂಧಿಸಿದಂತೆ ಭೂಮಾಲೀಕರಾದ ಶ್ರೀ. ಹೆಚ್.ಎಸ್. ರವಿಕುಮಾರ್ ಬಿನ್ ಲೇ|| ಹೆಚ್.ಸಿ. ಶ್ರೀಕಂಠಯ್ಯ ರವರು ದಿನಾಂಕ: 15.06.2016 ರಂದು ಮನವಿ ಸಲ್ಲಿಸಿ, ಮೇಲ್ಕಂಡ ತಮ್ಮ ಸ್ವತ್ತಿನಲ್ಲಿ ಟ್ಯಾನರಿ ರಸ್ತೆಯಿಂದ ಶ್ಯಾಂಪುರದ ವರೆಗೆ ಲಿಂಕ್ ರಸ್ತೆಯ ಅಗಲೀಕರಣಕ್ಕೆ ಬಿಬಿಎಂಪಿಯಿಂದ ಉಪಯೋಗಿಸಿಕೊಂಡ ಸುಮಾರು 862.95 ಚದರ ಮೀಟರ್ (9289 ಚದರ ಅಡಿ) ಸ್ವತ್ತಿಗೆ ಟಿ.ಡಿ.ಆರ್ ಪಡೆಯಲು ಬಹಳಷ್ಟು

ವಿಳಂಬವಾಗಿರುವುದರಿಂದ ಹಾಗೂ ಸರ್ಕಾರದ ಮಟ್ಟದಲ್ಲಿ ಹೊಸದಾಗಿ ಟಿ.ಡಿ.ಆರ್ ನಿಯಮಗಳನ್ನು ರೂಪಿಸಿ ಆದೇಶ ಹೊರಡಿಸುವವರೆಗೆ ಮತ್ತಷ್ಟು ವಿಳಂಬವಾಗುವುದರಿಂದ, ತಮಗೆ ಟಿ.ಡಿ.ಆರ್ ಬೇಡವೆಂದೂ ಹಾಗೂ ಇತ್ತೀಚಿನ ಭೂಸ್ವಾಧೀನ ಕಾಯ್ದೆಯಂತೆ ಭೂಪರಿಹಾರವನ್ನು ಕೊಡಿಸಿಕೊಡಬೇಕೆಂದು ಕೋರಿದ್ದು, ಅದರಂತೆ ಜಂಟಿ ಆಯುಕ್ತರು (ಪೂರ್ವ ವಲಯ) ರವರು ಭೂಪರಿಹಾರ ನೀಡುವ ಸಂಬಂಧ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ: 13.04.2016 ರ ಕಚೇರಿ ಆದೇಶದಂತೆ ಕೆ.ಎಂ.ಸಿ. ಕಾಯ್ದೆ 1976 ರ ಸೆಕ್ಷನ್ 175 ರಂತೆ ಪರಸ್ಪರ ಒಪ್ಪಂದದ ಮೇರೆಗೆ ಖಾಸಗಿ ಸ್ವತ್ತನ್ನು ನೇರವಾಗಿ ಖರೀದಿಸಲು ದರ ನಿಗಧಿಪಡಿಸಲು ರಚಿಸಿರುವ ಪಾಲಿಕೆಯ ಕೇಂದ್ರ ಕಚೇರಿಯ ಸಮಿತಿಯ ಮುಂದೆ ಮಂಡಿಸಲಾಯಿತು. ಸದರಿ ಸಮಿತಿಯಲ್ಲಿ ಪ್ರಸ್ತಾನೆಯ ಕುರಿತು ಕೂಲಂಕಷ'ವಾಗಿ ಚರ್ಚಿಸಿ ಈ ಮುಂದಿನಂತೆ ನಿರ್ಣಯಿಸಲಾಗಿದೆ.

**"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಟ್ಯಾನರಿ ರಸ್ತೆಯಿಂದ ಶ್ಯಾಂಪುರದವರೆಗೆ ಲಿಂಕ್ ರಸ್ತೆಯ ಅಗಲೀಕರಣಕ್ಕೆ ಉಪಯೋಗಿಸಿಕೊಂಡಿರುವ ಭೂಮಾಲೀಕರ ಸ್ವತ್ತಿಗೆ ಸರ್ಕಾರದ ಪ್ರಸ್ತುತ ವರ್ಷದ ಮಾರ್ಗಸೂಚಿ ದರದಂತೆ ಚದರ ಅಡಿ ಒಂದಕ್ಕೆ ರೂ. 1701/- ರಂತೆ ಇದ್ದು, ರಸ್ತೆ ಅಗಲೀಕರಣಕ್ಕಾಗಿ ಅವರ ಸ್ವತ್ತಿನಲ್ಲಿ ಪಡೆದಿರುವ 9289.00 ಚದರ ಅಡಿ ವಿಸ್ತೀರ್ಣಕ್ಕೆ ರೂ. 1,58,00,589/- ಆಗುತ್ತಿದ್ದು, ಭೂಮಾಲೀಕರ ಮನವಿಯಂತೆ ಶೇ. 60% ರಷ್ಟು ಹೆಚ್ಚಿನ ಪರಿಹಾರವನ್ನು ಭರಿಸಲು ಬಿಬಿಎಂಪಿಗೆ ಆರ್ಥಿಕ ಹೊರೆಯಾಗುವುದರಿಂದ ಹಾಗೂ ಮಾರುಕಟ್ಟೆ ಬೆಲೆಗಿಂತ ಶೇ. 20% ರಷ್ಟು ಹೆಚ್ಚಿಗೆ ಪರಿಹಾರವನ್ನು ಪಡೆಯಲು ಭೂಮಾಲೀಕರು ಸಮ್ಮತಿಸಿದ್ದರಿಂದ, ಮಾರುಕಟ್ಟೆ ಬೆಲೆಗಿಂತ ಶೇ. 20% ರಷ್ಟು ಹೆಚ್ಚಿನ ಪರಿಹಾರವನ್ನು ನೀಡಲು ನಿರ್ಣಯಿಸಿತು".**

**ದರ ಸಂಧಾನ ಸಮಿತಿಯ ನಿರ್ಣಯದಂತೆ ಭೂಮಾಲೀಕರಿಗೆ ಕೆ.ಎಂ.ಸಿ ಕಾಯ್ದೆ 1976 ರ ಸೆಕ್ಷನ್ 175 ರನ್ವಯ ದರ ಸಂದಾನದ ಮೂಲಕ ದರ ನಿಗಧಿಪಡಿಸಿ ನೀಡಬೇಕಾಗುವ ಪರಿಹಾರದ ತಃಖ್ತೆ:**

| | | |
|---|---|---|
| 1 | ಟ್ಯಾನರಿ ರಸ್ತೆಯಿಂದ ಶ್ಯಾಂಪುರದ ವರೆಗೆ ಲಿಂಕ್ ರಸ್ತೆಯ ಅಗಲೀಕರಣಕ್ಕಾಗಿ ಪಡೆದುಕೊಂಡಿರುವ ವಿಸ್ತೀರ್ಣ | 862.95 ಚ.ಮೀ (9289.00 ಚದರ ಅಡಿ) |
| 2 | 2016 ನೇ ಸಾಲಿನ ಮಾರ್ಗಸೂಚಿ ದರ | ಪ್ರತಿ ಚದರ ಮೀಟರ್‌ಗೆ ರೂ. 18300/-<br>ಪ್ರತಿ ಚದರ ಅಡಿಗೆ ರೂ. 1701/- |
| 3 | 862.95 ಚ.ಮೀ ಗೆ (9289.00 ಚ.ಅ) | 9289 x 1701 = ರೂ. 1,58,00,589 /- |
| 4 | ಶೇ 20 ರಷ್ಟು ಹೆಚ್ಚಿಸಿದಲ್ಲಿ | 1,58,00,589 x 20% = ರೂ. 31,60,118/- |
| 5 | ಒಟ್ಟು ಪರಿಹಾರ ಮೊತ್ತ (ಕ್ರ.ಸಂ 5+6) | 1,58,00,589+31,60,118 = ರೂ. 1,89,60,707/- |

**(ಒಂದು ಕೋಟಿ ಎಂಭತ್ತೊಂಭತ್ತು ಲಕ್ಷದ ಅರವತ್ತು ಸಾವಿರದ ಏಳು ನೂರ ಏಳು ರೂಗಳು ಮಾತ್ರ)**

ಸದರಿ ನಿರ್ಣಯದಂತೆ, ಮೇಲೆ ವಿವರಿಸಿರುವ ಸ್ವತ್ತನ್ನು ಕೆ.ಎಂ.ಸಿ. ಕಾಯ್ದೆ 1976ರ ಸೆಕ್ಷನ್ 175 ರಂತೆ ಪಾವತಿಸಲು ಭೂಪರಿಹಾರದ ಒಟ್ಟು ಮೊತ್ತ ರೂ. 1,89,60,707/- (ಒಂದು ಕೋಟಿ ಎಂಭತ್ತೊಂಭತ್ತು

ಲಕ್ಷದ ಅರವತ್ತು ಸಾವಿರದ ಏಳು ನೂರ ಏಳು ರೂಗಳು ಮಾತ್ರ) ಗಳನ್ನು ಪಾಲಿಕೆಯ 2016-17ನೇ ಸಾಲಿನ ಆಯವ್ಯಯದಲ್ಲಿ, ಭೂಸ್ವಾಧೀನಕ್ಕಾಗಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಾಮಾನ್ಯ ಸಭೆಯ ಮುಂದೆ ಭೂಪರಿಹಾರದ ತಃಖ್ತೆಯೊಂದಿಗೆ ಮಂಡಿಸಿರುವ **ದಿನಾಂಕ: 07-01-2017ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 16.02.2017ರ ಸಭೆಯ ನಿರ್ಣಯ.**

**_-ಮುಂದೂಡಿದೆ-_**

## _13]. ವಿಷಯದ ಸಂಖ್ಯೆ: ತೆಆಸ್ಥಾಸ/168/2016-17_

ಮಾನ್ಯ ಆಯುಕ್ತರ ದಿ: 21-01-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ಸಂಖ್ಯೆ: 137ರ ಶ್ರೀಮತಿ.ಅಹಲ್ಯ ಚಿತ್ತರಂಜನ್ ರವರು ಸ್ವತ್ತಿನ ಸಂಖ್ಯೆ:10, (ಹಳೆದು 315), 2ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ, ಈ ಸ್ವತ್ತನ್ನು ಪಾಲಿಕೆಯಿಂದ 1949 ರಲ್ಲಿ ಹರಾಜು ಮುಖಾಂತರ ಪಡೆದಿದ್ದು, ಕ್ರಯಪತ್ರ ಪಡೆಯದೇ ಇರುವುದರಿಂದ ಕ್ರಯಪತ್ರ ನೀಡಲು ಕೋರಿರುತ್ತಾರೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೂಲ ಖಾತೆದಾರರಾದ ಶ್ರೀಮತಿ. ಪಾರ್ವತಮ್ಮ ರವರಿಗೆ ಸ.ಆ.ಸಂಖ್ಯೆ:2012/3/ಎಂಐ-67-48-100, ದಿನಾಂಕ:17-08-1949ರ ಸರ್ಕಾರಿ ಆದೇಶದಂತೆ ಸಾರ್ವಜನಿಕ ಹರಾಜಿನ ಮೂಲಕ ಖರೀದಿಸಿದ ಸ್ವತ್ತನ್ನು ಸ್ಥಿರೀಕರಿಸಲಾಗಿದೆ. ತದನಂತರ ಅದರಂತೆ ಕೆಲವೊಂದು ನಿಬಂಧನೆಗಳನ್ನು ವಿಧಿಸಿ, ಅಗ್ರಿಮೆಂಟ್ ಪತ್ರದ ನೊಂದಣಿ ಸಂಖ್ಯೆ:10/1950-1951, ದಿನಾಂಕ:17-10-1950 ರಂದು ಉಪ ನೊಂದಾಣಾಧಿಕಾರಿ, ಬೆಂಗಳೂರು ನಗರ ಉತ್ತರ, ಬೆಂಗಳೂರು ರವರ ಮುಖಾಂತರವಾಗಿ ಆಯುಕ್ತರು, ಕಾರ್ಪೋರೇಷನ್ ಸಿಟಿ ಬೆಂಗಳೂರು ರವರು ಸ್ವತ್ತಿನ ಕರಾರು ಪತ್ರ ಮಾಡಿಕೊಟ್ಟಿದ್ದು ನೊಂದಾಯಿಸಲಾಗಿದೆ. ಸ್ವತ್ತಿನ ವಿಸ್ತೀರ್ಣ 40x60=2400 ಚದರಡಿಗಳಾಗಿರುತ್ತದೆ.

ತದನಂತರ ಶ್ರೀ.ವಿ.ಗುರುರಾಜ್ ರವರಿಗೆ ನೊಂದಾಯಿತ ಶುದ್ಧ ಕ್ರಯಪತ್ರದ (ಈ ಕ್ರಯಪತ್ರದ ನೊಂದಾವಣಿ ಸಂಖ್ಯೆ:3941/1974-1975, ದಿನಾಂಕ:04-12-1974 ರಂದು ಹಿರಿಯ ಉಪ ನೊಂದಾಣಾಧಿಕಾರಿ, ಚಾಮರಾಜಪೇಟೆ, ಬೆಂಗಳೂರು) ಮುಖಾಂತರವಾಗಿ ಶ್ರೀಮತಿ.ಪಾರ್ವತಮ್ಮ ರವರಿಂದ ಸ್ವತ್ತಿನ ನಿವೇಶನದ ವಿಸ್ತೀರ್ಣ 40x60=2400 ಚದರಡಿಗಳ ಪೈಕಿ ಆಧಾರ 16x40=640 ಚದರಡಿಗಳನ್ನು ಪಡೆದುಕೊಂಡು, ನಗರ ಪಾಲಿಕೆಯಲ್ಲಿ ಸ್ವತ್ತಿನ ಸಂಖ್ಯೆ:10/1 ಎಂದು ಖಾತಾ ನೊಂದಾಯಿಸಲ್ಪಟ್ಟಿದೆ.

ಶ್ರೀಮತಿ.ಪಾರ್ವತಮ್ಮ ರವರು ಉಳಿಸಿಕೊಂಡಿರುವ ಉಳಿಕೆ ವಿಸ್ತೀರ್ಣ 40x44=1760 ಚದರಡಿಗಳಲ್ಲಿ ಶ್ರೀ.ವಿ.ಗುರುರಾಜ್ ರವರಿಗೆ ಓಡಾಡಲು ದಾರಿಯಾಗಿ ವಿಸ್ತೀರ್ಣ 3x44=132 ಅಡಿಗಳಾಗಿದ್ದು, ನಂತರ ಶ್ರೀಮತಿ.ಪಾರ್ವತಮ್ಮ ರವರ ಭಾಗಕ್ಕೆ ಉಳಿದಿರುವ ವಿಸ್ತೀರ್ಣ 44x37=1628 ಚದರಡಿಗಳಾಗಿರುತ್ತದೆ.

ಆರ್.ಎಸ್.ಪಾರ್ವತಮ್ಮ ರವರು ದಿನಾಂಕ:02-08-1993 ರಂದು ಮರಣ ಹೊಂದಿದ್ದು, ಇವರ ಪತಿಯಾದ ನಾರಾಯಣಸ್ವಾಮಿ.ಆರ್ ರವರು ದಿನಾಂಕ:28-12-1972 ರಂದು ಮರಣ ಹೊಂದಿರುತ್ತಾರೆ. ಸದರಿಯವರ ಮರಣ ಸಮರ್ಥನ ಪತ್ರವನ್ನು ಇದರೊಂದಿಗೆ ಲಗತ್ತಿಸಿದೆ.

ಆರ್.ಎಸ್.ಪಾರ್ವತಮ್ಮ ಮತ್ತು ನಾರಾಯಣಸ್ವಾಮಿ.ಆರ್ ಈ ದಂಪತಿಗಳಿಗೆ ದಿನಾಂಕ: 12-10-1972 ರಂದು ನೀಡಿರುವ ವಂಶವೃಕ್ಷದ ಪ್ರಕಾರ ಶ್ರೀಮತಿ.ಆರ್.ಎನ್.ಕಮಲಮ್ಮ, ಡಾ॥ ಆರ್.ಎನ್.ಶ್ರೀನಾಥ್,

ಶ್ರೀಮತಿ.ಉಷಾಮಣಿ, ಶ್ರೀಮತಿ.ಆರ್.ಎನ್.ಆಹಲ್ಯ, ಶ್ರೀ.ಆರ್.ಎನ್.ವಿಶ್ವನಾಥ್, ಶ್ರೀಮತಿ.ಆರ್.ಭಾರ್ಗವಿ, ಶ್ರೀ.ಆರ್.ಎನ್.ಮುಕುಂದ, ಡಾ॥ಆರ್.ಎನ್.ಶ್ರೀಧರ್, ಶ್ರೀಮತಿ. ಆರ್.ಎನ್.ಲಲಿತ, ಶ್ರೀ.ಆರ್.ಎನ್.ರವಿಶಂಕರ್ ಮಕ್ಕಳಿರುತ್ತಾರೆ ಎಂದು ವಂಶವೃಕ್ಷವನ್ನು ನೀಡಿರುತ್ತಾರೆ.

ಶ್ರೀಮತಿ.ಆಹಲ್ಯ ಚಿತ್ತರಂಜನ್ ರವರ ಹೆಸರಿಗೆ ಸ್ವತ್ತನ್ನು ನೊಂದಾಯಿತ ಜನರಲ್ ಫವರ್ ಆಫ್ ಆಟ್ನಾರ್ನಿ ಮೂಲಕ (ನೊಂದಾವಣಿ ಸಂಖ್ಯೆ:79/2010-2011, ದಿನಾಂಕ:30-07-2010 ರಂದು ಹಿರಿಯ ಉಪ ನೊಂದಾಣಾಧಿಕಾರಿ, ಬಸವನಗುಡಿ, ಬೆಂಗಳೂರು) ಶ್ರೀಮತಿ.ಆರ್.ಎನ್. ಕಮಲಮ್ಮ, ಡಾ॥ಆರ್.ಎನ್.ಶ್ರೀನಾಥ್,ಶ್ರೀಮತಿ.ಉಷಾ.ಸಿ.ಶೇಖರ್, ಶ್ರೀ.ಆರ್.ಎನ್.ವಿಶ್ವನಾಥ್, ಡಾ॥ಆರ್.ಎನ್.ಶ್ರೀಧರ್, ಶ್ರೀಮತಿ.ಆರ್.ಎನ್.ಲಲಿತ, ಶ್ರೀ.ಆರ್.ಎನ್.ರವಿಶಂಕರ್ ರವರುಗಳು ನೀಡಿದ್ದು, ಸ್ವತ್ತಿನ ಅಳತೆ 44x40=1760 ಚದರಡಿಗಳೆಂದು ನಮೂದಿಸಿದ್ದು, 3x44=132 ಚದರಡಿಗಳ ಬಹುತ್ವದ ದಾರಿ ಹೊರತುಪಡಿಸಿದಲ್ಲಿ, ಉಳಿಕೆ ವಿಸ್ತೀರ್ಣ 44x37=1628 ಚದರಡಿಗಳಾಗಿರುತ್ತದೆ.

ಈ ಜನರಲ್ ಫವರ್ ಆಫ್ ಆಟ್ನಾರ್ನಿ ಮೂಲಕ ಎಲ್ಲರೂ ತಮ್ಮ ಹಕ್ಕನ್ನು ಶ್ರೀಮತಿ.ಅಹಲ್ಯ ಚಿತ್ತರಂಜನ್ ರವರಿಗೆ ನೀಡಿರುವುದರಿಂದ ಸದರಿಯವರಿಗೆ ನಗರ ಪಾಲಿಕೆಯಿಂದ ಶುದ್ಧ ಕ್ರಯಪತ್ರವನ್ನು ಮಾಡಿಕೊಡಲು ಕೋರಿರುವ ಮೇರೆಗೆ, ಪೂರ್ವ ಪಶ್ಚಿಮ 44 ಅಡಿಗಳು ಮತ್ತು ಉತ್ತರ ದಕ್ಷಿಣ 37 ಅಡಿಗಳಾಗಿದ್ದು, ಸದರಿ ಸ್ವತ್ತಿಗೆ ಈ ಕೆಳಕಂಡಂತೆ ಚಕ್ಕುಬಂದಿ ಇರುತ್ತದೆ.

| | | |
|---|---|---|
| ಪೂರ್ವಕ್ಕೆ | : | 3x44 ಅಡಿಗಳ ಪ್ಯಾಸೇಜ್ |
| ಪಶ್ಚಿಮಕ್ಕೆ | : | ಖಾಸಗಿ ಸ್ವತ್ತು |
| ಉತ್ತರಕ್ಕೆ | : | ಸೀಮಾ ಗುರುರಾಜ್ ರವರ ಸ್ವತ್ತು |
| ದಕ್ಷಿಣಕ್ಕೆ | : | 2ನೇ ಅಡ್ಡರಸ್ತೆ ಎನ್.ಆರ್.ಕಾಲೋನಿ |

ಕಂಡಿಕೆ (45) ರಲ್ಲಿ ಉಪ ಆಯುಕ್ತರು (ಆಸ್ತಿಗಳು) ರವರ ಅವಲೋಕನದಂತೆ ಪರಿಶೀಲಿಸಲಾಗಿ, ಮೂಲತ: ಹರಾಜಿನಲ್ಲಿ ಸ್ವತ್ತು ಪಡೆದುಕೊಂಡ ಶ್ರೀಮತಿ.ಆರ್.ಎಸ್.ಪಾರ್ವತಮ್ಮ ರವರಿಗೆ ಇಲ್ಲಿಯವರೆವಿಗೂ ಯಾವುದೇ ಕ್ರಯಪತ್ರವನ್ನು ನಗರ ಪಾಲಿಕೆಯಲ್ಲಿ ಮಾಡಿಕೊಟ್ಟಿರುವುದಿಲ್ಲ ಮತ್ತು ನಗರ ಪಾಲಿಕೆಯಿಂದ ಈ ಹಿಂದೆ ನೀಡಿದ್ದ ಅಗ್ರಿಮೆಂಟ್ ಪತ್ರದ ಆಧಾರದ ಮೇಲೆ ಸುಮಾರು ವರ್ಷಗಳ ಹಿಂದೆಯೇ ಶ್ರೀಮತಿ.ಆರ್.ಎಸ್.ಪಾರ್ವತಮ್ಮ ರವರಿಗೆ ನಗರ ಪಾಲಿಕೆಯಿಂದ ಸ್ವತ್ತಿಗೆ ಮುನ್ಸಿಪಲ್ ಸಂಖ್ಯೆ:10, 2ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ, ವಾರ್ಡ್-51/154 ಖಾತಾ ನೊಂದಾವಣೆಯಾಗಿರುತ್ತದೆ. ಈ ಬಗ್ಗೆ ಸಂಬಂಧಪಟ್ಟ ಭೂಮಾಪಕರಿಂದ ವರದಿ ಪಡೆಯಲಾಗಿದ್ದು, ಕಂಡಿಕೆ (93) ಮತ್ತು (94) ಅನ್ನು ಅವಗಾಹಿಸಬಹುದಾಗಿದೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆ ಮುಂದೆ ದಿನಾಂಕ:14-12-2011ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿನಾಂಕ:20-06-2012 ವಿಷಯ ಸಂಖ್ಯೆ:ತೆಆಸ್ಥಾಸ/61/2012-13ರ ಸಭೆಯ ನಡವಳಿಯಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳ ತನಿಖೆ ಮಾಡಿ ಕೆಲವು ಮಾಹಿತಿಯನ್ನು ಒದಗಿಸಲು ಕೋರಿರುತ್ತಾರೆ. ಅದರಂತೆ, ಈ ಬಗ್ಗೆ ಕಂಡಿಕೆ (90) ರಲ್ಲಿ ವಿವರಿಸಿರುವಂತೆ ಹಾಗೂ ಸ್ಥಳ ತನಿಖೆ ಮಾಡಿ ಈ ಕೆಳಕಂಡಂತೆ ವರದಿಸಿದೆ.

1. ಸದರಿ ಸ್ವತ್ತಿನಲ್ಲಿ ಅರ್ಜಿದಾರರ ವಂಶಸ್ಥರು ವಾಸವಿರುವುದು ಕಂಡು ಬರುತ್ತದೆ. ಈ ಬಗ್ಗೆ ಪುಟ ಸಂಖ್ಯೆ:112 ರಲ್ಲಿ ತಹಶೀಲ್ದಾರ್ ಬೆಂಗಳೂರು ದಕ್ಷಿಣ ತಾಲ್ಲೂಕು ರವರು ದಿನಾಂಕ:13-11-2014 ರಂದು ನೀಡಿರುವ ವಾಸದ ದೃಢೀಕರಣ ಪತ್ರದಲ್ಲಿ ಶ್ರೀಮತಿ.ಅಹಲ್ಯ ಚಿತ್ತರಂಜನ್ W/o ಚಿತ್ತರಂಜನ್ ರವರು ನಂ:10, 2ನೇ ಕ್ರಾಸ್, ಎನ್.ಆರ್.ಕಾಲೋನಿ, ಬನಶಂಕರಿ, ಬೆಂಗಳೂರು ಎಂದು ನಮೂದಿಸಿರುತ್ತಾರೆ.
2. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಕಡತದಲ್ಲಿ ಪುಟ ಸಂಖ್ಯೆ:63 ರಿಂದ 73ರ ವರೆಗೆ ಅವಗಾಹನೆಗೆ ಮಂಡಿಸಿದೆ. ಕ್ರಯಪತ್ರದ ನೊಂದಾಣಿ ಪತ್ರದ ಸಂಖ್ಯೆ:2230/50-51 ದಿನಾಂಕ:06-10-1950 ಹಾಗೂ ನೊಂದಾಣಿ ಪತ್ರ ಸಂಖ್ಯೆ:3941/1974-75ರ ಲಭ್ಯ ಮೂಲ ದಾಖಲೆಗಳನ್ನು ಅವಗಾಹನೆಗೆ ಮಂಡಿಸಿದೆ.
3. ಅರ್ಜಿದಾರರ ಶ್ರೀಮತಿ.ಅಹಲ್ಯ ಚಿತ್ತರಂಜನ್ ರವರು ಸದರಿ ಸ್ವತ್ತಿನ ಉತ್ತರಾಧಿಕಾರಿ ಎನ್ನುವ ಕುರಿತು ಪತ್ರ (Succession Certificate) ಪುಟ ಸಂಖ್ಯೆ:119 ರಲ್ಲಿ ತಹಶೀಲ್ದಾರ್ ಬೆಂಗಳೂರು ದಕ್ಷಿಣ ತಾಲ್ಲೂಕು ರವರು ನೀಡಿರುವ ಉತ್ತರಾಧಿಕಾರಿ ಪತ್ರ Surviving family member certificate ಒದಗಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಈ ಹಿಂದೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 20-06-2012 ವಿಷಯ ಸಂಖ್ಯೆ:ತೆಆಸ್ಥಾಸ/61/2012-13 ಸಭೆಯ ನಡವಳಿಯಲ್ಲಿ ಗಮನಿಸಿದ ಕೆಲವು ಅಂಶಗಳಿಗೆ ಮಾಹಿತಿಯನ್ನು ಸಂಗ್ರಹಿಸಿ ಮೇಲಿನ ವಿವರಣೆ ಆಧಾರದೊಂದಿಗೆ ಕ್ರಯಪತ್ರ ಮಾಡಿಕೊಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ **ದಿನಾಂಕ: 21-01-2017ರ ಮಾನ್ಯ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಶ್ರೀಮತಿ ಅಹಲ್ಯ ಚಿತ್ತರಂಜನ್‌ರವರ ಸ್ವತ್ತಿಗೆ ಶುದ್ದ ಕ್ರಯಪತ್ರವನ್ನು ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 16.02.2017ರ ಸಭೆಯ ನಿರ್ಣಯ.**

***-ಮುಂದೂಡಿದೆ-***

### ***14]. ವಿಷಯದ ಸಂಖ್ಯೆ: ತೆಆಸ್ಥಾಸ/169/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 06.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಲಕ್ಷ್ಮೀಪುರ ವಾರ್ಡ್ ಸಂಖ್ಯೆ 68ರ ವ್ಯಾಪ್ತಿಯಲ್ಲಿ ಪಾಲಿಕೆ ವತಿಯಿಂದ ನೂತನವಾಗಿ ಗೆಳೆಯರಬಳಗದ ಐ.ಪಿ.ಪಿ. ಆಸ್ಪತ್ರೆಯ 1ನೇ ಮಹಡಿಯಲ್ಲಿ ಲೋಕನಾಯಕ ಜಯಪ್ರಕಾಶ್ ನಾರಾಯಣ ಡಯಾಲಸಿಸ್ ಕೇಂದ್ರವನ್ನು ನಿರ್ಮಿಸಿದ್ದು, ಸದರಿ ಡಯಾಲಸಿಸ್ ಕೇಂದ್ರದ ಕಾರ್ಯಾಚರಣೆ ಹಾಗೂ ನಿರ್ವಹಣೆ ಕೈಗೊಳ್ಳುವ ಸಲುವಾಗಿ ಈ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ಸಂಸ್ಥೆಗಳಿಂದ ದರವನ್ನು ಸೂಚಿಸುವ ಸಲುವಾಗಿ ದಿನಾಂಕ: 02.02.2017 ರಂದು ಪ್ರಮುಖ ಪತ್ರಿಕೆಗಳಲ್ಲಿ ಕೊಟೇಷನ್ ಪ್ರಕಟಣೆ ನೀಡಲಾಗಿರುತ್ತದೆ. ಅದರಂತೆ ಭಾಗವಹಿಸಿದ್ದ ಮೂರು ಸಂಸ್ಥೆಗಳಲ್ಲಿ ಶ್ರೀ ಮಹಾಲಕ್ಷ್ಮೀ ಎಜುಕೇಷನಲ್ ಟ್ರಸ್ಟ್ (ರಿ) ನಂ. 91/2, 11ನೇ ಮುಖ್ಯ ರಸ್ತೆ, ವೃಷಭಾವತಿನಗರ, ಬೆಂಗಳೂರು-79 ರವರು ಹೆಚ್ಚಿನ ದರವನ್ನು ಸೂಚಿಸಿರುತ್ತಾರೆ. ಸದರಿಯವರು ಈ ಕೆಳಕಂಡಂತೆ ದರ ಸೂಚಿಸಿರುತ್ತಾರೆ.

- **3 ವರ್ಷಗಳ ಅವಧಿಗೆ ಸದರಿ ಕೇಂದ್ರ ಹಾಗೂ ಇತರ ಮೂಲಭೂತ ಸೌಕರ್ಯವನ್ನು ಬಳಸಿಕೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನೀಡಬೇಕಾದ ವಾರ್ಷಿಕ ಬಾಡಿಗೆ ರೂ.11,000.00 (ಹನ್ನೊಂದು ಸಾವಿರ ರೂ.ಗಳು ಮಾತ್ರ)**
- **ಪ್ರತಿ ರೋಗಿಗೆ ಡಯಾಲಸಿಸ್ ಸೇವೆ ನೀಡಲು ಪ್ರಸ್ತಾವಿತ ಶುಲ್ಕ ರೂ. 800.00 (ಎಂಟು ನೂರು ರೂ.ಗಳು ಮಾತ್ರ)**

ಮುಂದುವರೆದಂತೆ ಕೇಂದ್ರದ ಕಾರ್ಯಾಚರಣೆ ಹಾಗೂ ನಿರ್ವಹಣೆಯನ್ನು ವಹಿಸಿಕೊಡಲು ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ವಾರ್ಡ್ ಸಂಖ್ಯೆ 68 ಮಹಾಲಕ್ಷ್ಮೀಪುರ, ಗೆಳೆಯರಬಳಗದಲ್ಲಿರುವ ಐ.ಪಿ.ಪಿ. ಆಸ್ಪತ್ರೆಯ ಮೊದಲನೇ ಮಹಡಿಯಲ್ಲಿ ಲೋಕನಾಯಕ ಜಯಪ್ರಕಾಶ್ ನಾರಾಯಣ ಡಯಾಲಸಿಸ್ ಕೇಂದ್ರವನ್ನು ನಿರ್ಮಿಸಿದ್ದು, ವಿವರ ಕೆಳಕಂಡಂತಿದೆ.

ಕಟ್ಟಡದ ವಿವರ

**ಕಟ್ಟಡದ ಅಳತೆ 13.00 M x 14.50 m = 188.50 Sqmt**

ಡಯಾಲಸಿಸ್ ಕೇಂದ್ರದಲ್ಲಿ ಅಳವಡಿಸಲಾಗಿರುವ ಯಂತ್ರೋಪಕರಣಗಳ, ಸಲಕರಣೆಗಳ ವಿವರ

| Sl No | Description | Qty (in No's) |
|---|---|---|
| 1 | Airport perforated SS make visitor chair | 3 |
| 2 | Wall mounted fan | 4 |
| 3 | Exhaust fan | 1 |
| 4 | Ceiling fan | 1 |
| 5 | Bed side screen frame | 6 |
| 6 | Reverse osmosis system | 1 |
| 7 | Fowler bed, side rails and mattress | 12 |
| 8 | Over bed table top with nominated top | 12 |
| 9 | Instrument trolley | 4 |
| 10 | Auto clave of size 12" x 20" | 1 |
| 11 | SS bin size 11"x 9" | 4 |
| 12 | Wall station for dialysis | 12 |
| 13 | Stainless steel LN-316 Scrub for dialyzer reprocessing (5'x1'6"x4'H) | 1 |
| 14 | Stainless steel LN-316 Scrub for dialyzer reprocessing (2'6"x1'6"x4'H) | 1 |
| 15 | Dialyser holder rack( 4'x4') | 1 |
| 16 | Dialyser holder rack( 4'x3') | 1 |
| 17 | Relovlving chair | 6 |
| 18 | Reception table of size 7'x2'6"x4 | 1 |
| 19 | Computer and cash counter table of size 9x 2'6"x3 | 1 |
| 20 | Nursing table of size 7x2'3"x3 | 1 |
| 21 | Haemodialysis Machine 4008s the next generation: | 12 |

ಕೆ.ಎಂ.ಸಿ. ಕಾಯ್ದೆ 176ರ ಸ್ವತ್ತು ಮತ್ತು ಅದರಲ್ಲಿನ ಹಿತಾಸಕ್ತಿಯ ವಿಲೆ' ಪ್ರಕಾರ ಹಾಗೂ ಆಯುಕ್ತರ ಸುತ್ತೋಲೆ ಸಂಖ್ಯೆ: ಉ.ಆ(ಕಂ)/ಪಿ.ಆರ್/115/2001–02 ದಿನಾಂಕ: 01.03.2002 ರಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ ನಿಗಮದ ಯಾವುದೇ ಸ್ಥಿರ ಸ್ವತ್ತನ್ನು ಬಾಡಿಗೆಗೆ ಅಥವಾ ರಿಯಾಯಿತಿಗೆ ಮೂರು ವರ್ಷಗಳ ಅವಧಿಗೆ ವಹಿಸಿಕೊಡಬಹುದಾಗಿರುತ್ತದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಮಹಾಲಕ್ಷ್ಮೀಪುರ ವಿಭಾಗ ವ್ಯಾಪ್ತಿಯ ಮಹಾಲಕ್ಷ್ಮೀಪುರ ಉಪ ವಿಭಾಗ ವಾರ್ಡ ಸಂಖ್ಯೆ 68ರ ವ್ಯಾಪ್ತಿಯ ಗೆಳೆಯರ ಬಳದಲ್ಲಿರುವ ಐ.ಪಿ.ಪಿ. ಆಸ್ಪತ್ರೆಯ 1ನೇ ಮಹಡಿಯಲ್ಲಿ ನಿರ್ಮಿಸಿರುವ ಲೋಕನಾಯಕ ಜಯಪ್ರಕಾಶ್ ನಾರಾಯಣ ಡಯಾಲಿಸಿಸ್ ಕೇಂದ್ರದ ಕಾರ್ಯಾಚರಣೆ ಹಾಗೂ ನಿರ್ವಹಣೆಯನ್ನು ಶ್ರೀ ಮಹಾಲಕ್ಷ್ಮೀ ಎಜುಕೇಷನಲ್ ಟ್ರಸ್ಟ್ (ರಿ) ನಂ. 91/2, 11ನೇ ಮುಖ್ಯ ರಸ್ತೆ, ವೃಷಭಾವತಿನಗರ, ಬೆಂಗಳೂರು–79 ರವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿಯನ್ನು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 06.03.2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

### ***15]. ವಿಷಯದ ಸಂಖ್ಯೆ: ತೆಆಸ್ಥಾಸ/170/2016–17***

ಆಯುಕ್ತರ ದಿನಾಂಕ: 01.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ತೆರಿಗೆ & ಆರ್ಥಿಕ ಸ್ಥಾಯಿ ಸಮಿತಿಯಿಂದ ನಗರಯೋಜನಾ ವಿಭಾಗಕ್ಕೆ ಸಂಬಂಧಿಸಿದಂತೆ ಕಳೆದ 3 ವರ್ಷಗಳ ಅವಧಿಯಲ್ಲಿ ಪರಿಷ್ಕರಿಸದೇ ಇರುವ ವಿವಿಧ ಬಾಬ್ತಿನ ತೆರಿಗೆಯೇತರ ವರಮಾನದ ದರಗಳನ್ನು 2017–18ನೇ ಸಾಲಿನಲ್ಲಿ ಪರಿಷ್ಕರಿಸಲು ಸಮಿತಿಯು ಇಚ್ಚಿಸಿರುವುದಾಗಿ ತಿಳಿಸಲಾಗಿದೆ. ಈ ಬಗ್ಗೆ ಕೂಲಂಕುಷವಾಗಿ ಪರಾಂಬರಿಸಿ ಸಮಿತಿಯ ಮುಂದೆ ಪ್ರಸ್ತಾವನೆಯನ್ನು ಮಂಡಿಸಲು ಕೂಡ ಕೋರಲಾಗಿದೆ.

ಪಾಲಿಕೆಯ ನಗರ ಯೋಜನಾ ವಿಭಾಗಕ್ಕೆ ಸಂಬಂಧಿಸಿದಂತೆ, ಕಟ್ಟಡ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವ ಸಂಬಂಧ ಪಾವತಿಸಿಕೊಳ್ಳಲಾಗುತ್ತಿರುವ ಶುಲ್ಕಗಳು ಮತ್ತು ಸಂಬಂಧಿಸಿದ ಆದೇಶದ ವಿವರಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಲಾಗಿದೆ.

| ಕ್ರ.ಸಂ. | ಶುಲ್ಕಗಳ ವಿವರ (ಒಟ್ಟು ನಿರ್ಮಾಣ ವಿಸ್ತೀರ್ಣಕ್ಕೆ) | ಶುಲ್ಕಗಳ ದರ (ನಿವೇಶನ ಮಾರ್ಗಸೂಚಿ ದರದ ಶೇಕಡವಾರು ಪ್ರಮಾಣದಲ್ಲಿ) | ಆದೇಶ ಸಂಖ್ಯೆ/ ಸುತ್ತೋಲೆ | ಪರಿಷ್ಕೃತ ದರ ಜಾರಿಯಲ್ಲಿರುವ ದಿನಾಂಕ |
|---|---|---|---|---|
| 01 | ಪರಿಶೀಲನಾ ಶುಲ್ಕ | ವಸತಿ–0.009%<br>ವಸತಿಯೇತರ–0.014% | ಸಂಖ್ಯೆ:ಹೆನಿನ ಯೋ/ಜೆ.ಡಿ. (ಉ)/ಡಿಎಂ3/ಪಿಆರ್/ 320/ 2015–16 ದಿನಾಂಕ:04.09.2015 | ಶುಲ್ಕಗಳ ದರವನ್ನು ನಿವೇಶನದ ಮಾರ್ಗಸೂಚಿದರದ ಇಂತಿಷ್ಟು ಶೇಕಡವಾರು ಪ್ರಮಾಣವೆಂದು ನಿಗಧಿಪಡಿಸುವುದರಿಂದ ಮಾರ್ಗಸೂಚಿ ದರಗಳ ಪರಿಷ್ಕರಣೆಗೆ ಅನುಸಾರ ಶುಲ್ಕಗಳ ದರಗಳು ಸ್ವಯಂಚಾಲಿತವಾಗಿ ಪರಿಷ್ಕರಣೆಗೊಳ್ಳುತ್ತದೆ. ಪ್ರಸ್ತುತ ಮಾರ್ಗಸೂಚಿದರಗಳು ಪರಿಷ್ಕರಣೆಗೊಂಡಿದ್ದು ಇದರ ಅನುಸಾರ ಶುಲ್ಕಗಳೂ ಸಹ ಪರಿಷ್ಕರಣೆಗೊಂಡಿರುತ್ತದೆ. |
| 02 | ನೆಲಬಾಡಿಗೆ | ವಸತಿ–0.09%<br>ವಸತಿಯೇತರ–0.22% | | |

| | | | | |
|---|---|---|---|---|
| 03 | ಪರವಾನಿಗೆ ಶುಲ್ಕ | ವಸತಿ–0.18%<br>ವಾಣಿಜ್ಯ–0.28%<br>ಕೈಗಾರಿಕೆ–0.17% | | |
| 04 | ಪ್ರಾರಂಭಿಕ ಪ್ರಮಾಣ ಪತ್ರ | ವಸತಿ–0.11%<br>ವಾಣಿಜ್ಯ–0.18%<br>ಕೈಗಾರಿಕೆ–0.18% | | |
| 05 | ಸ್ವಾಧೀನಾನುಭವ ' ಪತ್ರ ನೀಡುವ ಸಂದರ್ಭದಲ್ಲಿ ವಿಧಿಸಲಾಗುವ ದಂಡ ಶುಲ್ಕಗಳು | **ಏಕ ವಸತಿ ಘಟಕ**–2.2%<br>**ವಸತಿ ಸಮುಚ್ಚಯ**<br>2–10 ಘಟಕ 6.6%<br>11–50 ಘಟಕ 7.7%<br>51–200 ಘಟಕ 8.8%<br>200ಘಟಕಕ್ಕಿಂತಮೇಲ್ಪಟ್ಟು 11.00%<br>**ವಾಣಿಜ್ಯ**<br>750 ಚ.ಮೀ.ವರೆಗೆ–6.6%<br>750 ಚ.ಮೀ. ಮೇಲ್ಪಟ್ಟು–11% | | |
| 06 | ಉತ್ತಮತೆ ಶುಲ್ಕ | **ನಿವೇಶನಕ್ಕೆ**<br>ವಸತಿ– ರೂ.20/– ಚ.ಮೀ.ಗೆ<br>ವಾಣಿಜ್ಯ– ರೂ.75/– ಚ.ಮೀ.ಗೆ<br>ಕೈಗಾರಿಕೆ– ರೂ.40/– ಚ.ಮೀ.ಗೆ<br>**ಕಟ್ಟಡಕ್ಕೆ**<br>ವಸತಿ– ರೂ.2/– ಚ.ಮೀ.ಗೆ<br>ವಾಣಿಜ್ಯ– ರೂ.10/– ಚ.ಮೀ.ಗೆ<br>ಕೈಗಾರಿಕೆ– ರೂ.4/– ಚ.ಮೀ.ಗೆ | ಕರ್ನಾಟಕ ನಗರ & ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 18 (1)ರಂತೆ ಪಾವತಿಸಿ ಕೊಳ್ಳಲಾಗುತ್ತಿದೆ. | ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮ 1965ರ ನಿಯಮಾವಳಿ 37–ಂ ನ ಅಡಿ 1995ನೇ ಇಸವಿಯಿಂದ ಈ ದರಗಳು ಚಾಲ್ತಿಯಲ್ಲಿರುತ್ತವೆ. |
| 07 | ಭದ್ರತಾ ಠೇವಣಿ (Security Deposit) | **ವಸತಿ ಸಮುಚ್ಚಯ & ವಾಣಿಜ್ಯ ಕಟ್ಟಡಗಳ ನಿರ್ಮಾಣ ವಿಸ್ತೀರ್ಣದ ಪ್ರತಿ ಚ.ಮೀ.ಗೆ ರೂ.100/–ರಂತೆ.** | ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 540 ಬಿಇಎಂ ಎಎ ಎಸ್‌ಇ 2004, ದಿನಾಂಕ: 25–06–2007 | ಬೆಂಗಳೂರು ಮಹಾನಗರದ ವಲಯ ನಿಯಮಾವಳಿಗಳ ಅವಕಾಶಗಳಂತೆ ಮರು ಪಾವತಿಗೊಳಪಟ್ಟ ಭದ್ರತಾ ಠೇವಣಿಯನ್ನು 2007–08 ನೇ ಸಾಲಿನಿಂದ ಪಾವತಿಸಿಕೊಳ್ಳಲಾಗುತ್ತಿದೆ. |

ಪಾಲಿಕೆಯ ಕಾರ್ಯವ್ಯಾಪ್ತಿಯಲ್ಲಿ ಪರಿಷ್ಕರಿಸಬಹುದಾದ ಶುಲ್ಕಗಳನ್ನು ಸ್ವತ್ತಿನ ಮಾರುಕಟ್ಟೆ ಬೆಲೆ ಆಧರಿಸಿ ಪಾವತಿಸಿಕೊಳ್ಳಲು ಪಾಲಿಕೆ ಸುತ್ತೋಲೆ ದಿನಾಂಕ: 04–09–2015ರಲ್ಲಿ ಆದೇಶಿಸಲಾಗಿರುತ್ತದೆ. ಶುಲ್ಕಗಳ ದರವನ್ನು ನಿವೇಶನದ ಮಾರ್ಗಸೂಚಿದರದ ಇಂತಿಷ್ಟು ಶೇಕಡವಾರು ಪ್ರಮಾಣವೆಂದು ನಿಗಧಿಪಡಿಸಿಸುವುದರಿಂದ ಮಾರ್ಗಸೂಚಿ ದರಗಳ ಪರಿಷ್ಕರಣೆಗೆ ಅನುಸಾರ ಶುಲ್ಕಗಳ ದರಗಳು

ಸ್ವಯಂಚಾಲಿತವಾಗಿ ಪರಿಷ್ಕರಣೆಗೊಳ್ಳುತ್ತದೆ. ಪ್ರಸ್ತುತ ದಿನಾಂಕ: 01-04-2016ರಂದು ಮಾರ್ಗಸೂಚಿದರಗಳು ಪರಿಷ್ಕರಣೆಗೊಂಡಿದ್ದು ಇದರ ಅನುಸಾರ ಶುಲ್ಕಗಳೂ ಸಹ ಪರಿಷ್ಕರಣೆಗೊಂಡಿರುತ್ತದೆ. ಆದುದರಿಂದ ಮೇಲ್ಕಂಡ ಕೋಷ್ಟಕದ ಕ್ರ.ಸಂ. (1) ರಿಂದ (5) ರವರೆಗಿನ ಶುಲ್ಕಗಳನ್ನು ಪರಿಷ್ಕರಿಸುವ ಅವಶ್ಯಕತೆ ಇರುವುದಿಲ್ಲ.

ಉಳಿದಂತೆ ಉತ್ತಮತೆ ಶುಲ್ಕ ಮತ್ತು ಭದ್ರತಾ ಠೇವಣಿಯ ದರಗಳನ್ನು ಸರ್ಕಾರದ ಆದೇಶ/ ಅಧಿಸೂಚನೆಗಳ ಅಡಿಯಲ್ಲಿ ನಿಗಧಿಪಡಿಸಿದ್ದು ಉತ್ತಮತೆ ಶುಲ್ಕದ ದರವನ್ನು ಸುಮಾರು 20 ವರ್ಷಗಳ ಹಿಂದೆ ನಿಗಧಿ ಮಾಡಲಾಗಿದ್ದು ಭದ್ರತಾ ಠೇವಣಿಯ ದರವನ್ನು 2007ನೇ ಇಸವಿಯಲ್ಲಿ ಅಂದರೆ ಸುಮಾರು 10 ವರ್ಷಗಳ ಹಿಂದೆ ನಿಗಧಿಪಡಿಸಲಾಗಿರುತ್ತದೆ. ಪ್ರಸ್ತುತ ಈ ದರಗಳನ್ನು ಆಧರಿಸಿ ಸದರಿ ಶುಲ್ಕಗಳನ್ನು ಪಾವತಿಸಿಕೊಳ್ಳಲಾಗುತ್ತಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಉದ್ದೇಶಗಳಿಗೆ ಕಟ್ಟಡ ನಿರ್ಮಾಣಗಳಿಗೆ ಮಂಜೂರಾತಿಯನ್ನು ನೀಡಲಾಗುತ್ತಿದೆ. ಈ ರೀತಿ ಮಂಜೂರಾತಿ ನೀಡುವಾಗ ಅಪಾರ್ಟ್‌ಮೆಂಟ್‌ಗಳು ಮತ್ತು ವಾಣಿಜ್ಯ ಕಟ್ಟಡಗಳ ಉಲ್ಲಂಘನೆಗಳನ್ನು ತಡೆಯಲು ವಲಯ ನಿಯಮಾವಳಿಗಳಲ್ಲಿ ಕಟ್ಟಡ ನಿರ್ಮಾಣ ವಿಸ್ತೀರ್ಣಕ್ಕೆ ಚ.ಮೀ. ಒಂದಕ್ಕೆ ರೂ.100/-ರ ದರದಲ್ಲಿ ಭದ್ರತಾ ಠೇವಣಿ (Security Deposit) ಯನ್ನು ಪಾವತಿಸಿಕೊಳ್ಳಲಾಗುತ್ತಿದೆ. ಈ ದರವನ್ನು 2007-08ನೇ ಸಾಲಿನಲ್ಲಿ ಮಂಜೂರಾದ ಮಹಾಯೋಜನೆಯ ವಲಯ ನಿಯಮಾವಳಿಗಳಲ್ಲಿ ನಿಗಧಿಪಡಿಸಲಾಗಿದೆ.

ಕಟ್ಟಡ ನಿರ್ಮಾಣದ ಉಲ್ಲಂಘನೆಗಳನ್ನು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆ ಇದ್ದು, ಈ ನಿಟ್ಟಿನಲ್ಲಿ ನಕ್ಷೆ ಮಂಜೂರಾತಿ ಹಂತದಲ್ಲಿ ಪಾವತಿಸಿಕೊಳ್ಳುವ ಭದ್ರತಾ ಠೇವಣಿಯು ಒಂದು ಉಪಕ್ರಮವಾಗಿರುತ್ತದೆ. ಪ್ರಸ್ತುತ ಚಾಲ್ತಿಯಲ್ಲಿರುವ ಭದ್ರತಾ ಠೇವಣಿ ದರವನ್ನು ನಿಗಧಿಪಡಿಸಿ 10 ವರ್ಷಗಳು ಕಳೆದಿದ್ದು, ಈ ಅವಧಿಯಲ್ಲಿ ಸ್ವತ್ತುಗಳ ಮಾರ್ಗಸೂಚಿ ದರ ಹಾಗೂ ಲೋಕೋಪಯೋಗಿ ಇಲಾಖೆಯ ಇಲಾಖೆಯ ದರಪಟ್ಟಿಯಲ್ಲಿನ ಕಾಮಗಾರಿ ನಿರ್ವಹಣೆಯ ದರಗಳು ಮತ್ತು ದೈನಂದಿನ ಬದುಕಿನ ಸಾಮಾನ್ಯ ದರಗಳು ಮತ್ತು ಇತರೆ ಸೇವೆಗಳ ದರಗಳು ಹಣದುಬ್ಬರದಿಂದಾಗಿ ಕನಿಷ್ಠ ಎರಡೂ ಪಟ್ಟಿಗೂ ಹೆಚ್ಚು ಜಾಸ್ತಿಯಾಗಿರುತ್ತವೆ. ಇದಕ್ಕೆ ಸಮಾನಾಂತರವಾಗಿ ಪಾಲಿಕೆಯು ನಾಗರೀಕ ಸೇವೆಗಳನ್ನು ನೀಡಲು ಭರಿಸುತ್ತಿರುವ ವೆಚ್ಚಗಳು ಸಹ ಹೆಚ್ಚಳಗೊಂಡಿರುತ್ತದೆ.

ಹೀಗಾಗಿ ಕಟ್ಟಡ ಪರವಾನಗಿ ಸಂಬಂಧದ ವಿವಿಧ ಶುಲ್ಕಗಳನ್ನು ನಿವೇಶನದ ಮಾರ್ಗಸೂಚಿ ದರಗಳ ಶೇಕಡಾವಾರು ಪ್ರಮಾಣದಲ್ಲಿ ಪಾಲಿಕೆಯ ಸುತ್ತೋಲೆ ಸಂಖ್ಯೆ:ಹೆನಿನಯೋ/ಜೆ.ಡಿ.(ಉ) /ಡಿಎಂ3/ಪಿಆರ್/320/2015-16 ದಿನಾಂಕ: 04-09-2015ರಲ್ಲಿ ನಿಗಧಿಪಡಿಸಿರುವಂತೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 18(1)ರ ಅನ್ವಯ ಪಾವತಿಸಿಕೊಳ್ಳುವ ಶುಲ್ಕ ಮತ್ತು ವಲಯ ನಿಯಮಾವಳಿಗಳ ಅವಕಾಶಗಳಂತೆ ಪಾವತಿಸಿಕೊಳ್ಳುವ ಭದ್ರತಾ ಠೇವಣಿಯ ದರವನ್ನು ನಿವೇಶನದ ಚಾಲ್ತಿ ಮಾರ್ಗಸೂಚಿ ದರ'ದ ಶೇಕಡಾವಾರು ಪ್ರಮಾಣದಲ್ಲಿ ಪಾವತಿಸಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ.

ಪ್ರಸ್ತುತ ಪಾವತಿಸಿಕೊಳ್ಳುತ್ತಿರುವ ಉತ್ತಮತೆ ಶುಲ್ಕ ಮತ್ತು ಭದ್ರತಾ ಠೇವಣಿಯ ದರಗಳನ್ನು ದ್ವಿಗುಣಗೊಳಿಸಿ ಈ ಕೆಳಕಂಡಂತೆ ಮರುನಿಗಧಿಪಡಿಸಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದಾಗಿದೆ.

| ಕ್ರ.ಸಂ. | ಶುಲ್ಕಗಳ ವಿವರ | ಚಾಲ್ತಿದರ (ಪ್ರತಿ ಚ.ಮೀ.ಗೆ ದರ ರೂ.ಗಳಲ್ಲಿ) | | | ಪ್ರಸ್ತಾಪಿತ ದರ ನಿವೇಶನದ ಚಾಲ್ತಿ ಮಾರ್ಗಸೂಚಿ ಬೆಲೆಯ ಶೇಕಡಾ ಪ್ರಮಾಣದಲ್ಲಿ | | |
|---|---|---|---|---|---|---|---|
| | | ವಸತಿ | ವಾಣಿಜ್ಯ | ಕೈಗಾರಿಕೆ | ವಸತಿ | ವಾಣಿಜ್ಯ | ಕೈಗಾರಿಕೆ |
| 01 | **KTCP ಕಾಯ್ದೆ 1961 ರ ಕಲಂ 18(1)ರಂತೆ ಶುಲ್ಕ (ಉತ್ತಮತೆ ಶುಲ್ಕ)**<br>(ಅ)ನಿವೇಶನ ವಿಸ್ತೀರ್ಣಕ್ಕೆ<br>(ಬ)ಕಟ್ಟಡಕ್ಕೆ ವಿಸ್ತೀರ್ಣಕ್ಕೆ | 20.00<br>2.00 | 75.00<br>4.00 | 40.00<br>2.50 | 0.08%<br>0.008% | 0.30%<br>0.016% | 0.16%<br>0.01% |
| 02 | **ಭದ್ರತಾ ಠೇವಣಿ** | 100.00 | | -- | 0.4% | | |
| ವಿ.ಸೂ:- ಚಾಲ್ತಿದರಗಳನ್ನು ದ್ವಿಗುಣಗೊಳಿಸಿ ಸರಾಸರಿ ಮಾರ್ಗಸೂಚಿ ದರ ರೂ.50,000/-ಗಳಿಗೆ ಪ್ರಸ್ತಾಪಿತ ದರಗಳನ್ನು ಪರಿವರ್ತಿಸಿ ಶೇಕಡಾವಾರು ದರಗಳನ್ನು ಲೆಕ್ಕಾಚಾರ ಮಾಡಲಾಗಿದೆ. ಆದುದರಿಂದ ಮೇಲ್ಕಂಡ ಶುಲ್ಕಗಳ ದರಗಳನ್ನು ಲೆಕ್ಕಾಚಾರ ಮಾಡುವಾಗ ನಿವೇಶನದ ಮಾರ್ಗಸೂಚಿ ಬೆಲೆಯು ರೂ.50,000/-ಗಳಿಗಿಂತ ಕಡಿಮೆ ಇದ್ದಲ್ಲಿ ಶುಲ್ಕಗಳ ಲೆಕ್ಕಾಚಾರಕ್ಕಾಗಿ ಕನಿಷ್ಟ ರೂ.50,000/-ಗಳನ್ನು ನಿವೇಶನದ ಮಾರ್ಗಸೂಚಿ ದರವಾಗಿ ಪರಿಗಣಿಸತಕ್ಕದ್ದು. | | | | | | | |

ಮೇಲ್ಕಂಡಂತೆ, ಉತ್ತಮತೆ ಶುಲ್ಕ ಮತ್ತು ಭದ್ರತಾ ಠೇವಣಿ ದರಗಳನ್ನು ಪರಿಷ್ಕರಿಸಿ ನಿಗಧಿಪಡಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಸಂಬಂಧ ಪಾಲಿಕೆಯ ತೆರಿಗೆ ಮತ್ತು ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಕೋರಿ ಟಿಪ್ಪಣಿಯನ್ನು ಮಂಡಿಸಿದೆ.

***-ಮುಂದೂಡಿದೆ-***

***16]. ವಿಷಯದ ಸಂಖ್ಯೆ: ತೆಆಸ್ಥಾಸ/171/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 06.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ದಿನಾಂಕ: 23.01.2017 ರಂದು ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ಸಂ:54ರವರು ಮಾನ್ಯ ಆಯುಕ್ತರು ರವರಿಗೆ ವಿಳಾಸಿಸಿ ಪತ್ರ ನೀಡಿ ವಾರ್ಡ್ ಸಂಖ್ಯೆ:54 ಹೂಡಿ ವ್ಯಾಪ್ತಿಯ ಒಳಪಟ್ಟು 20 ಅಭಿವೃದ್ಧಿ ಕಾಮಗಾರಿಗಳನ್ನು 2013-14 ಹಾಗೂ 2014-15ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-1771 ಹಾಗೂ ಪಿ-2201 ಅನುದಾನದಡಿ ವಿವಿಧ ದಿನಾಂಕಗಳಂದು ಒಟ್ಟು ರೂ.335.96 ಲಕ್ಷಗಳಿಗೆ ಕಾಮಗಾರಿ ಸಂಕೇತ ನೀಡಿರುವ ಕಾಮಗಾರಿಗಳನ್ನು ಫ್ರೀಜ್ ಮಾಡಿರುವುದನ್ನು ಡಿ-ಫ್ರೀಜ್ ಮಾಡಲು ಕೋರಿದ್ದು, ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| Sl no | Name of the work | Job code | Est Amount |
|---|---|---|---|
| 1. | Improvement to roads at Kumbena Agrhara village in Hoody ward no: 54 | 054-13-000015 | 19.99 |
| 2. | Improvement to drains & roads at Kumbena Agrhara village in Hoody ward no: 54 | 054-13-000016 | 10.00 |
| 3. | Improvements to roads at Belathur village in ward no:54 | 054-14-000019 | 19.98 |

| | | | |
|---|---|---|---|
| 4. | Improvements to roads at Sadaramangala village in ward no:54 | 054-14-000016 | 10.00 |
| 5. | Improvements to cross roads in Bilishivale & Geddalahalli road at Byrathi village in Hoody ward no:54 | 054-13-000007 | 19.99 |
| 6. | Improvement to roads and drains at Ramaiah layout, Chikkabyrathi in Byarathi village in ward no-54 | 054-14-000009 | 10.00 |
| 7. | Improvement to roads and drains at Byarathi Bande village in ward no-54 | 054-15-000003 | 10.00 |
| 8. | Improvement to balance roads and drains at Byarathi Village in ward no-54 | 054-15-000004 | 10.00 |
| 9. | Improvement to roads and drains at Ayyappanagara (phase-1) in ward no -54 | 054-15-000005 | 20.00 |
| 10. | Improvement to roads and drains at Ayyappanagara (phase-2) in ward no -54 | 054-15-000006 | 20.00 |
| 11. | Improvement to roads and drains at Ayyappanagara (phase-3) in ward no -54 | 054-15-000007 | 20.00 |
| 12. | Improvement to roads and drains at Ayyappanagara (phase-4) in ward no -54 | 054-15-000008 | 20.00 |
| 13. | Improvement to roads and drains at Ayyappanagara (phase-5) in ward no -54 | 054-15-000009 | 20.00 |
| 14. | Improvement to roads and drains at Sadaramangala village in ward no -54 | 054-15-000010 | 11.00 |
| 15. | Improvement to roads and drains at Kumbena agrahara in ward no -54 | 054-15-000011 | 15.00 |
| 16. | Improvement to roads and drains at From Beltur to Kadugudi in ward no -54 | 054-15-000012 | 20.00 |
| 17. | Development of roads in Varnasi Chikkaramaiah Layout in Hoody ward no:54 | 054-13-000028 | 20.00 |
| 18. | Development of roads in Ramaiah layout at Varnasi in Hoody ward no:54 | 054-13-000029 | 20.00 |
| 19. | Development of Cross roads at Kumbena Agrahara in Hoody ward no:54 | 054-13-000033 | 20.00 |
| 20. | Asphalting to cross roads of Hanumanthanagara at Bilishivale in Hoody ward no:54 | 054-13-000035 | 20.00 |

ಪಾಲಿಕೆಯ ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ವರದಿ ಮಾಡಿರುವಂತೆ 2016–17ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–1771ನ Spill over works ಗಳಿಗಾಗಿ ರೂ.7500.00 ಲಕ್ಷಗಳ ಮತ್ತು Pending Bills ಗಳಿಗಾಗಿ ರೂ.9000.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ಲೆಕ್ಕಶೀರ್ಷಿಕೆ ಪಿ–2201 ಅಡಿ Spill over works ಗಳಿಗಾಗಿ ರೂ.1000.00 ಲಕ್ಷಗಳ ಮತ್ತು Pending Bills ಗಳಿಗಾಗಿ ರೂ.1000.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು Spill over works/Pending Bills ಗಳ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವ ಬಗ್ಗೆ ಪ್ರಧಾನ ಅಭಿಯಂತರರು ವರದಿ ನೀಡಬೇಕಿದೆ ಎಂದು ತಿಳಿಸಿರುತ್ತಾರೆ.

ಮುಖ್ಯ ಅಭಿಯಂತರರು (ಮಹದೇವಪುರ) ರವರು ವರದಿ ಮಾಡಿರುವಂತೆ ಮೇಲ್ಕಾಣಿಸಿದ ಎಲ್ಲಾ ಕಾಮಗಾರಿಗಳು ಮುಂದುವರೆದ ಕಾಮಗಾರಿಗಳ ಪಟ್ಟಿಯಲ್ಲಿ ಸೇರ್ಪಡೆ ಆಗಿಲ್ಲದೆ ಇರುವುದರಿಂದ ಮತ್ತು ಮೇಲ್ಕಾಣಿಸಿದ ಉಲ್ಲೇಖದ ಅಡಿಯಲ್ಲಿ ಮಾನ್ಯ ಆಯುಕ್ತರವರು ಅನುಮೋದಿಸಿದಂತೆ ಅನುದಾನವನ್ನು re-appropriation ಮಾಡುವ ಷರತ್ತಿಗೆ ಒಳಪಟ್ಟು ಮೇಲ್ಕಾಇಸಿದ ಎಲ್ಲಾ 20 ಕಾಮಗಾರಿಗಳನ್ನು ಡಿ-ಫ್ರೀಜ್ ಮಾಡುವ ಪ್ರಸ್ತಾವನೆಯ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**_–ಮುಂದೂಡಿದೆ–_**

**_17]. ವಿಷಯದ ಸಂಖ್ಯೆ: ತೆಆಸ್ಥಾಸ/173/2016–17_**

ಆಯುಕ್ತರ ದಿನಾಂಕ: 09.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015–16 ರ 14ನೇ ಹಣಕಾಸು ಆಯೋಗದ ಅನುದಾನದಡಿ ಸರ್ಕಾರದ ಆದೇಶ ಸಂಖ್ಯೆ ನಅಇ 524 ಎಸ್.ಎಫ್.ಸಿ 2015 / ದಿನಾಂಕ 05–01–2016 ರಲ್ಲಿ ರೂ. 17033.00 ಲಕ್ಷಗಳ ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ಅನುಮೋದನೆ ನೀಡಿದೆ. ಸಾಮೂಹಿಕ / ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ ಕಾಮಗಾರಿಗಳಿಗೆ ರೂ. 1098.05 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ವಲಯವಾರು ಅನುದಾನ ನಿಗದಿ ಮಾಡಿರುತ್ತದೆ. ರೂ. 1098.05 ಲಕ್ಷಗಳ ಪೈಕಿ 2015–16 ನೇ ಸಾಲಿನಲ್ಲಿ ಕ್ರಿಯಾಯೋಜನೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿರುವ ರೂ. 288.38 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಕ್ರಿಯಾ ಯೋಜನೆ ಸಲ್ಲಿಸದೇ ಇದ್ದುದರಿಂದ ಉಳಿದ ವಲಯಗಳ ಮೊತ್ತ ರೂ. 809.67 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಿರುವುದಿಲ್ಲ.

ಬೊಮ್ಮನಹಳ್ಳಿ ವಲಯದ ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ ಕಾಮಗಾರಿಗಳಿಗೆ ರೂ. 88.73 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರು ಬೆಂಗಳೂರು (ದಕ್ಷಿಣ) ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ 184 ಮತ್ತು ವಾರ್ಡ್ 196ರ ಒಟ್ಟು ಮೊತ್ತ ರೂ. 88.73 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಮುಖ್ಯ ಲೆಕ್ಕಾಧಿಕಾರಿಗಳು 2015–16 ರ 14ನೇ ಹಣಕಾಸು ಆಯೋಗದ ಅನುದಾನದಡಿ ಮಂಜೂರಾಗಿದ್ದ ರೂ. 170.33 ಕೋಟಿಗಳು ಪಾಲಿಕೆಗೆ ಬಿಡುಗಡೆಯಾಗಿರುವುದಾಗಿ ಮತ್ತೊಂದು ಕಡತದಲ್ಲಿ ವರದಿಸಿರುವ ಮೇರೆಗೆ ಹಾಗೂ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ 2016–17ರ 14ನೇ ಹಣಕಾಸು ಆಯೋಗದ ಅನುದಾನದ ಲೆಕ್ಕಶೀರ್ಷಿಕೆ ಪಿ–3110 ಅಡಿ ಅಳವಡಿಸಿಕೊಂಡು ರೂ. 461.37 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. 2015–16ರ ಸಾರ್ವಜನಿಕ ಶೌಚಾಲಯ ಮತ್ತು ಸೆಪ್ಟೇಜ್‌ಗಳ ನಿರ್ವಹಣೆ ವಿವರಗಳು ಈ ಕೆಳಕಂಡಂತಿದೆ.

**(Rs in Lakhs)**

| Zone | Allocation | Job No. Issued | | Balance |
|---|---|---|---|---|
| | | 2015-16 | 2016-17 | |
| Dasarahalli | 44.37 | 44.37 | | 0.00 |
| West | 244.01 | 244.01 | | 0.00 |
| South | 244.01 | 243.91 | | 0.00 |
| East | 244.01 | | 243.91 | 0.00 |
| Raja Rajeswarinagar | 77.64 | | | 77.64 |
| Yalahanka | 61.00 | | | 61.00 |

| | | | | |
|---|---|---|---|---|
| Mahadevapura | 94.28 | | | 94.28 |
| Bommanahalli | 88.73 | | | 88.73 |
| **Total** | **1098.05** | **288.38** | **461.37** | **348.20** |

2015–16ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನ ಬಿಡುಗಡೆಯಾಗಿರುವುದರಿಂದ 2016–17ರ 14ನೇ ಹಣಕಾಸು ಆಯೋಗದ ಅನುದಾನದ ಲೆಕ್ಕಶೀರ್ಷಿಕೆ ಪಿ–3110 ಅಡಿ ಅನುದಾನ ಅಳವಡಿಸಿಕೊಂಡು ಬೊಮ್ಮನಹಳ್ಳಿ ವಲಯದ ರೂ.88.73 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

***18]. ವಿಷಯದ ಸಂಖ್ಯೆ: ತೆಆಸ್ಥಾಸ/179/2016–17***

ಆಯುಕ್ತರ ದಿನಾಂಕ: 02.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮೆ॥ ರಕ್ಷಾ ಫೌಂಡೇಷನ್ ಸಂಸ್ಥೆ (ರಿ) ಸಂಖ್ಯೆ 1813, 41ನೇ ಕ್ರಾಸ್ 22ನೇ ಮುಖ್ಯರಸ್ತೆ 9ನೇ ಬ್ಲಾಕ್ ಜಯನಗರ ಬೆಂಗಳೂರು 560069 ರವರು ಹಳ್ಳಿಗಳ ಶಾಲಾ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಉಚಿತ ಪುಸ್ತಕ ವಿತರಣೆ ವ್ಯಾಸಂಗದ ಖರ್ಚು ಭರಿಸುವುದು ಇತರೆ ಸಾಮಾಜಿಕ ಕಾರ್ಯಕ್ರಮಗಳನ್ನು ಏರ್ಪಡಿಸಲು 2016–17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 24, ಪಿ ಕೋಡ್ 0048ರ ಅಡಿಯಲ್ಲಿ ಅನುಬಂಧ–2ರ ಕ್ರಮಸಂಖ್ಯೆ 19ರಲ್ಲಿ ಮೀಸಲಿಟ್ಟಿರುವ ರೂ 3.00 (ಮೂರು) ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ಕೋರಿ ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂದ ಸದರಿ ಸಂಸ್ಥೆಯವರು ಕೈಗೊಂಡಿರುವ ಉಚಿತ ಪುಸ್ತಕ ವಿತರಣೆ ವ್ಯಾಸಂಗದ ಖರ್ಚು ಭರಿಸುವುದು ಮಕ್ಕಳ ಆರೋಗ್ಯ ಶಿಬಿರ ಹಾಗೂ ಇತರೆ ಸಾಮಾಜಿಕ ಕಾರ್ಯಕ್ರಮಗಳನ್ನು ಏರ್ಪಡಿಸಲು ಲೆಕ್ಕಶೀರ್ಷಿಕೆ 24, ಪಿ ಕೋಡ್ 0048ರ ಆಯವ್ಯಯ 2016–17ನೇ ಸಾಲಿನ ಅನುದಾನ ಮತ್ತು ಕೊಡುಗೆ ಅಡಿಯಲ್ಲಿ ಅನುಬಂದ–2ರ ಕ್ರಮ ಸಂಖ್ಯೆ 19 ರಲ್ಲಿ ಸದರಿ ಸಂಸ್ಥೆಗೆ 3–00 (ಮೂರು) ಲಕ್ಷಗಳನ್ನು ಮೀಸಲಿರಿಸಿರುವ ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2016–17ನೇ ಸಾಲಿನ ಆಯವ್ಯಯ ಅನುಬಂಧ–2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ. 3.00 (ಮೂರು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***19]. ವಿಷಯದ ಸಂಖ್ಯೆ: ತೆಆಸ್ಥಾಸ/181/2016–17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪೂರ್ವ ವಲಯ, ಪುಲಕೇಶಿನಗರ ವಿಭಾಗದ ವಾರ್ಡ್ ಸಂಖ್ಯೆ:60ರ ಸಗಾಯ್‌ಪುರಂ ವ್ಯಾಪ್ತಿಯಲ್ಲಿ ಹಿಂದೆ ಸಾರ್ವಜನಿಕರ ಶೌಚಾಲಯಗಳನ್ನು (1) 3ನೇ ಅಡ್ಡರಸ್ತೆ ಹಳೆ ಬಾಗಲೂರು ಬಡಾವಣೆ, (2) ಪಿ.ಕೆ.ಕಾಲೋನಿ ಹಳೆ ಬಾಗಲೂರು ಬಡಾವಣೆ, (3) 19ನೇ ಅಡ್ಡರಸ್ತೆ ಹಳೆ ಬಾಗಲೂರು ಬಡಾವಣೆ, ಮತ್ತು (4) 11ನೇ ಅಡ್ಡ ರಸ್ತೆ ಹಳೆ ಬಾಗಲೂರು ಬಡಾವಣೆಗಳಲ್ಲಿನ ಹಳೆ ಶೌಚಾಲಯಗಳನ್ನು ದುರಸ್ಥಿ ಪರಿಸುವಂತೆ ಮಾನ್ಯ ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸದಸ್ಯರು ಸೂಚಿಸಿದ್ದು ಅಂದಾಜುಪಟ್ಟಿಯ ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1. | Repairs and Renovation of toilets at 3rd cross road old bagalor layout in ward no 60 | 10.00 |
| 2. | Repairs and Renovation of toilets at PK Colony old bagalor layout in ward no 60 | 10.00 |
| 3. | Repairs and Renovation of toilets at 9th cross road old bagalor layout in ward no 60 | 12.50 |
| 4. | Repairs and Renovation of toilets at 11th cross road old bagalor layout in ward no 60 | 6.50 |
| 5. | Construction of Toilet block at Charles ground in ward no 60 | 25.00 |
| | **TOTAL** | **64.00** |

ಮೇಲ್ಕಂಡ ಕಾಮಗಾರಿಗಳಿಗೆ ಮುಖ್ಯ ಅಭಿಯಂತರರು (ಪೂರ್ವ) ರವರು 14ನೇ ಹಣಕಾಸು ಯೋಜನೆಯ ಅನುದಾನದಡಿ ಜಾಬ್‌ಕೋಡ್ ನೀಡಲು ಕೋರಿದ್ದು ಅದರಂತೆ ಮುಖ್ಯ ಆರ್ಥಿಕ ಅಧಿಕಾರಿಗಳು ಈ ಕೆಳಕಂಡಂತೆ ಅನುದಾನ ಲಭ್ಯತೆಯ ಬಗ್ಗೆ ವರದಿ ಮಾಡಿರುತ್ತಾರೆ.

2015–16ರ 14ನೇ ಹಣಕಾಸು ಆಯೋಗದ ಅನುದಾನದಡಿ ಸರ್ಕಾರದ ಆದೇಶ ಸಂಖ್ಯೆ:ನಅಇ/524/ಎಸ್‌ಎಫ್‌ಸಿ/ 2015, ದಿನಾಂಕ: 05–01–2016ರಲ್ಲಿ ರೂ.17033.00ಲಕ್ಷಗಳ ಕ್ರಿಯಾಯೋಜನೆಯ ಕಾಮಗಾರಿಗಳಿಗೆ ಅನುಮೋದನೆ ನೀಡಿದೆ, ರೂ.13524.33 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲಾಗಿರುತ್ತದೆ.

- ಸಾಮೂಹಿಕ/ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ ಕಾಮಗಾರಿಗಳಿಗೆ ರೂ.1098.05 ಲಕ್ಷಗಳ ಅನುದಾನ ನಿಗಧಿಪಡಿಸಿದ್ದು ವಲಯವಾರು ಅನುದಾನ ನಿಗಧಿ ಮಾಡಿರುತ್ತಾರೆ. ರೂ.1098.05 ಲಕ್ಷಗಳ ಪೈಕಿ 2015–16ನೇ ಸಾಲಿನಲ್ಲಿ ಕ್ರಿಯಾಯೋಜನೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿರುವ ರೂ.288.38ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲಾಗಿದೆ. ಕ್ರಿಯಾಯೋಜನೆ ಸಲ್ಲಿಸದೇ ಇದ್ದದರಿಂದ ಉಳಿದ ವಲಯಗಳ ಮೊತ್ತ ರೂ.809.67 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಿರುವುದಿಲ್ಲ.
- ಪೂರ್ವ ವಲಯದ ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ ಕಾಮಗಾರಿಗಳಿಗೆ ರೂ.244.01ಲಕ್ಷಗಳ ಅನುದಾನ ನಿಗಧಿಪಡಿಸಿದ್ದು, ಮುಖ್ಯ ಅಭಿಯಂತರರು(ಪೂರ್ವ)ರವರು ಸಲ್ಲಿಸಿದ್ದ ರೂ.153.46 ಲಕ್ಷಗಳ ಕ್ರಿಯಾ ಯೋಜನೆಗೆ ಈಗಾಗಲೇ ಜಾಬ್‌ಸಂಖ್ಯೆ ನೀಡಬೇಕಿದೆ. ವಾರ್ಡ್ 60ರ ರೂ.64.00ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲು ಕೋರಿರುತ್ತಾರೆ.
- ಮುಖ್ಯ ಲೆಕ್ಕಾಧಿಕಾರಿಗಳು 2015–16ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನದಡಿ ಮಂಜೂರಾಗಿದ್ದ ರೂ.170.33 ಕೋಟಿಗಳು ಪಾಲಿಕೆಗೆ ಬಿಡುಗಡೆಯಾಗಿರುವುದರಿಂದ ಪೂರ್ವ ವಲಯದ ಶೌಚಾಲಯದಿಂದ ಪ್ರಸ್ಥವನೆ ಮೊತ್ತ ರೂ.153.46 ಲಕ್ಷಗಳ ಅನುದಾನವನ್ನು 2016–17ರ 14ನೇ ಹಣಕಾಸು ಆಯೋಗದ ಅನುದಾನದ ಲೆಕ್ಕ ಶೀರ್ಷಿಕೆ ಪಿ–3110 ಅಡಿ ಅಳವಡಿಸಿಕೊಂಡು ಈಗಾಗಲೇ ಜಾಬ್‌ಸಂಖ್ಯೆ ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ 2015-16ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನ ಬಿಡುಗಡೆಯಾಗಿರುವುದರಿಂದ 2016-17ರ ಹಣಕಾಸು ಆಯೋಗದ ಅನುದಾನದ ಲೆಕ್ಕ ಶೀರ್ಷಿಕೆ ಪಿ-3110 ಅಡಿ ಅನುದಾನ ಅಳವಡಿಸಿಕೊಂಡು ರೂ.64.00 ಲಕ್ಷಗಳಿಗೆ ಜಾಬ್ ಸಂಖ್ಯೆ ನೀಡಲು ಹಾಗೂ ಘಟನೋತ್ತರ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13.03.2017ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***20]. ವಿಷಯದ ಸಂಖ್ಯೆ: ತೆಆಸ್ಥಾಸ/182/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮುಖ್ಯ ಅಭಿಯಂತರರು (ದಕ್ಷಿಣ) ವಲಯದ ವ್ಯಾಪ್ತಿಗೆ ಬರುವ ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ) ವಿಭಾಗದ ಕೆಳಕಂಡ ಕಾಮಗಾರಿಯನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿತ್ತು.

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) |
|---|---|---|
| 1 | Supply of Date Entry Operation Services to Bruhat Bangalore Mahanagara Palike Joint Commissioner (South) | 1,38,00,000/- |

ಸದರಿ ಕಾಮಗಾರಿಗೆ ಇ-ಪ್ರೋಕ್ಯೂರ್‌ಮೆಂಟ್ ಮುಖೇನ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕಟಣೆಯನ್ನು ವಿಜಯವಾಣಿ ಮತ್ತು ದಿ ನ್ಯೂ ಇಂಡಿಯನ್ ಇಕ್ಸಪ್ರೆಸ್ ದಿನಪತ್ರಿಕೆಗಳಲ್ಲಿ ದಿ:05.05.2016 ರಂದು ಪ್ರಕಟಿಸಲಾಗಿತ್ತು. ಸದರಿ ಟೆಂಡರ್‌ನಲ್ಲಿ ಏಕೈಕ ಗುತ್ತಿಗೆದಾರರು ಭಾಗವಹಿಸಿದ್ದು ವಿವರಗಳು ಕೆಳಕಂಡಂತಿರುತ್ತದೆ.

| ಕ್ರ. ಸಂ | ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) | ಪ್ರತಿ ಕಂಪ್ಯೂಟರ್ ಆಪರೇಟರ್‌ಗೆ ಪ್ರತಿ ಮಾಹೆಗೆ ನಮೂದಿಸಿರುವ ಮೊತ್ತ | ಎರಡು ವರ್ಷಗಳಿಗೆ ಮೊತ್ತ |
|---|---|---|---|---|
| 1 | ಶ್ರೀ.ಸಿ.ವಿ.ಉದಯ್ ಕುಮಾರ್ | 1,38,00,000/- | 12,520.00 (ಎಲ್ಲಾ ತೆರಿಗೆಗಳು ಸೇರಿ) | 75 * 12,520 * 24 = 2,25,36,000.00 |

ಮೇಲ್ಕಂಡ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ, ಏಕೈಕ ಬಿಡ್ಡುದಾರರು ಶ್ರೀ.ಸಿ.ವಿ.ಉದಯ್‌ಕುಮಾರ್, (ಮೆ॥ಉದ್ಯೋಗ್ ಎಂಟರ್‌ಪ್ರೈಸಸ್) ರವರು ನಮೂದಿಸಿರುವ ದರ ಎಲ್ಲಾ ತೆರಿಗೆ ಸೇರಿ ಪ್ರತಿ ಕಂಪ್ಯೂಟರ್ ಆಪರೇಟರ್‌ಗೆ ರೂ.12,520/- ಗಳಂತೆ ಒಟ್ಟು 75 ಕಂಪ್ಯೂಟರ್ ಆಪರೇಟರ್‌ಗಳಿಗೆ ಒಟ್ಟು 24 ತಿಂಗಳ ಗುತ್ತಿಗೆ ಅವಧಿಗೆ ನೀಡಬೇಕಾಗಿರುವ ಒಟ್ಟು ವೇತನದ ಮೊತ್ತ (75 * 12,520/- * 24)

ರೂ.2,25,36,000/-) ಗಳು ಆಗಿರುವ ಕಾರಣ ಸದರಿ ಟೆಂಡರ್ ಅನುಮೋದನೆಗಾಗಿ ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ) ರವರು ಕಡತವನ್ನು ಸಲ್ಲಿಸಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ) ರವರ ಪ್ರಸ್ತಾವನೆಯಂತೆ, ಗುತ್ತಿಗೆದಾರರಾದ ಶ್ರೀ.ಸಿ.ವಿ.ಉದಯ್‌ಕುಮಾರ್, (ಮೆ॥ಉದ್ಯೋಗ್ ಎಂಟರ್‌ಪ್ರೈಸಸ್) ರವರು ನಮೂದಿಸಿರುವ ದರ ಎಲ್ಲಾ ತೆರಿಗೆ ಸೇರಿ ಪ್ರತಿ ಕಂಪ್ಯೂಟರ್ ಆಪರೇಟರ್‌ಗೆ ರೂ.12,520/- ಗಳಂತೆ ಒಟ್ಟು 75 ಕಂಪ್ಯೂಟರ್ ಆಪರೇಟರ್‌ಗಳಿಗೆ ಒಟ್ಟು 24 ತಿಂಗಳ ಗುತ್ತಿಗೆ ಅವಧಿಗೆ ನೀಡಬೇಕಾಗಿರುವ ಒಟ್ಟು ವೇತನದ ಮೊತ್ತ (75 * 12,520/- * 24) ರೂ.2,25,36,000/-) ಗಳು ಸದರಿ ಟೆಂಡರ್‌ಗೆ ಅನುಮೋದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**_-ಮುಂದೂಡಿದೆ-_**

**_21]. ವಿಷಯದ ಸಂಖ್ಯೆ: ತೆಆಸ್ಥಾಸ183//2016-17_**

ಆಯುಕ್ತರ ದಿನಾಂಕ: 12-03-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಧಾರಿಣಿ ಮಹಿಳಾ ಸಂಘ (ರಿ) ಸಂಖ್ಯೆ 4, 3ನೇ ಹಂತ, 4ನೇ ಬ್ಲಾಕ್ ಬಸವೇಶ್ವರ ನಗರ ಬೆಂಗಳೂರು 560079 ರವರು ಮಹಿಳಾ ಮತ್ತು ಮಕ್ಕಳ ಸಾಮಾಜಿಕ, ಸಾಂಸ್ಕೃತಿಕ, ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು 2016-17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 24, ಪಿ ಕೋಡ್ 0048ರ ಅಡಿಯಲ್ಲಿ ಅನುಬಂಧ-2ರ ಕ್ರಮಸಂಖ್ಯೆ 30ರಲ್ಲಿ ಮೀಸಲಿಟ್ಟಿರುವ ರೂ 5.00 (ಐದು) ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ಕೋರಿ ಮನವಿಸಲ್ಲಿಸಿರುತ್ತಾರೆ.

ಈ ಸಂಬಂದ ಸದರಿ ಸಂಸ್ಥೆಯವರು ಕೈಗೊಂಡಿರುವ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಲು ಲೆಕ್ಕಶೀರ್ಷಿಕೆ 24, ಪಿ ಕೋಡ್ 0048ರ ಅಯವ್ಯಯ 2016-17ನೇ ಸಾಲಿನ ಅನುದಾನ ಮತ್ತು ಕೊಡುಗೆ ಅಡಿಯಲ್ಲಿ ಅನುಬಂದ-2ರ ಕ್ರಮ ಸಂಖ್ಯೆ 30 ರಲ್ಲಿ ಸದರಿ ಸಂಸ್ಥೆಗೆ 5-00(ಐದು) ಲಕ್ಷಗಳನ್ನು ಮೀಸಲಿರಿಸಿರುವ ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆಯವ್ಯಯ ಅನುಬಂಧ-2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.5.00 (ಐದು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

**_22]. ವಿಷಯದ ಸಂಖ್ಯೆ: ತೆಆಸ್ಥಾಸ/184/2016-17_**

ಆಯುಕ್ತರ ದಿನಾಂಕ: 27.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸಂಬುದ್ಧ ಸಾಂಸ್ಕೃತಿಕ ಸಂಘ (ನೊ) ಸಂಖ್ಯೆ: 693, 5ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಕಮಲಾನಗರ, ಬೆಂಗಳೂರು-560079. ರವರು ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ 2016-17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 24, ಪಿ ಕೋಡ್ 0048ರ ಅಡಿಯಲ್ಲಿ 3.00 (ಮೂರು) ಲಕ್ಷಗಳ ಅನುದಾನವನ್ನು ಕೋರಿ ಮನವಿ ಸಲ್ಲಿಸಿರುತ್ತಾರೆ.

ತತ್ಸಂಬಂಧ. ಸದರಿ ಸಂಸ್ಥೆಯವರು ಕೈಗೊಂಡಿರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಲೆಕ್ಕಶೀರ್ಷಿಕೆ 24, ಪಿ ಕೋಡ್ 0048ರ ಅಡಿಯಲ್ಲಿ ಆಯವ್ಯಯ 2016-17ನೇ ಸಾಲಿನ ಅನುದಾನ ಮತ್ತು ಕೊಡುಗೆ ಅಡಿಯಲ್ಲಿ ಅನುಬಂದ-2ರ ಕ್ರಮ ಸಂಖ್ಯೆ 15 ರಲ್ಲಿ ಸದರಿ ಸಂಸ್ಥೆಗೆ 3-00(ಮೂರು)

ಲಕ್ಷಗಳನ್ನು ಮೀಸಲಿರಿಸಿದ್ದು ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆಯವ್ಯಯ ಅನುಬಂಧ-2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.3.00 (ಮೂರು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***23]. ವಿಷಯದ ಸಂಖ್ಯೆ: ತೆಆಸ್ಥಾಸ/185/2016-17***

ಆಯುಕ್ತರ ದಿನಾಂಕ: 27.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮೆ॥ ಬಿ.ಟಿ.ಎಂ. ಒಂದನೆ ಹಂತ ನಾಗರೀಕರ ಹಿತರಕ್ಷಣಾ ವೇದಿಕೆ (ನೊ) ಸಂಖ್ಯೆ 1191, 18ನೇ ಮುಖ್ಯರಸ್ತೆ, ಬಿ.ಟಿ.ಎಂ. 1ನೇ ಹಂತ, ಬೆಂಗಳೂರು 560029 ರವರು ಸಾರ್ವಜನಿಕರ ರಕ್ಷಣೆ , ಜನೋಪಯೋಗಿ ಕಾರ್ಯಕ್ರಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲು 2016-17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 24, ಪಿ ಕೋಡ್ 0048ರ ಅಡಿಯಲ್ಲಿ ಅನುಬಂದ 2ರ ಕ್ರಮ ಸಂಖ್ಯೆ 8ರಲ್ಲಿ ಮೀಸಲಿಟ್ಟಿರುವ ಅನುದಾನಾದ ಮೊತ್ತ ರೂ 5.00 (ಐದು) ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿ ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂದ ಸದರಿ ಸಂಸ್ಥೆಯವರು ಕೈಗೊಂಡಿರುವ ಸಾರ್ವಜನಿಕರ ರಕ್ಷಣೆ, ಜನೋಪಯೋಗಿ ಕಾರ್ಯಕ್ರಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲು ಲೆಕ್ಕಶೀರ್ಷಿಕೆ 24, ಪಿ ಕೋಡ್ 0048ರ ಅಡಿಯಲ್ಲಿ ಆಯವ್ಯಯ 2016-17ನೇ ಸಾಲಿನ ಅನುದಾನ ಮತ್ತು ಕೊಡುಗೆ ಅಡಿಯಲ್ಲಿ ಅನುಬಂದ-2ರ ಕ್ರಮ ಸಂಖ್ಯೆ 08ರಲ್ಲಿ ಸದರಿ ಸಂಸ್ಥೆಗೆ 5-00(ಐದು) ಲಕ್ಷಗಳನ್ನು ಮೀಸಲಿರಿಸಿದ್ದು ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆಯವ್ಯಯ ಅನುಬಂಧ-2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.5.00 (ಐದು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***24]. ವಿಷಯದ ಸಂಖ್ಯೆ: ತೆಆಸ್ಥಾಸ/186/2016-17***

ಆಯುಕ್ತರ ದಿನಾಂಕ: 27.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸಾಧನಾ ಸಂಗಮ ಟ್ರಸ್ಟ್ (ರಿ) ಹೆಡ್ ಆಫೀಸ್, "ಕಲಾಯೋಗ" 8ನೇ ಕ್ರಾಸ್, 1ನೇ ಹಂತ, ಬಿ.ಇ.ಎಂ.ಎಲ್ ಎಕ್ಸ್‌ಟೆನ್ಷನ್, ಓಂ ಶಕ್ತಿ ದೇವಸ್ಥಾನದ ಹತ್ತಿರ, ಬಸವೇಶ್ವರ ನಗರ, ಬೆಂಗಳೂರು-560079. ರವರು ನೃತ್ಯ, ಯೋಗ, ಶಾಸ್ತ್ರೀಯ ನೃತ್ಯ ಪ್ರದರ್ಶನ, ವಿಶ್ವ ನೃತ್ಯ ದಿನಾಚರಣೆ, ನೃತ್ಯ ಸಂಗಮ ಸಮಾಗಮ, ನೃತ್ಯ ವಾರ್ಷಿಕೋತ್ಸವ, ಹಾಗೂ ಇನ್ನಿತ್ತರೆ ನೃತ್ಯಗಳ ಕಾರ್ಯಕ್ರಮ ವರ್ಷಂ ಪೂರ್ತಿ ನಡೆಸಲು ಸದರಿ ಸಂಸ್ಥೆಯವರಿಗೆ 2016-17ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಂಘ ಸಂಸ್ಥೆಗಳಿಗಾಗಿ ಮೀಸಲಿಟ್ಟಿರುವ ಮೊತ್ತ ರೂ.500.00 (ಐದು ನೂರು) ಗಳಲ್ಲಿ, ಸದರಿ ಸಂಸ್ಥೆಯವರಿಗೆ ಲೆಕ್ಕಶೀರ್ಷಿಕೆ 24 ಪಿ ಕೋಡ್-0048, ಸಹಾಯಧನ ಹಾಗೂ ಕೊಡುಗೆಗಳು ಅಡಿಯಲ್ಲಿ ಅನುಬಂಧ-2, ಕ್ರಮಸಂಖ್ಯೆ. 11ರಲ್ಲಿ ಮೀಸಲಿಟ್ಟಿರುವ ಮೊತ್ತ ರೂ.5-00 (ಐದು) ಲಕ್ಷಗಳನ್ನು ಬಿಡುಗಡೆ ಮಾಡಲು ಸದರಿ ಸಂಸ್ಥೆಯವರು ಕೋರಿದ್ದು, ಶ್ರೀಯುತ ಎಂ. ಶಿವರಾಜು ಮಾಜಿ ಅಧ್ಯಕ್ಷರು, ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ರವರು ಅಗತ್ಯ ಕ್ರಮಕೈಗೊಂಡು ಧನಸಹಾಯ ನೀಡುವಂತೆ ತಮ್ಮ ಮನವಿಯಲ್ಲಿ ಕೋರಿರುತ್ತಾರೆ.

ಈ ಸಂಬಂಧವಾಗಿ ಸದರಿ ಸಂಸ್ಥೆಯವರ ಕಾರ್ಯಕ್ರಮಕ್ಕೆ 2016-17ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಂಘ ಸಂಸ್ಥೆಗಳಿಗಾಗಿ ಮೀಸಲಿಟ್ಟಿರುವ ಮೊತ್ತ ರೂ.500.00 (ಐದು ನೂರು) ಗಳಲ್ಲಿ, ಸದರಿ ಸಂಸ್ಥೆಯವರಿಗೆ ಲೆಕ್ಕಶೀರ್ಷಿಕೆ 24 ಪಿ ಕೋಡ್-0048, ಸಹಾಯಧನ ಹಾಗೂ ಕೊಡುಗೆಗಳು ಅಡಿಯಲ್ಲಿ ಅನುಬಂಧ-2, ಕ್ರಮಸಂಖ್ಯೆ. 11ರಲ್ಲಿ ಮೀಸಲಿಟ್ಟಿರುವ ಮೊತ್ತ ರೂ.5-00 (ಐದು) ಲಕ್ಷಗಳನ್ನು ನಿಯಮಾನುಸಾರ ಸದರಿ ಸಂಸ್ಥೆಯವರಿಗೆ ಬಿಡುಗಡೆ ಮಾಡುವ ಬಗ್ಗೆ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆಯವ್ಯಯ ಅನುಬಂಧ-2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.5.00 (ಐದು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***25]. ವಿಷಯದ ಸಂಖ್ಯೆ: ತೆಆಸ್ಥಾಸ/187/2016-17***

ಆಯುಕ್ತರ ದಿನಾಂಕ: 27.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ಮಂಜುನಾಥ ಟ್ರಸ್ಟ್ (ನೊ) ಸಂಖ್ಯೆ.1113, ಪೈಪ್‌ಲೈನ್ ರಸ್ತೆ, ಜೆ.ಸಿ.ನಗರ, ಕುರುಬರ ಹಳ್ಳಿ ಬೆಂಗಳೂರು-560086 ರವರು ಸಾರ್ವಜನಿಕ ಜನಪರ ಕಾರ್ಯಕ್ರಮ, ಜನೋಪಯೋಗಿ ಕಾರ್ಯಕ್ರಮ ಹಾಗೂ ಆರೋಗ್ಯ ಶಿಬಿರಗಳನ್ನು ಏರ್ಪಡಿಸಲು 2016-17ನೇ ಸಾಲಿನ ಲೆಕ್ಕಶೀರ್ಷಿಕೆ 24 ಪಿ ಕೋಡ್-0048, ಅಡಿಯಲ್ಲಿ ಅನುದಾನ ಕೋರಿ ರೂ.12.50 (ಹನ್ನೆರಡು ಲಕ್ಷದ ಐವತ್ತು ಸಾವಿರ)ಗಳ ಅಂದಾಜು ಪಟ್ಟಿಯನ್ನು ಮನವಿಯೊಂದಿಗೆ ಸಲ್ಲಿಸಿರುತ್ತಾರೆ.

ಈ ಸಂಬಂಧ ಸದರಿ ಸಂಸ್ಥೆಯವರು ಕೈಗೊಂಡಿರುವ ಸಾರ್ವಜನಿಕ ಜನಪರ ಕಾರ್ಯಕ್ರಮಗಳು, ಜನೋಪಯೋಗಿ ಕಾರ್ಯಕ್ರಮಗಳು ಹಾಗೂ ಆರೋಗ್ಯ ಶಿಬಿರಗಳಿಗಾಗಿ ಲೆಕ್ಕಶೀರ್ಷಿಕೆ 24 ಪಿ ಕೋಡ್-0048, ಅಡಿಯಲ್ಲಿ ಆಯವ್ಯಯ 2016-17ನೇ ಸಾಲಿನ ಅನುದಾನ ಮತ್ತು ಕೊಡುಗೆ ಅಡಿಯಲ್ಲಿ ಅನುಬಂಧ-2 ಕ್ರಮಸಂಖ್ಯೆ. 13ರಲ್ಲಿ ಸದರಿ ಸಂಸ್ಥೆಗೆ ಮೊತ್ತ ರೂ.5-00 (ಐದು) ಲಕ್ಷಗಳನ್ನು ಮೀಸಲಿರಿಸಿದ್ದು, ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆಯವ್ಯಯ ಅನುಬಂಧ-2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.5.00 (ಐದು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***26]. ವಿಷಯದ ಸಂಖ್ಯೆ: ತೆಆಸ್ಥಾಸ/188/2016-17***

ಆಯುಕ್ತರ ದಿನಾಂಕ: 27.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ಶಿವಕುಮಾರ ಹೊಸಮನಿ, ಪ್ರಧಾನ ಕಾರ್ಯದರ್ಶಿ, ಸಮರ್ಪಣ ಸಮಾಜ ಸ್ಪಂದನಾ ಸಂಘ (ರಿ) ಸಂಖ್ಯೆ.7/ಬಿ, 19ನೇ ಸಿ ಮುಖ್ಯ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು-560010 ರವರು ನಿರಂತರವಾಗಿ ಸಮಾಜಮುಖಿ ಚಟುವಟಿಕೆಗಳಲ್ಲಿ ಸಂಘಕ್ಕೆ ಪಾಲಿಕೆಯ ಈ ನಿಟ್ಟಿನಲ್ಲಿ 2016-17ನೇ ಸಾಲಿನಲ್ಲಿ ಸಂಸ್ಕೃತಿ ಮತ್ತು ಕ್ರೀಡೆ, ಲೆಕ್ಕಶೀರ್ಷಿಕೆ-24 ರ ಪಿ-ಕೋಡ್ 0048 ರಲ್ಲಿನ ಕೊಡುಗೆ ಮತ್ತು ಸಹಾಧನ ಅಡಿಯಲ್ಲಿ ಸಹಾಯಧನ ಕೋರಿ ರೂ.6,56,000-00 (ಆರು ಲಕ್ಷ ಐವತ್ತಾರು ಸಾವಿರ)ಗಳ ಅಂದಾಜು ಪಟ್ಟಿ ಸಲ್ಲಿಸಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಹಯಧನವನ್ನು ಕೋರಿರುತ್ತಾರೆ.

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸಮರ್ಪಣ ಸಮಾಜ ಸ್ಪಂದನಾ ಸಂಘ (ರಿ) ಸಹಾಯಧನ ರವರು ಬೃಹತ್ ಬೆಂಗಳೂರು ಮಹನಗರ ಪಾಲಿಕೆ ವತಿಯಿಂದ ಕೋರಿರುವ ಮೊತ್ತವನ್ನು ಮಂಜೂರಾತಿ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆಯವ್ಯಯ ಅನುಬಂಧ-2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.5.00 (ಐದು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

## *27]. ವಿಷಯದ ಸಂಖ್ಯೆ: ತೆಆಸ್ಥಾಸ/189/2016-17*

ಆಯುಕ್ತರ ದಿನಾಂಕ: 27.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಅಧ್ಯಕರು ಅಖಿಲ ಕರ್ನಾಟಕ ಕನ್ನಡ ಚಳುವಳಿ ಕೇಂದ್ರ ಸಮಿತಿ (ನೊ) ರವರು 2016-17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 24, ಪಿ ಕೋಡ್ 0048ರ ಅಡಿಯಲ್ಲಿ ಅನುದಾನವನ್ನು ಪ್ರತಿ ವರ್ಷದಂತೆ 2016ರ ನವೆಂಬರ್ ಮಾಹೆ ದಿನಾಂಕ 1 ರಿಂದ 30 ರ ವರೆಗಿನ ಒಂದು ತಿಂಗಳ ಕಾಲ ಕನ್ನಡ ರಾಜ್ಯೋತ್ಸವವನ್ನು ಕೆಂಪೇಗೌಡ ರಸ್ತೆ ಬನ್ನಪ್ಪ ಪಾರ್ಕ್ ಆಟದ ಮೈದಾನದಲ್ಲಿ ಅದ್ದೂರಿಯಾಗಿ ಆಚರಿಸಿದ್ದು ಸದರಿ ಕಾರ್ಯಕ್ರಮಕ್ಕೆ ರೂ.25.00 (ಇಪ್ಪತ್ತೈದು) ಲಕ್ಷಗಳನ್ನು ಕೋರಿ ಮನವಿ ಸಲ್ಲಿಸಿರುತ್ತಾರೆ.

ತತ್ಸಂಬಂಧ ಮುಖ್ಯಲೆಕ್ಕಾಧಿಕಾರಿಗಳು ಕಂಡಿಕೆ (46) ರಲ್ಲಿ ಲಭ್ಯ ಅನುದಾನ ಪಟ್ಟಿಯಲ್ಲಿ 10.00 (ಹತ್ತು ಲಕ್ಷ) ಇರುವ. ಅಂಶವನ್ನು ನೀಡಿದ್ದು. ಸದರಿ ಸಂಸ್ಥೆಯವರು ಕೈಗೊಂಡಿರುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಕಾರ್ಯಕ್ರಮಗಳಿಗೆ ಆಯವ್ಯಯ 2016-17ನೇ ಸಾಲಿನಲ್ಲಿ ಸಂಸ್ಕೃತಿ ಮತ್ತು ಕ್ರೀಡಾ ಲೆಕ್ಕಶೀರ್ಷಿಕೆ 24 ರಲ್ಲಿನ ಪಿ ಕೋಡ್ 48ರ ಅನುದಾನ ಮತ್ತು ಕೊಡುಗೆ ಅಡಿಯಲ್ಲಿ ಸದರಿ ಸಂಸ್ಥೆಯವರು ಮನವಿಯಲ್ಲಿ ಕೋರಿರುವ ಮೊತ್ತ ಮಂಜೂರು ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ.3.00 (ಮೂರು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

## *28]. ವಿಷಯದ ಸಂಖ್ಯೆ: ತೆಆಸ್ಥಾಸ/190/2016-17*

ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 09-01-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು ದಿನಾಂಕ: 17-08-2016, ಮಾನ್ಯ ಆಯುಕ್ತರ ಸುತ್ತೋಲೆ ಸಂಖ್ಯೆ: ಕಅ/ಕೇಂಕ/ಪಿಆರ್/455/15-16 ದಿ: 21/11/2015, ಮತ್ತು ಮಾನ್ಯ ಆಯುಕ್ತರವರ ಕಛೇರಿ ಆದೇಶದ ಸಂಖ್ಯೆ:ಕ.ಅ/ಕೇ.ಕಂ/ಪಿ.ಆರ್/372/2016-17 ದಿನಾಂಕ: 25.10.2016ರಲ್ಲಿ ಮಹಿಳಾ ಕಲ್ಯಾಣ ಕಾರ್ಯಕ್ರಮಗಳು:- ಪಿ-ಕೋಡ್-1937 ರಡಿಯಲ್ಲಿ ರೂ.1010.00 ಲಕ್ಷಗಳ ಅನುಧಾನವನ್ನು ನಿಗದಿಪಡಿಸಿದ್ದು, ಮಹಿಳಾ ಸದಸ್ಯರ ವಾರ್ಡ್‌ಗಳಿಗೆ ರೂ.5.00 ಲಕ್ಷಗಳ ಅನುದಾನವನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ನಿರ್ಣಯದಂತೆ ಹಂಚಿಕೆ ಮಾಡಲಾಗಿದೆ(ರೂ5.00*100=500.00 ಲಕ್ಷಗಳು). ಸದರಿ ಅನುಧಾನವನ್ನು ಕಾಮಗಾರಿ ಯೋಜನೆಗಳನ್ನು ಹೊರತು ಪಡಿಸಿ ಪಾಲಿಕೆಯಲ್ಲಿ ಜಾರಿಯಲ್ಲಿರುವ ಯಾವುದೇ ಕಲ್ಯಾಣ ಕಾರ್ಯಕ್ರಮಗಳಿಗೆ ಮಹಿಳಾ ಫಲಾನುಭವಿಗಳಿಗೆ ಮಾತ್ರ ಸದ್ವಿನಿಯೋಗ ಮಾಡಿಕೊಳ್ಳಲು ಸಾ.ನ್ಯಾ.ಸ್ಥಾ.ಸಮಿತಿಯು ತೀರ್ಮಾನಿಸಲಾಗಿದೆ.

ಪಿ-1937 ರಲ್ಲಿರುವ ಉಳಿಕೆ ಅನುಧಾನ ರೂ.510.00 ಲಕ್ಷಗಳ ಅನುಧಾನವನ್ನು ಎಲ್ಲಾ ವಾರ್ಡ್‌ಗಳಿಗೆ ಸಮಾನಾಂತರವಾಗಿ ಈ ಕೆಳಕಂಡ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲಾಗಿದೆ.

| ಕ್ರ.ಸಂ | ಕಾರ್ಯಕ್ರಮಗಳ ವಿವರ |
|---|---|
| 1) | ಹೊಲಿಗೆ / ನಿಟ್ಟಿಂಗ್ / ಎಂಬ್ರಾಯಿಡರಿ / ಕಾಯರ್ / ತರಬೇತಿಶಿಕ್ಷಕರು / ಮೇಲ್ವಿಚಾರಕರು / ದುರಸ್ಥಿಗಾರರಿಗೆ / ಸಿಬ್ಬಂದಿಗಳಿಗೆ ಗೌರವ ಧನ. |
| 2) | ಹೊಲಿಗೆ/ ನಿಟ್ಟಿಂಗ್ / ಎಂಬ್ರಾಯಿಡರಿ / ಕಾಯರ್/ ಖಾಸಗಿ ಕಟ್ಟಡಗಳ ತರಬೇತಿ ಕೇಂದ್ರಗಳ ಬಾಡಿಗೆ |
| 3) | ಹೊಲಿಗೆ/ ನಿಟ್ಟಿಂಗ್ / ಎಂಬ್ರಾಯಿಡರಿ / ಕಾಯರ್/ ತರಬೇತಿ ಕೇಂದ್ರಗಳಲ್ಲಿ ಉಪಕರಣಗಳ ನಿರ್ವಹಣೆ ಮತ್ತು ದುರಸ್ತಿ |
| 4) | ಟೈಲರಿಂಗ್/ನಿಟ್ಟಿಂಗ್/ ಎಂಬ್ರಾಯಿಡರಿ/ಕಾಯರ್ ತರಬೇತಿದಾರರಿಗೆ ಶಿಷ್ಯ ವೇತನ. |
| 5) | ಹೊಲಿಗೆ ತರಬೇತಿ ಕೇಂದ್ರಗಳಿಗೆ ಹೊಲಿಗೆ ಯಂತ್ರಗಳನ್ನು ಒದಗಿಸಲು ಹಾಗೂ ಹಾಲಿ ಕೇಂದ್ರಗಳಿಗೆ ಉಪಕರಣ ಗಳನ್ನು ಒದಗಿಸಲು. |
| 6) | ಮಹಿಳಾ ಸದಸ್ಯರು ಪ್ರತಿನಿಧಿಸಲು ವಾರ್ಡ್‌ಗಳಿಗೆ ವಿಶೇಷ ಅನುದಾನ (ಪಾಲಿಕೆಯಲ್ಲಿ ಜಾರಿಯಲ್ಲಿರುವ ಯಾವುದೇ ಕಲ್ಯಾಣ ಕಾರ್ಯಕ್ರಮಗಳಡಿಯಲ್ಲಿ {ಕಾಮಾಗಾರಿಗಳನ್ನು ಹೊರುತುಪಡಿಸಿ) ಅರ್ಹ ಮಹಿಳಾ ಫಲಾನುಭವಿಗಳನ್ನು ಪರಿಗಣಿಸುವುದು. |

ಮುಂದುವರೆದು 2016-17ನೇ ಸಾಲಿಗೆ ಮೇಲ್ಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಅನುದಾನದ ಅವಶ್ಯಕತೆ ಇರುತ್ತದೆ.

**1.ಹೊಲಿಗೆ ತರಬೇತಿ ಶಿಕ್ಷಕಿಯರು-241, ಮೇಲ್ವಿಚಾರಕರು-20 ಮತ್ತು ದುರಸ್ಥಿಗಾರರುರವರ-1 ಗೌರವಧನ ನೀಡಲು**

**241*8000 = 19,28,000*12 = 2,31,36,000/-**
**20*8250 = 1,65,000*12 = 1980000/-**
**1*8500 = 1,02,000*12 = 102000/-**
**2,52,18,000/-**

**2. ಹೊಲಿಗೆ ತರಬೇತಿ ಕೇಂದ್ರಗಳ ಬಾಡಿಗೆ**
**41*10000(ಅಂದಾಜು)=4,10,000*12=49,20,000/-**

**3. ಹೊಲಿಗೆ ತರಬೇತುದಾರರಿಗೆ ಶಿಷ್ಯ ವೇತನ**
**40*198=7920 ಫಲಾನುಭವಿಗಳು**
**7920*3000=2,37,60,000/-**

**4. ಪಿ-0568, ರೂ50.00 ಲಕ್ಷಗಳನ್ನು (as per budget book) ಹೊಲಿಗೆ ತರಬೇತಿ ಶಿಕ್ಷಕಿಯರು, ಮೇಲ್ವಿಚಾರಕರು ಮತ್ತು ದುರಸ್ಥಿಗಾರರುರವರ ಗೌರವಧನ ನೀಡಲು ನಿಗಧಿಪಡಿಸಲಾಗಿದೆ. (ಕ್ರಮ ಸಂಖ್ಯೆ-1ರಂತೆ) 2,52,18,000-50,00,000=2,02,18,000/-**

5. **ಪಿ–0570, ರೂ.15.00 ಲಕ್ಷಗಳು (as per budget book) ಹೊಲಿಗೆ ತಬೇತಿ ಕೇಂದ್ರಗಳ ಬಾಡಿಗೆ ನೀಡಲು ನಿಗಧಿಪಡಿಸಲಾಗಿದೆ.**
   **(ಕ್ರಮ ಸಂಖ್ಯೆ–2ರಂತೆ) 4920000–15000=49,05,000/–**

**ಪಿ–ಕೋಡ್–1937 ಮಹಿಳಾ ಕಲ್ಯಾಣ ಕಾರ್ಯಕ್ರಮಗಳಿಗೆ ಒಟ್ಟು ಬೇಕಾಗಿರುವ ಮೊತ್ತ 2,02,18,000+49,05,000+2,37,60,000=4,88,83,000/–**

ಬಿ.ಬಿ.ಎಂ.ಪಿ ಶಾಲೆಯಲ್ಲಿನ ಹೆಣ್ಣು ಮಕ್ಕಳಿಗೆ ಸ್ವಚ್ಚತಾ ಕಿಟ್ ವಿತರಣೆ ಪಿ–ಕೋಡ್ – 3047 ರಡಿಯಲ್ಲಿ ರೂ.200.00 ಲಕ್ಷಗಳ ಅನುದಾನವನ್ನು ಪಾಲಿಕೆಯ ಆಯವ್ಯಯ ಪುಸ್ತಕದಲ್ಲಿ ನಿಗಧಿಪಡಿಸಲಾಗಿದ್ದು, ಪಾಲಿಕೆಯ ಸಹಾಯಕ ಆಯುಕ್ತರು (ಶಿಕ್ಷಣ) ರವರ ಕಛೇರಿಯಿಂದ ಉಚಿತವಾಗಿ ನೀಡಲಾಗುತ್ತಿದೆ ಎಂದು ಸಹಾಯಕ ಆಯುಕ್ತರು (ಶಿಕ್ಷಣ) ರವರು ತಿಳಿಸಿರುತ್ತಾರೆ.

**ಸಾ.ನ್ಯಾ.ಸ್ಥಾ. ಸಮಿತಿ ನಿರ್ಣಯದಲ್ಲಿ ಮಹಿಳಾ ಸದಸ್ಯರ ವಾರ್ಡ್‌ಗೆ ರೂ.5.00 ಲಕ್ಷಗಳು ಮೀಸಲಿರಿಸಿರುವುದರಿಂದ ಸರಿಯಷ್ಟೆ. ಆದ್ರೆ ಪಾಲಿಕೆಯ ಆಯವ್ಯಯ 2016–17 ನೇ ಆಯವ್ಯಯ ಪುಸ್ತಕದಲ್ಲಿ ರೂ.10.00 ಲಕ್ಷಗಳು ನಿಗಧಿಪಡಿಸಿರುವುದಾಗಿ ನಮೂದಾಗಿದ್ದು, ಹೆಚ್ಚುವರಿ ಅನುದಾನ ನೀಡಬೇಕಾಗಿದ್ದು, "ಪಿ–ಕೋಡ್–3047 ರಡಿಯಲ್ಲಿ ರೂ.200.00 ಲಕ್ಷಗಳ ಅನುದಾನವನ್ನು ಲಭ್ಯವಿದ್ದು ಸದರಿ ಹಣವನ್ನು ಮತ್ತು ಹೆಚ್ಚುವರಿ ಅಂದಾಜು ರೂ.300.00 ಲಕ್ಷಗಳ ಒಟ್ಟು ಅಂದಾಜು ರೂ. 500.00ಲಕ್ಷಗಳ ಅನುದಾನವನ್ನು ಪಿ ಕೋಡ್ 1937ಗೆ ಹಂಚಿಕೆ ಮಾಡಲು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮತ್ತು ಪಾಲಿಕೆ ಸಭೆಯ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.**

***–ಮುಂದೂಡಿದೆ–***

***29]. ವಿಷಯದ ಸಂಖ್ಯೆ: ತೆಆಸ್ಥಾಸ/191/2016–17***

ವಿಶೇಷ ಆಯುಕ್ತರು (ಕಲ್ಯಾಣ) ರವರ ಟಿಪ್ಪಣಿ ದಿನಾಂಕ: 28.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಾಲಿಕೆಯ 8 ವಲಯಗಳಲ್ಲಿ ಒಟ್ಟಾರೆ 198 ವಾರ್ಡ್ ವ್ಯಾಪ್ತಿಯಲ್ಲಿ ಉಲ್ಲೇಖ–(1) ರ ಮೇರೆಗೆ, ಪ್ರತಿ ವಾರ್ಡ್ ನಲ್ಲಿ 50 ಜನ ಹಿರಿಯ ನಾಗರೀಕರಿಗೆ ಬಿಸಿ ಊಟದ ಸೌಲಭ್ಯ ಒದಗಿಸುವ ಪ್ರಸ್ತಾವನೆಯನ್ನು ಈ ಕೆಳಕಂಡಂತೆ ಮಂಡಿಸಲಾಗಿದೆ.

**I. ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಹಿರಿಯ ನಾಗರೀಕರಿಗೆ ಮಧ್ಯಾಹ್ನದ ಬಿಸಿ ಊಟವನ್ನು ಪುನರ್ ಆರಂಭಿಸುವ ಬಗ್ಗೆ ರೂಪುರೇಷೆಗಳು.**

ಈ ಕಾರ್ಯಕ್ರಮವು ಈ ಹಿಂದೆ ಜೂನ್ 2013 ರಲ್ಲಿ ಸ್ಥಗಿತಗೊಂಡಿದ್ದು, ಈಗ ಮತ್ತೆ ಹೊಸದಾಗಿ ಎಲ್ಲಾ ವಾರ್ಡ್‌ಗಳಲ್ಲಿ ಕಾರ್ಯಕ್ರಮವನ್ನು ಪ್ರಾರಂಭಿಸಲು ಎಲ್ಲಾ ವಲಯ ಕಛೇರಿಗಳಿಂದ ಪ್ರತಿ ವಾರ್ಡ್‌ಗೆ 50 ಫಲಾನುಭವಿಗಳ ಹಾಗೆ ಹೊಸದಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾಗಿರುತ್ತದೆ.

1. ಸದರಿ ಕೇಂದ್ರಗಳ ಉಸ್ತುವಾರಿಯನ್ನು ಆಯಾಯ ವಾರ್ಡ್‌ಗಳಲ್ಲಿ ಸಂಬಂಧಪಟ್ಟ ಕಾಮಗಾರಿ/ ಕಂದಾಯ/ಆರೋಗ್ಯ/ಕಲ್ಯಾಣ ವಿಭಾಗದ ಅಧಿಕಾರಿ/ಸಿಬ್ಬಂದಿಗಳ ಮೇಲುಸ್ತುವಾರಿಯಲ್ಲಿ ಕೇಂದ್ರಗಳನ್ನು ನಿರ್ವಹಣೆ ಮಾಡತಕ್ಕದ್ದು.
2. 198 ಕೇಂದ್ರಗಳಲ್ಲಿ ಸಾರ್ವತ್ರಿಕ ರಜಾ ದಿನಗಳು ಮತ್ತು ಭಾನುವಾರದಂದು ಸೇರಿದಂತೆ ಎಲ್ಲಾ ದಿನಗಳಲ್ಲಿ ಆಯ್ಕೆಯಗುವ ಸರಬರಾಜುದಾರರಿಂದ ಎಲ್ಲಾ ಕೇಂದ್ರಗಳಿಗೆ ಬಿಸಿಊಟ ಸರಬರಾಜು ಮಾಡಲಾಗುವುದು.

3. ಮಧ್ಯಾಹ್ನದ ಬಿಸಿ ಊಟ ಯೋಜನೆಯನ್ನು ಸುಸಜ್ಜಿತ ವಾತಾವರಣ ಒಳಗೊಂಡಂತೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಒಳಗೊಂಡ ಸಂಬಂಧಪಟ್ಟ ವಾರ್ಡ್ ಕಛೇರಿ ಆವರಣದಲ್ಲಿ ವಲಯ ಆಯುಕ್ತರಿಂದ ವ್ಯವಸ್ಥೆ ಮಾಡಬೇಕಾಗಿರುತ್ತದೆ.
4. ಊಟದ ಸರಬರಾಜಿಗಾಗಿ ಸುಸಜ್ಜಿತ ಹಾಗೂ ವೈಜ್ಞಾನಿಕ ಪಾಕಶಾಲೆಯನ್ನು ಒಳಗೊಂಡು ಈ ನಿಟ್ಟಿನಲ್ಲಿ ಸಾರ್ವಜನಿಕರ ಮತ್ತು ಸಂಘ ಸಂಸ್ಥೆಗಳ ಪ್ರಶಂಸೆಗೆ ಪಾತ್ರರಾಗಿರುವ ಅರ್ಹ ಸಂಸ್ಥೆಯೊಂದಿಗೆ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ನಿಯಮಾನುಸಾರ ಮಾರ್ಗಸೂಚಿಯನ್ವಯ ಒಡಂಬಡಿಕೆ ಮೂಲಕ ಪ್ರತಿ ನಿತ್ಯ ಎಲ್ಲಾ ವಾರ್ಡ್‌ಗಳಲ್ಲಿ ಆಯ್ಕೆ ಮಾಡಲಾಗುವ ಫಲಾನುಭವಿಗಳಿಗೆ ಮಧ್ಯಾಹ್ನದ ಬಿಸಿಊಟ ಒದಗಿಸಲು ಯೋಜನೆ ಹಮ್ಮಿಕೊಳ್ಳಲಾಗುವುದು.

## II. <u>ಹಿರಿಯ ನಾಗರಿಕರಿಗೆ ಮಧ್ಯಾಹ್ನಾದ ಬಿಸಿ ಊಟದ ಯೊಜನೆಯ ಪುನರ್ ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ:</u>

1. ಈಗ ಅಂದಾಜು ಪ್ರತಿ ಊಟಕ್ಕೆ ರೂ. 20/– ರ ಹಾಗೆ **<u>198</u>** ವಾರ್ಡ್ ಕಛೇರಿಗಳಲ್ಲಿನ **198** ಕೇಂದ್ರಗಳಲ್ಲಿ ಪ್ರತಿ ಕೇಂದ್ರದಲ್ಲಿ ಆಯ್ಕೆ ಮಾಡಲಾಗುವ ಅಂದಾಜು ಗರಿಷ್ಠ 50 ಹಿರಿಯ ನಾಗರೀಕರಿಗೆ **<u>ಭಾನುವಾರ ಸೇರಿದಂತೆ ವರ್ಷದ ಎಲ್ಲಾ ದಿನಗಳು ಬಿಸಿಊಟ ನೀಡಲು ತಗಲುವ</u>** ವೆಚ್ಚವನ್ನು ಭರಿಸಬೇಕಾಗಿದ್ದು, ಸೂಕ್ತ ಅನುದಾನ ಒದಗಿಸಬೇಕಾಗುತ್ತದೆ. ನಿರ್ದೇಶಕರು, ಅಕ್ಷಯ ನಿಧಿ ಫೌಂಡೇಶನ್ ರವರ ಪತ್ರದ ಸಂಖ್ಯೆ: ಅದಾಪಿಸಿ 06/2016–17 ದಿನಾಂಕ:24.10.2016 ಪ್ರತಿ ಒಂದು ಲಘು ಉಪಹಾರಕ್ಕೆ ರೂ20/– ರಂತೆ (ತೆರಿಗೆ ಮತ್ತು ಸರಬರಾಜು ವೆಚ್ಚ ಸೇರಿ) ದಿನಾಂಕ: 31–03–2017 ರವರೆಗೆ ನೀಡಲಾಗುವುದು ಹಾಗೂ ದಿನಾಂಕ:01–04–2017 ರಿಂದ ಪ್ರತಿಯೊಂದು ಲಘು ಉಪಹಾರಕ್ಕೆ ರೂ.20/– ರಂತೆ ಹಾಗೂ ಅದಕ್ಕೆ ಅನ್ವಯಿಸುವ ತೆರಿಗೆಗಳನ್ನು ವಿಧಿಸಲಾಗುವುದೆಂದು ತಿಳಿಸಿರುತ್ತಾರೆ.

2. ಪ್ರತಿ ಕೇಂದ್ರಗಳಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರುಗಳಿಗೆ ಕೇಂದ್ರದ ಮೇಲುಸ್ತುವಾರಿಕೆ ನೀಡಿ ಸುಭದ್ರವಾಗಿ ಮತ್ತು ಸ್ವಚ್ಚತೆ ನಿರ್ವಹಣೆ ಮಾಡಲು ನಿಯೋಜಿಸಿ ಪಾತ್ರೆ ಪರಿಕರಗಳ ಶುಭ್ರತೆ ಮತ್ತು ಸ್ವಚ್ಚತಾ ಕಾರ್ಯಗಳಿಗಾಗಿ 198 ಕೇಂದ್ರಗಳಿಗೆ ಜವಾಬ್ದಾರಿ ಒದಗಿಸಬೇಕಾಗಿರುತ್ತದೆ.

3. ಸದರಿ ಅಂದಾಜು ಮೆ॥ ಅಕ್ಷಯ ಪಾತ್ರ ಪೌಂಡೇಶನ್ ರವರ ಪ್ರಸ್ತಾವನೆಯಂತೆ ಮಾಡಲಾಗಿದ್ದು, ಕೆ.ಟಿ.ಪಿ.ಪಿ ಪ್ರಕಾರ ಆಯ್ಕೆಯಾಗುವ ಸಂಸ್ಥೆಯ ಪ್ರಸ್ತಾವನೆಗೆ ಆಧರಿಸಿದ್ದು ವ್ಯತ್ಯಾಸಕ್ಕೆ ಒಳಪಟ್ಟಿರುತ್ತದೆ.

## III. <u>ಯೋಜನೆಯ ವೆಚ್ಚ (ಆಯ–ವ್ಯಯ)ಭರಿಸಲು ಆರ್ಥಿಕ ಮಂಜೂರಾತಿ ಬಗ್ಗೆ:–</u>

1. **2016–17 ನೇ ಸಾಲಿನ ಆಯವ್ಯಯ ಪುಸ್ತಕದಲ್ಲಿ Works taken up under SFC & 14th Finance Commission Grants for 2016-17 (SFC Grants Budget Head <u>P-code 3111</u> ರ ಕ್ರಮ ಸಂಖ್ಯೆ. 18 ರಲ್ಲಿ ಹಿರಿಯನಾಗರೀಕರಿಗೆ ಮಧ್ಯಾಹ್ನದ ಬಿಸಿ ಊಟಕ್ಕೆ ರೂ.600.00 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಅಂಶವನ್ನು ತಮ್ಮ ಅವಗಾಹನೆಗೆ ಮತ್ತು ಆದ್ಯ ಗಮನಕ್ಕೆ ತರಲಾಗಿದೆ.**
2. **2016–17ನೇ ಸಾಲಿನ ಆಯವ್ಯಯ ಪಿ–ಕೋಡ್–2956 ರ ಸಾಮಾನ್ಯ ವರ್ಗ ಕಾರ್ಯಕ್ರಮದಡಿ ರೂ. 400 ಲಕ್ಷಗಳನ್ನು ನಿಗಧಿಪಡಿಸಿರುತ್ತಾರೆ.**

3. ಪಾಲಿಕೆಯ 198 ವಾರ್ಡಗಳ ಪ್ರತಿ ವಾರ್ಡಿನಲ್ಲಿ ಅಂದಾಜು 50 ಫಲಾನುಭವಿಗಳ ಹಾಗೆ ಹಿರಿಯ ನಾಗರೀಕರಿಗೆ ಮಧ್ಯಾಹ್ನದ ಬಿಸಿ ಊಟ ಒದಗಿಸಲು 198 ವಾರ್ಡ್‌ಗಳಲ್ಲಿನ 9,900/– ಫಲಾನುಭವಿಗಳಿಗೆ ಪ್ರತಿ ಊಟಕ್ಕೆ ರೂ.20/– ರಂತೆ ವಾರ್ಷಿಕ 712 ಲಕ್ಷಗಳ ಅನುದಾನ ಮತ್ತು ಪ್ರತಿ ಕೇಂದ್ರಗಳ ಫಲಾನುಭವಿಗಳ ಪೈಕಿ ಒಬ್ಬರಿಗೆ ಕೇಂದ್ರದ ಮೇಲುಸ್ತುವಾರಿಕೆ ನೀಡಿ ಸುಭದ್ರವಾಗಿ ಮತ್ತು ಸ್ವಚ್ಚತೆ ನಿರ್ವಹಣೆ ಮಾಡಲು ನಿಯೋಜಿಸಿ ಪಾತ್ರೆ ಪರಿಕರಗಳ ಶುಭ್ರತೆ ಮತ್ತು ಸ್ವಚ್ಚತಾ ಕಾರ್ಯಗಳಿಗಾಗಿ ಪ್ರತಿ ತಿಂಗಳು ರೂ. 1000/– ಗಳ ಹಾಗೆ ಗೌರವಧನ ಕಲ್ಯಾಣ ಶಾಖೆಯಿಂದ ನೀಡಲು 198 ಕೇಂದ್ರಗಳಿಗೆ ವಾರ್ಷಿಕ ರೂ. 23.76 ಲಕ್ಷಗಳ ವೆಚ್ಚ ಭರಿಸಲು ಅನುದಾನ ಒದಗಿಸಬೇಕಾಗಿದೆ.

## IV. ಊಟದ ತಟ್ಟೆ, ಪಾತ್ರೆ ಪರಿಕರಗಳನ್ನು ಒದಗಿಸುವ ಬಗ್ಗೆ:

ಊಟದ ತಟ್ಟೆ, ಪಾತ್ರೆ ಇತ್ಯಾದಿ ಪಾತ್ರೆ ಪರಿಕರಗಳು ಮತ್ತು ಸಾಮಾಗ್ರಿಗಳನ್ನು ಹೊಸದಾಗಿ ಎಲ್ಲಾ ವಾರ್ಡ್ ಕಛೇರಿಗಳ ವ್ಯಾಪ್ತಿಯಲ್ಲಿನ ಬಿಸಿಯೂಟ ಕೇಂದ್ರಗಳಿಗೆ ಹೊಸದಾಗಿ ಸರಬರಾಜು ಮಾಡಲು ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು/ಸಹಾಯಕ ಅಭಿಯಂತರರು (**AEE/AE**) ರವರಿಂದ ವಲಯ ಆಯುಕ್ತರ ನಿರ್ದೇಶನದಂತೆ ಕ್ರಮ ಕೈಗೊಳ್ಳುವುದು. ಸದರಿ ಕೇಂದ್ರಗಳ ಉಸ್ತುವಾರಿಯನ್ನು ಆಯಾಯ ವಾರ್ಡ್‌ಗಳಲ್ಲಿ ಸಂಬಂಧಪಟ್ಟ ಕಾಮಗಾರಿ/ಆರೋಗ್ಯ/ಕಲ್ಯಾಣ ವಿಭಾಗದ ಅಧಿಕಾರಿ/ ಸಿಬ್ಬಂದಿಗಳ ಮೇಲುಸ್ತುವಾರಿಯಲ್ಲಿ ಕೇಂದ್ರಗಳನ್ನು ನಿರ್ವಹಣೆ ಮಾಡಬೇಕಾಗಿರುತ್ತದೆ. ಪ್ರತಿ ಕೇಂದ್ರಗಳ ಸಹಾಯಕ ಅಭಿಯಂತರರು ಅಥವಾ ಆರೋಗ್ಯ ಪರಿವೀಕ್ಷಕರು (**AE** ಅಥವಾ **HI**) ರವರಿಗೆ ಕೇಂದ್ರದ ಮೇಲುಸ್ತುವಾರಿಕೆ ನೀಡಿ ಸುಭದ್ರವಾಗಿ ಮತ್ತು ಸ್ವಚ್ಚತೆ ನಿರ್ವಹಣೆ ಮಾಡಲು ನಿಯೋಜಿಸಿ ಪಾತ್ರೆ ಪರಿಕರಗಳ ಶುಭ್ರತೆ ಮತ್ತು ಸ್ವಚ್ಚತಾ ಕಾರ್ಯಗಳಿಗಾಗಿ ಕ್ರಮವಹಿಸುವುದು.

## V. ಗುರುತಿನ ಚೀಟಿ ವಿತರಣೆ:–

ಆಯ್ಕೆಯಾದ ಪ್ರತಿ ಫಲಾನುಭವಿಗೆ ವಲಯ ಕಛೇರಿಯಿಂದ ಗುರುತಿನ ಚೀಟಿ ನೀಡಬೇಕಾಗಿರುತ್ತದೆ, ಪ್ರತಿದಿನ ಫಲಾನುಭವಿಗಳು ಗುರುತಿನ ಚೀಟಿಯನ್ನು ಪ್ರದರ್ಶಿಸತಕ್ಕದ್ದು.

## VI. ವೈದ್ಯಕೀಯ ತಪಾಸಣೆ:–

ಪ್ರತಿ 3 ತಿಂಗಳಿಗೊಮ್ಮೆ ಫಲಾನುಭವಿಗಳಿಗೆ ಬಿಸಿಊಟ ಸರಬರಾಜು ಮಾಡುವ ಕೇಂದ್ರಗಳಲ್ಲಿ ಪಾಲಿಕೆಯ ಆರೋಗ್ಯ ವಿಭಾಗದಿಂದ ಹಿರಿಯ ನಾಗರೀಕರಿಗೆ ವೈದ್ಯಕೀಯ ತಪಾಸಣೆ ಏರ್ಪಡಿಸಿ ಉಚಿತವಾಗಿ ವೈದ್ಯಕೀಯ ಮತ್ತು ಔಷಧಿ ಸೌಲಭ್ಯ ಕಲ್ಪಿಸಬೇಕಾಗಿರುತ್ತಾದೆ.

## VII. ಕಾರ್ಯಕ್ರಮದ ಉದ್ದೇಶ:

ಹಿರಿಯ ನಾಗರೀಕರಿಗೆ ಊಟದ ಸೌಲಭ್ಯಗಳು ಹಾಗೂ ವೈದ್ಯಕೀಯ ಸೇವೆ (ಸಾಮಾನ್ಯ ವೆಚ್ಚಗಳು) ಕರಡು ಮಾರ್ಗಸೂಚಿಯನ್ನು ಈ ಕೆಳಕಂಡಂತೆ ಸಿದ್ದಪಡಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆಗಾಗಿ ಮಂಡಿಸಿದೆ.

1. ಹಿರಿಯ ನಾಗರೀಕರಿಗೆ ಆರೋಗ್ಯ ಭದ್ರತೆ, ಆಹಾರ ಭದ್ರೆತಯನ್ನು ಒದಗಿಸಿ, ಯಾವುದೇ ಕಾರಣಕ್ಕೂ ಹಸಿವಿನಿಂದ ಇರಬಾರದು. ಅವರುಗಳಿಗೆ ಕಲ್ಯಾಣ ಮತ್ತು ಆರೋಗ್ಯ ಉದ್ದೇಶದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪ್ರತಿ ದಿನ ರುಚಿಯಾದ ಶುಚಿಯಾದ ಬಿಸಿ ಊಟವನ್ನು ನೀಡಲಾಗುವುದು.

2. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕರ್ತವ್ಯ ನಿರ್ವಹಿಸುತ್ತಿರುವ 198 ವಾರ್ಡ್‌ಗಳಲ್ಲಿ ಒಟ್ಟು ಅಂದಾಜು ಹಿರಿಯ ನಾಗರೀಕರಿಗೆ ಮಧ್ಯಾಹ್ನದ ಬಿಸಿಯೂಟವನ್ನು ವಿತರಣೆ ಮಾಡಲು ಕಾರ್ಯಕ್ರಮ ಹಮಿಕೊಳ್ಳಲಾಗುವುದು. ಪ್ರತಿ ವಲಯಗಳಲ್ಲಿ ಆದ್ಯತೆ ನೀಡಿ ನಿಯಮಾನುಸಾರ ಮಾರ್ಗಸೂಚಿಯನ್ವಯ ಆಯ್ಕೆಯಾದ ಸರಬರಾಜು ಸಂಸ್ಥೆಯಿಂದ ಮದ್ಯಾಹ್ನದ ಬಿಸಿಯೂಟ ನೀಡುವ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗುವುದು.
3. ಹಿರಿಯ ನಾಗರೀಕರಿಗೆ ಮಧ್ಯಾಹ್ನದ ಬಿಸಿ ಊಟ ನೀಡುವುದರೊಂದಿಗೆ ಆರೋಗ್ಯದ ಭದ್ರತೆಯನ್ನು ನೀಡುವುದು ಅವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮದೊಂದಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸುವುದು ಸಹ ಕಾಯಕ್ರಮದ ಉದ್ದೇಶವಾಗಿರುತ್ತದೆ.

**VIII ಅರ್ಹತೆಗಳು:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹಿರಿಯ ನಾಗರೀಕರು ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಬಿ.ಪಿ.ಎಲ್. ಕಾರ್ಡ್ ಹೊಂದಿರಬೇಕು, ವಾಸ ದೃಢೀಕರಣ ಪತ್ರ ಸಲ್ಲಿಸಬೇಕು)

1. ಬಿ.ಪಿ.ಎಲ್. ಕಾರ್ಡ್ ಹೊಂದಿರಬೇಕು. ಅಥವಾ ವಾರ್ಷಿಕ ರೂ.2,50,000/– ಗಳ ಕೌಟುಂಬಿಕ ವರಮಾನದ ಮಿತಿಯೊಳಗಿರಬೇಕು. (ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 43 ಪಿಎನ್‌ಜಿ 2015) 60 ವರ್ಷಗಳ ಮೇಲ್ಪಟ್ಟ ಹಿರಿಯ ನಾಗರೀಕರಾಗಿರಬೇಕು.
2. ಕೊಳಚೆ ಪ್ರದೇಶ/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಾಲೋನಿ/ಹಿಂದುಳಿದ ಪ್ರದೇಶದ ನಿವಾಸಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು.
3. ದುರ್ಬಲ, ನಿರ್ಗತಿಕ, ಅಶಕ್ತ, ರೋಗ ಪೀಡಿತ, ಮಕ್ಕಳಿಂದ ತಿರಸ್ಕೃತ, ಅಂಗವಿಕಲ, ವಿಧವೆ/ವಿದುರ, ಇವರಿಗೆ ಆದ್ಯತೆ ನೀಡಲಾಗುವುದು.

**IX ಆಯ್ಕೆ ವಿಧಾನ:**

ವಲಯ ಮಟ್ಟದಲ್ಲಿ ಕೇಂದ್ರ ಕಛೇರಿಯಿಂದ ಈಗಾಗಲೇ ನೀಡಿರುವ ಮಾರ್ಗಸೂಚಿಗಳಂತೆ ವಲಯ ಆಯ್ಕೆ ಸಮಿತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕದ್ದು.

**X) ಈ ಕಾರ್ಯಕ್ರಮವನ್ನು ಸರ್ಕಾರದಿಂದ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ವಿನಾಯಿತಿ ಪಡೆದು ಮೆ॥ ಇಸ್ಕಾನ್ ಸಂಸ್ಥೆಯ ಅಂಗಸಂಸ್ಥೆಯಾದ ಮೆ॥ ಅಕ್ಷಯ ನಿಧಿ ಪೌಂಡೇಶನ್ ರವರ ಮುಖಾಂತರ ಅನುಷ್ಠಾನಗೊಳಿಸುವ ಬಗ್ಗೆ :**

(ಅ) ಈ ಯೋಜನೆಯನ್ನು ತುರ್ತಾಗಿ ಪುನರ್ ಆರಂಭಿಸಲು ಹಾಗೂ ಅನುಷ್ಠಾನ ಮಾಡಲು ಫಲಾನುಭವಿಗಳಿಂದ ಅತಿಯಾದ ಬೇಡಿಕೆಯಿದ್ದು, ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆ ಅಡಿಯಲ್ಲಿ ಟೆಂಡರ್ ಪ್ರಕ್ರಿಯೆಗೆ ಸಮಯವಕಾಶ ಬೇಕಾಗಿದ್ದು, ಕಾರ್ಯಕ್ರಮದ ಅನುಷ್ಠಾನಕ್ಕೆ ವಿಳಂಬವಾಗುವ ಸಂಭವವಿರುವುದರಿಂದ ಈ ಹಿಂದಿನಂತೆ ಸುಸಜ್ಜಿತ ವ್ಯವಸ್ಥೆಯನ್ನೊಳಗೊಂಡ, ಸಾರ್ವಜನಿಕರ ಪ್ರಶಂಸೆ ಮತ್ತು ಮೆಚ್ಚುಗೆ ಪಡೆದಿರುವ ಹಾಗೂ ಸರ್ಕಾರಿ ಹಾಗೂ ಬಿ.ಬಿ.ಎಂ.ಪಿ ಶಾಲೆಗಳಿಗೆ ಈಗಾಗಲೇ ಮಧ್ಯಾಹ್ನದ ಬಿಸಿಯೂಟ ಸರಬರಾಜು ಮಾಡುತ್ತಿರುವ ಮೆ॥ ಇಸ್ಕಾನ್ ಸಂಸ್ಥೆಯ ಅಂಗ ಸಂಸ್ಥೆಯಾದ ಮೆ॥ ಅಕ್ಷಯ ನಿಧಿ ಪೌಂಡೇಶನ್ ಸಂಸ್ಥೆಯವರಿಗೆ

ಮಾನ್ಯ ಆಯುಕ್ತರ ಆದೇಶದಂತೆ ಕೆ.ಟಿ.ಪಿ.ಪಿ ಕಾಯ್ದೆ ಮತ್ತು ನಿಯಮಾವಳಿಯಡಿಯಲ್ಲಿ ಸರ್ಕಾರದಿಂದ ವಿನಾಯಿತಿ ಪಡೆದು ಮೆ॥ ಅಕ್ಷಯ ನಿಧಿ ಪೌಡೇಶನ್‌ರವರಿಗೆ ಈ ಯೋಜನೆಯಡಿಯಲ್ಲಿ ಸರಬರಾಜು

ಆದೇಶ ನೀಡಲು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**(ಆ)** ಈ ಹಿಂದೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸಭೆ ದಿನಾಂಕ:17.08.2016ರ ವಿಷಯ ಸಂಖ್ಯೆ. ಸಾನ್ಯಾಸ್ಥಾಸ/24–2016–17ರಲ್ಲಿ ಒಟ್ಟಾರೆ ನಿರ್ಣಯ ಕೈಗೊಂಡಿದ್ದು ಕ್ರ.ಸಂ. III ರಲ್ಲಿ ಹಿರಿಯ ನಾಗರೀಕರಿಗೆ ಅಂದಾಜು ಪ್ರತಿ ಊಟಕ್ಕೆ ರೂ.16/–ರ ಹಾಗೆ ನಿಗಧಿಪಡಿಸಿರುವ ಪ್ರಸ್ತಾವನೆಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯು ಅನುಮೋದಿಸಿದ್ದು ಪಾಲಿಕೆಯ ಸಭೆಯ ದಿನಾಂಕ:26.08.2016ರ ವಿಷಯ ಸಂಖ್ಯೆ. 05(236)/2016–17 ರಲ್ಲಿಯೂ ಸಹ ಒಪ್ಪಿಗೆ ನೀಡಿ ತೀರ್ಮಾನಿಸಿರುತ್ತದೆ. ಮುಂದುವರೆದು ಪೂಜ್ಯ ಮಹಾಪೌರರ ಘನ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದಂತೆ ಹಾಗೂ ನಿರ್ದೇಶಕರು, ಅಕ್ಷಯ ನಿಧಿ ಪ್ರತಿಷ್ಠಾನ ರವರ ಪತ್ರ ಸಂಖ್ಯೆ. ಆದಾಪಿಸಿ 06/2016–17 ದಿನಾಂಕ. 24.10.2016ರ ಪತ್ರದಲ್ಲಿ ಪ್ರತಿ ಊಟಕ್ಕೆ ರೂ 20/– (ತೆರಿಗೆ ಮತ್ತು ಸಾರಿಗೆ ವೆಚ್ಚ ಸೇರಿದಂತೆ) ನಿಗಧಿಪಡಿಸಿ ಪ್ರಸ್ತಾಪಿಸಿರುತ್ತಾರೆ ಇಸ್ಕಾನ್ ಅಂಗಸಂಸ್ಥೆಯಾದ ಅಕ್ಷಯ ನಿಧಿ ಪ್ರತಿಷ್ಠಾನದಿಂದ ಪ್ರತಿ ಊಟಕ್ಕೆ ರೂ.20/– ಗಳನ್ನು ಬರಿಸಿ ಸರಬರಾಜು ಮಾಡಲು ಕ್ರಮಕೈಗೊಳ್ಳುವುದು ಸೂಕ್ತವಾಗಿರುತ್ತದೆ.

**(ಇ)** ಮುಂದುವರೆದು ಮೆ॥ ಅಕ್ಷಯ ನಿಧಿ ಫೌಂಡೇಶನ್ ರವರ ಪತ್ರ ಸಂಖ್ಯೆ :ಅದಾಪಿಸಿ 06/2016–17 ದಿನಾಂಕ:24–10–2016ರ ಪತ್ರದಲ್ಲಿ ಹಿರಿಯ ನಾಗರೀಕರಿಗೆ ಈ ಆರ್ಥಿಕ ವರ್ಷದ ಕೊನೆಯವರೆಗು ಪ್ರತಿಯೊಂದು ಬಿಸಿ ಊಟಕ್ಕೆ ರೂ.20/– ರಂತೆ (ತೆರಿಗೆ ಸೇರಿ) ದಿನಾಂಕ: 31–03–2017 ರವರೆಗೆ ನೀಡಲಾಗುವುದು ಹಾಗೂ ದಿನಾಂಕ: 01–04–2017 ರಿಂದ ಪ್ರತಿಯೋಂದು ಬಿಸಿಊಟಕ್ಕೆ ರೂ.20/– ರಂತೆ ಹಾಗೂ ಅದಕ್ಕೆ ಅನ್ವಯವಾಗುವ ತೆರಿಗೆಗಳನ್ನು ವಿಧಿಸಲಾಗುವುದು ಎಂದು ತಿಳಿಸಿರುತ್ತಾರೆ.

**(ಈ)** ಮೆ॥ ಅಕ್ಷಯ ನಿಧಿ ಫೌಂಡೇಶನ್ ರವರ ಪತ್ರ ಸಂಖ್ಯೆ :ಅದಾಪಿಸಿ 09/2016–17 ದಿನಾಂಕ:09–11–2016ರ ಪತ್ರದಲ್ಲಿ ಕೋರಿರುವಂತೆ, ಪ್ರತಿಯೊಬ್ಬ ಹಿರಿಯ ನಾಗರೀಕರಿಗೆ ಪ್ರತಿ ಊಟಕ್ಕೆ 20/– ರೂಗಳನ್ನು ನಿಗಧಿಪಡಿಸಲಾಗಿದೆ. ಇದರಂತೆ 198 ವಾರ್ಡ್‌ಗಳಲ್ಲಿರುವ ಹತ್ತು ಸಾವಿರ ಹಿರಿಯ ನಾಗರೀಕರಿಗೆ ಬಿಸಿಊಟ ಸರಬರಾಜು ಮಾಡಲು ಪ್ರತಿ ತಿಂಗಳಿಗೆ ತಗಲುವ ವೆಚ್ಚವು ಸುಮಾರು 60.00 ಲಕ್ಷಗಳು ಆಗುತ್ತದೆ ಎಂದು ತಿಳಿಸಿರುತ್ತಾರೆ.

**(ಉ)** ಆದ್ದರಿಂದ ದಯಮಾಡಿ 2 ತಿಂಗಳ ಮುಂಗಡ ಹಣ ರೂ.1.20 ಕೋಟಿ (ಒಂದು ಕೋಟಿ ಇಪ್ಪತ್ತು ಲಕ್ಷಗಳು) ಹಾಗೂ ಪಾತ್ರೆ ಪರಿಕರಗಳನ್ನು ಖರೀದಿಸಲು ರೂ. 50.00 ಲಕ್ಷಗಳು ಸೇರಿ ಒಟ್ಟು ರೂ. 1.70 ಕೋಟಿ (ಒಂದು ಕೋಟಿ ಎಪ್ಪತ್ತು ಲಕ್ಷಗಳು) ನೀಡಬೇಕೆಂದು ಕೋರಿರುತ್ತಾರೆ.

**(ಊ)** ಕಾರಣಾಂತರಗಳಿಂದ ಈ ಕಾರ್ಯಕ್ರಮವನ್ನು ನಿಲ್ಲಿಸುವ ಸಂದರ್ಭ ಬಂದಲ್ಲಿ ಬಿಬಿಎಂಪಿ ವತಿಯಿಂದ ನೀಡುವ ಮುಂಗಡ ಹಣವನ್ನು ಅಕ್ಷಯ ನಿಧಿ ಪ್ರತಿಷ್ಠಾನದ ವತಿಯಿಂದ ತಕ್ಷಣ ಬಿಬಿಎಂಪಿಗೆ ಹಿಂದಿರುಗಿಸಲಾಗುವುದು ಹಾಗೂ ಪಾತ್ರೆಗಳಿಗೆ ಬಿಡುಗಡೆ ಮಾಡಿದ ರೂ.50.00 ಲಕ್ಷಗಳನ್ನು 5 ಬಿಲ್ಲುಗಳಲ್ಲಿ ರೂ. 10.00 ಲಕ್ಷಗಳನ್ನು ಕಡಿತಗೊಳಿಸಬಹುದೆಂದು ಪತ್ರದಲ್ಲಿ ತಿಳಿಸಿರುತ್ತಾರೆ.

**(ಋ)** ಹಿರಿಯ ನಾಗರೀಕರಿಗೆ ಪ್ರತಿದಿನ ಬಿಸಿ ಊಟ ಸರಬರಾಜು ಮಾಡುವ ಬಗ್ಗೆ ಮೆ॥ ಅಕ್ಷಯ ನಿಧಿ ಫೌಂಡೇಶನ್ ರವರೊಂದಿಗೆ ಒಡಂಬಡಿಕೆ ಪತ್ರ (M.O.U) ದ ಕರಡು ಪ್ರತಿಯನ್ನು ಸಿದ್ಧಪಡಿಸಿದ್ದು ಕಾನೂನು ಕೋಶದ ಮುಖ್ಯಸ್ಥರು ಕಡತದ ಸಂಖ್ಯೆ: ಬಿಬಿಎಂಪಿ/ಎಲ್‌ಸಿ/ಆರ್.ಆರ್/2568/2016–17 ದಿನಾಂಕ:21–02–2017 ರಂತೆ ಕೆಲವು ಮಾರ್ಪಡುಗಳೊಂದಿಗೆ ಅನುಮೋದಿಸಿರುತ್ತಾರೆ.

**ಕಂಡಿಕೆ x (ಅ) ಯಿಂದ (ಋ) ವರೆಗಿನ ಮೆ॥ ಅಕ್ಷಯ ನಿಧಿ ಫೌಂಡೇಶನ್ ರವರ ಪರಿಷ್ಕೃತ ಪ್ರಸ್ತಾವನೆಯ ಹಿನ್ನಲೆಯಲ್ಲಿ ಈ ಕೆಳಕಂಡ ಅಂಶಗಳಿಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ತೀರ್ಮಾನಕ್ಕಾಗಿ ಮಂಡಿಸಿದೆ.**

1. ಮೆ॥ ಅಕ್ಷಯ ನಿಧಿ ಫೌಂಡೇಶನ್ ಸಂಸ್ಥೆಗೆ ಪಾತ್ರೆಗಳನ್ನು ಖರೀದಿ ಮಾಡಲು ರೂ.50.00 ಲಕ್ಷ (ಐವತ್ತು ಲಕ್ಷಗಳು) ಮುಂಗಡ ಹಣವನ್ನು ಬಿಡುಗಡೆ ಮಾಡಲಾಗುವುದು.
2. ಈ ಕಾರ್ಯಕ್ರಮವನ್ನು ಜಾರಿಗೆ ತರಲು 2 ತಿಂಗಳ ಮುಂಗಡ ಹಣ ರೂ. 1.20 ಕೋಟಿ (ಒಂದು ಕೋಟಿ ಇಪ್ಪತ್ತು ಲಕ್ಷಗಳು) ಹಣವನ್ನು ಬಿಡುಗಡೆ ಮಾಡಲಾಗುವುದು ಹಾಗೂ ಕಾರ್ಯಕ್ರಮವನ್ನು ಸ್ಥಗಿತಗೊಳಿಸಲು ಈ ಹಣವನ್ನು ತಕ್ಷಣ ಬಿಬಿಎಂಪಿಗೆ ಹಿಂದಿರುಗಿಸತಕ್ಕದ್ದು.
3. ದಿನಾಂಕ: 31-03-2017 ರವರೆಗು ಹಿರಿಯ ನಾಗರೀಕರಿಗೆ ಬಿಸಿಊಟವನ್ನು ಪ್ರತಿ ಊಟಕ್ಕೆ ರೂ.20/- ರಂತೆ (ತೆರಿಗೆ ಮತ್ತು ಸರಬರಾಜು ವೆಚ್ಚ ಸೇರಿ) ಸರಬರಾಜು ಮಾಡುವುದು. ಹಾಗೂ ದಿನಾಂಕ: 01-04-2017 ರಿಂದ ಪ್ರತಿಯೊಂದು ಬಿಸಿಊಟಕ್ಕೆ ರೂ.20/- ರಂತೆ ಹಾಗೂ ಅದಕ್ಕೆ ಅನ್ವಯವಾಗುವ ತೆರಿಗೆಗಳನ್ನು ವಿಧಿಸಲಾಗುವುದು
4. ಹಿರಿಯ ನಾಗರೀಕರಿಗೆ ಬಿಸಿಊಟ ಒದಗಿಸುವ ಸಂಬಂಧ ಅಗತ್ಯ ಒಡಂಬಡಿಕೆಯನ್ನು ತ್ವರಿತವಾಗಿ ಮಾಡಿಕೊಳ್ಳಲಾಗುವುದು
5. ಮೆ॥ ಅಕ್ಷಯ ನಿಧಿ ಫೌಂಡೇಶನ್ ರವರು Mobile App ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿ ಪ್ರತಿದಿನ ಎಷ್ಟು ಜನ ಹಿರಿಯ ನಾಗರೀಕರಿಗೆ ಬಿಸಿಊಟ ನೀಡಿರುತ್ತಾರೆ ಎಂಬ ಮಾಹಿತಿಯನ್ನು ತಂತ್ರಾಂಶವನ್ನು ಬಳಸಿ ವಿಶೇಷ ಆಯುಕ್ತರು (ಕಲ್ಯಾಣ) ಮತ್ತು ಮುಖ್ಯ ಲೆಕ್ಕಾಧಿಕಾರಿ ಯವರಿಗೆ ನೀಡುವುದು.
6. ಮೆ॥ ಅಕ್ಷಯ ನಿಧಿ ಫೌಂಡೇಶನ್ ರವರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆ ಪತ್ರ (M.O.U) ದ ಕರಡು ಪ್ರತಿಯನ್ನು ಕೆಲವು ಮಾರ್ಪಾಡುಗಳೊಂದಿಗೆ ಕಾನೂನು ಕೋಶದ ಮುಖ್ಯಸ್ಥರು ಅನುಮೋದಿಸಿರುವಂತೆ ಮೆ॥ ಅಕ್ಷಯ ನಿಧಿ ಫೌಂಡೇಶನ್ ರವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗುವುದು.

ಮೇಲ್ಕಂಡ ಹಿನ್ನೆಲೆಯಲ್ಲಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

***-ಮುಂದೂಡಿದೆ-***

***30]. ವಿಷಯದ ಸಂಖ್ಯೆ: ತೆಆಸ್ಥಾಸ/192/2016-17***

ಆಯುಕ್ತರ ದಿನಾಂಕ: 06.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ವಿಧಾನಸಭೆ / ವಿಧಾನ ಪರಿಷತ್ತಿನ ಅಧಿವೇಶನಗಳು ನಡೆಯುವ ಸಂದರ್ಭಗಳಲ್ಲಿ ಆಯುಕ್ತರ ಆಪ್ತ ಶಾಖೆ, ಅಪರ ಆಯುಕ್ತರ (ಆಡಳಿತ) ರವರ ಆಪ್ತ ಶಾಖೆ, ಉಪ ಆಯುಕ್ತರು (ಆಡಳಿತ) ರವರ ಆಪ್ತ ಶಾಖೆ, ಆಯುಕ್ತರ ಕಛೇರಿ ಆಡಳಿತ ಶಾಖೆಯಲ್ಲಿ ಹಾಗೂ ಓಓಡಿ ಆಧಾರದ ಮೇಲೆ ವಿವಿಧ ಸರ್ಕಾರಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳು ಕಛೇರಿ ಅವಧಿ ಮುಗಿದ ನಂತರವೂ ಕಾರ್ಯನಿರ್ವಹಿಸುತ್ತಿರುತ್ತಾರೆ ಹಾಗೂ ವಿಧಾನಸಭೆ / ವಿಧಾನ ಪರಿಷತ್ತಿಗೆ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಸಂಬಂಧಪಟ್ಟ ಪಾಲಿಕೆಯ ಎಲ್ಲಾ ಕಛೇರಿಗಳಿಂದ ಉತ್ತರ ಪಡೆದು ಕ್ರೋಡೀಕರಿಸಿ ಒದಗಿಸುವ ನಿಟ್ಟಿನಲ್ಲಿ ತಾವು ಹಾಲಿ ಕಾರ್ಯನಿರ್ವಹಿಸುತ್ತಿರುವ ಕೆಲಸ ಕಾರ್ಯಗಳ ಜೊತೆಗೆ ಹೆಚ್ಚಿನ ಅವಧಿಯಲ್ಲಿ ಹಾಗೂ ಕಛೇರಿ ಅವಧಿ ಮುಗಿದ ನಂತರವೂ ಕಾರ್ಯನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಅವರುಗಳಿಗೆ ಪ್ರತಿಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಅಧಿವೇಶನ ನಡೆಯುವ ಅವಧಿಯ ದಿನಗಳಿಗೆ ಗೌರವಧನ ನಿಗಧಿಗೆ ಸಂಬಂಧಿಸಿದ ಸರ್ಕಾರದ ವಿಧಾನ ಸಭೆಯ ಸಚಿವಾಲಯದಿಂದ ಆಗಿಂದಾಗ್ಗೆ ಹೊರಡಿಸಲಾಗುತ್ತಿರುವ ಆದೇಶಗಳನ್ವಯ ಪಾಲಿಕೆಯಲ್ಲಿ ಅಧಿವೇಶನದ ಸಂದರ್ಭದಲ್ಲಿ ಕಾರ್ಯನಿರ್ವಹಿಸಿರುವ ಅಧಿಕಾರಿ ಸಿಬ್ಬಂಧಿಗಳಿಗೆ ಗೌರವಧನ ಮಂಜೂರಾತಿಗೆ ಸಂಬಂಧಿಸಿದಂತೆ

ಸಚಿವಾಲಯದ ಆದೇಶ ಸಂಖ್ಯೆ: ಕವಿಸಸ/ಆ–3/117/ಗೌಧಹೆ/2013, ಬೆಂಗಳೂರು ದಿನಾಂಕ: 13–09–2013 ರಂತೆ ಬೆಂಗಳೂರಿನಲ್ಲಿ ನಡೆಯುವ ಅಧಿವೇಶನಕ್ಕೆ ದಿನವೊಂದಕ್ಕೆ ರೂ.750–00ಗಳ ಗೌರವಧನವನ್ನು ಮತ್ತು ಕವಿಸಸ/ಆ–3/172/ಬೆಆ.ಹೆಗೌಧಪಾ/2013, ಬೆಂಗಳೂರು, ದಿನಾಂಕ: 20–12–2013 ರಂತೆ ಬೆಳಗಾವಿಯಲ್ಲಿ ನಡೆಯುವ ಅಧಿವೇಶನಕ್ಕೆ ದಿನವೊಂದಕ್ಕೆ ರೂ.1,000–00ಗಳ ಗೌರವಧನವನ್ನು ಪಾವತಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲು ಮಾನ್ಯ ಆಯುಕ್ತರುರವರು ಅನುಮೋದಿಸಿರುತ್ತಾರೆ. ಅದರಂತೆ ಈ ಕೆಳಕಂಡ ದಿನಾಂಕಗಳಂದು ನಡೆದ ವಿಧಾನ ಸಭೆ / ವಿಧಾನ ಪರಿಷತ್ತಿನ ಅಧಿವೇಶನಗಳ ವಿವರ ಹಾಗೂ ಕಾರ್ಯನಿರ್ವಹಿಸಿದ ಅಧಿಕಾರಿ / ಸಿಬ್ಬಂದಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ವಿಧಾನ ಸಭೆ / ವಿಧಾನ ಪರಿಷತ್ತಿನ ಅಧಿವೇಶನಗಳು ನಡೆದ ವಿವರಗಳು | ಅವಧಿ (ಸರ್ಕಾರಿರಜಾ ದಿನಗಳನ್ನು ಹೊರತುಪಡಿಸಿ) |
|---|---|---|
| 1. | ದಿನಾಂಕ: 04–07–2016ರಿಂದ18–07–2016 | 10 ದಿನಗಳು |
| 2. | ದಿನಾಂಕ: 21–11–2016ರಿಂದ02–12–2016 | 10 ದಿನಗಳು |
| | **ಒಟ್ಟು ದಿನಗಳು** | **20 ದಿನಗಳು** |

| ಕ್ರಮ ಸಂ | ಅಧಿಕಾರಿ / ನೌಕರರುಗಳ ಹೆಸರು | ಪದನಾಮ | ಬೆಳಗಾವಿ ಅಧಿವೇಶನ (ಒಂದು ದಿನಕ್ಕೆ ರೂ.1,000–00 ಗಳಂತೆ) (ನವೆಂಬರ್–16) | ಬೆಂಗಳೂರು ಅಧಿವೇಶನ (ಒಂದು ದಿನಕ್ಕೆ ರೂ.750–00 ಗಳಂತೆ) (ಜುಲೈ–16) | ಕಾರ್ಯನಿರ್ವಹಿಸಿದ ಒಟ್ಟು ದಿನಗಳು |
|---|---|---|---|---|---|
| | | **ಆಯುಕ್ತರ ಕಛೇರಿ ಆಡಳಿತ ಶಾಖೆ** | | | |
| 1. | ಶ್ರೀ ಬಿ.ಎಂ. ವಿಜಯ್‌ಶಂಕರ್ | ವಿ.ಆ.(ಯೋಜನೆ) | 10 | – | 10 |
| 2. | ಶ್ರೀ ಹೇಮಾಜಿ ನಾಯಕ್ | ಅ.ಆ (ಆಡಳಿತ) | – | 10 | 10 |
| 3. | ಶ್ರೀಮತಿ ಎಂ. ಶಿಲ್ಪ | ಉ.ಆ.(ಆಡಳಿತ) | – | 10 | 10 |
| 4. | ಶ್ರೀ ಜಿ.ಸಿ ವೃಷಬೇಂದ್ರಮೂರ್ತಿ | ಉ.ಆ.(ಆಡಳಿತ) | 10 | – | 10 |
| 5. | ಶ್ರೀಮತಿ ಜಿ.ಆರ್. ಹರಿಶಿಲ್ಪ | ಸ.ಆ.(ಆಡಳಿತ) | 10 | 10 | 20 |
| 6. | ಹೆಚ್. ದೇವರಾಜ | ವ್ಯವಸ್ಥಾಪಕರು | – | 10 | 10 |
| 7. | ಕೃಷ್ಣಮೂರ್ತಿ. ಎನ್ | ವ್ಯವಸ್ಥಾಪಕರು | – | 9 | 9 |
| 8. | ವಿ. ಮಂಜುನಾಥ | ವ್ಯವಸ್ಥಾಪಕರು | – | 10 | 10 |
| 9. | ಹೆಚ್. ಸುರೇಶ್ | ವ್ಯವಸ್ಥಾಪಕರು | 10 | 10 | 20 |
| 10. | ಮಹೇಶ್‌ಕಾಡಪ್ಪ ಸಾವಂತ್ | ವ್ಯವಸ್ಥಾಪಕರು | 10 | 10 | 20 |
| 11. | ವಿ. ಹರಿಪ್ರಸಾದ್ | ಪ್ರ.ದ.ಸ. | – | 8 | 8 |
| 12. | ಆರ್. ಕೃಷ್ಣ | ಪ್ರ.ದ.ಸ. | – | 10 | 10 |
| 13. | ಕೆ.ಎಸ್. ಮಂಜುಳ | ಪ್ರ.ದ.ಸ. | – | 10 | 10 |
| 14. | ಹೆಚ್.ಆರ್. ಭರತ್ | ಪ್ರ.ದ.ಸ. | 10 | 10 | 20 |
| 15. | ಕೆ. ಜಯಂತ್ | ಪ್ರ.ದ.ಸ. | 10 | 9 | 19 |
| 16. | ಆರ್. ರಾಜೇಂದ್ರ | ಪ್ರ.ದ.ಸ. | – | 10 | 10 |
| 17. | ಕೆ.ಜಿ. ರವಿ | ಪ್ರ.ದ.ಸ. | 10 | 10 | 20 |
| 18. | ಬಿ.ಎಂ. ವಿಜಯ್‌ಕುಮಾರ್ | ಪ್ರ.ದ.ಸ. | – | 10 | 10 |

| | | | | | |
|---|---|---|---|---|---|
| 19. | ಹೆಚ್. ವಿಮಲಾಂಭ | ಪ್ರ.ದ.ಸ. | – | 10 | 10 |
| 20. | ಎಂ.ಆರ್. ದೀಪಶ್ರೀ | ಪ್ರ.ದ.ಸ. | – | 10 | 10 |
| 21. | ವಿ. ಕಾರ್ತಿಕ್ | ಪ್ರ.ದ.ಸ. | 10 | 10 | 20 |
| 22. | ಬಿ.ಸಿ. ಸುರೇಶ್ | ಪ್ರ.ದ.ಸ. | 10 | 10 | 20 |
| 23. | ಚೈತ್ರ | ಪ್ರ.ದ.ಸ. | 10 | – | 10 |
| 24. | ಜಿ. ಉಪೇಂದ್ರರಾವ್ | ಪ್ರ.ದ.ಸ. | 10 | – | 10 |
| 25. | ರವಿಕುಮಾರ್. ಬಿ | ಪ್ರ.ದ.ಸ. | 10 | – | 10 |
| 26. | ಎಂ. ಮಹೇಶ್ | ಪ್ರ.ದ.ಸ. | 10 | – | 10 |
| 27. | ಹೆಚ್.ಆರ್. ರವಿ | ಪ್ರ.ದ.ಸ. | 10 | – | 10 |
| 28. | ಪುಟ್ಟರಾಜು | ಪ್ರ.ದ.ಸ. | 10 | – | 10 |
| 29. | ಎಂ. ಜಯಲಕ್ಷ್ಮೀ | ಪ್ರ.ದ.ಸ. | 7 | – | 7 |
| 30. | ಬಿ. ಶಿವಕುಮಾರ್ | ದ್ವಿ.ದ.ಸ. | 10 | 9 | 19 |
| 31. | ಎಸ್. ಶೇಷಗಿರಿ | ದ್ವಿ.ದ.ಸ. | – | 9 | 9 |
| 32. | ಆರ್. ಮಂಜುನಾಥ | ದ್ವಿ.ದ.ಸ. | – | 8 | 8 |
| 33. | ಡಿ. ರಾಕೇಶ್ | ದ್ವಿ.ದ.ಸ. | 10 | – | 10 |
| 34. | ಲಕ್ಷ್ಮೀ ನಾರಾಯಣ. ಎನ್ | ದ್ವಿ.ದ.ಸ. | 10 | – | 10 |
| 35. | ಶರಣ. ಸಿ | ದ್ವಿ.ದ.ಸ. | 10 | – | 10 |
| 36. | ಬಸಪ್ಪಉಪ್ಪಲ್ಲದಿನ್ನಿ | ದ್ವಿ.ದ.ಸ. | 10 | – | 10 |
| 37. | ನರಸಿಂಹ ರಾವ್ | ದ್ವಿ.ದ.ಸ. | 02 | – | 02 |
| 38. | ಸುಬ್ರಮಣಿ | ನಾ.ದ.ನೌ. | – | 10 | 10 |
| 39. | ಜರ್ನಾಧನ. ಬಿ.ಪಿ. | ನಾ.ದ.ನೌ. | – | 10 | 10 |
| 40. | ರಘು. ಎಂ | ನಾ.ದ.ನೌ. | 10 | 10 | 20 |
| 41. | ಕೆಂಪಯ್ಯ | ನಾ.ದ.ನೌ. | 10 | 10 | 20 |
| 42. | ಪೊತ್ತಣ್ಣ | ನಾ.ದ.ನೌ., | – | 10 | 10 |
| 43. | ನಾಗಲಕ್ಷ್ಮೀ. ಎನ್ | ನಾ.ದ.ನೌ. | – | 10 | 10 |
| 44. | ವೈ. ರಾಮಮೂರ್ತಿ | ನಾ.ದ.ನೌ. | 10 | 8 | 18 |
| 45. | ಆಂಜನಪ್ಪ | ನಾ.ದ.ನೌ., | 9 | 9 | 18 |
| 46. | ಎನ್. ಪ್ರಕಾಶ್ | ನಾ.ದ.ನೌ., | 9 | – | 9 |
| 47. | ಎಲ್. ಶಿವಲಿಂಗಯ್ಯ | ಚಾಲಕರು | 10 | 10 | 20 |
| 48. | ಇ.ಎನ್. ನರೇಂದ್ರ | ಕಂ.ಪ | 10 | 10 | 20 |
| **ಉಪ ಆಯುಕ್ತರು (ಆಡಳಿತ)** | | | | | |
| 49. | ಎಸ್. ಮೂರ್ತಿ | ಶೀಘ್ರಲಿಪಿಗಾರರು | – | 10 | 10 |
| 50. | ಹೆಚ್. ರಾಜು | ದ್ವಿ.ದ.ಸ. | 10 | 10 | 20 |
| 51. | ಪಳನಿವೇಲು | ನಾ.ದ.ನೌ. | – | 10 | 10 |
| 52. | ಜಿ. ನವೀನ್‌ಕುಮಾರ್ | ನಾ.ದ.ನೌ. | – | 9 | 9 |
| 53. | ರಾಜೇಶ್. ಎಂ | ನಾ.ದ.ನೌ. | 10 | 8 | 18 |
| 54. | ವೆಂಕಟೇಶ್ ಬಿನ್ ಕುಳ್ಳಪ್ಪ | ನಾ.ದ.ನೌ. | 10 | – | 10 |
| 55. | ಶಿವಣ್ಣ. ಜೆ | ಚಾಲಕರು | 10 | 10 | 20 |
| **ಅಪರ ಆಯುಕ್ತರು (ಆಡಳಿತ)** | | | | | |
| 56. | ಬಿ. ಪುರುಷೊತ್ತಮ್ | ವ್ಯವಸ್ಥಾಪಕರು | 10 | 10 | 20 |
| 57. | ಜಿ. ರೂಪ | ವರದಿಗಾರರು | 10 | 9 | 19 |
| 58. | ಸೆಟ್ಟೋಜಿರಾವ್ | ದ್ವಿ.ದ.ಕಂ.ಪ. | 10 | 10 | 20 |
| 59. | ಸಿ. ಮುರಳಿಮೋಹನ್ | ನಾ.ದ.ನೌ. | – | 10 | 10 |
| 60. | ಬಾಬು. ಕೆ | ನಾ.ದ.ನೌ. | 10 | 8 | 18 |

| | | | | | |
|---|---|---|---|---|---|
| 61. | ಶಿವಕುಮಾರ್. ಎ | ನಾ.ದ.ನೌ. | 10 | 9 | 19 |
| 62. | ಹೊನ್ನಲಿಂಗೇಗೌಡ | ಚಾಲಕರು | 10 | 10 | 20 |
| 63. | ಚಿನ್ನಪ್ಪ | ಚಾಲಕರು | 10 | – | 10 |
| ಮಾನ್ಯ ಆಯುಕ್ತರು ರವರ ಆಪ್ತ ಕಾರ್ಯಾಲಯ | | | | | |
| 64. | ನರಸಿಂಹ ಶಾಸ್ತ್ರಿ. ಎನ್.ಎಸ್. | ತಾಂತ್ರಿಕ ಸಹಾಯಕರು | – | 10 | 10 |
| 65. | ರಾಜೇಶ್ವರಿ | ಆಯುಕ್ತರವರ ಆಪ್ತ ಕಾರ್ಯದರ್ಶಿ | 10 | – | 10 |
| 66. | ಬಿ. ಶೈಲಜ | ವರದಿಗಾರರು | 9 | – | 9 |
| 67. | ಶ್ರೀಮತಿ ಮಾಲತಿ | ಶೀಘ್ರಲಿಪಿಗಾರರು | 10 | – | 10 |
| 68. | ಶೀಲಾ | ಶೀಘ್ರಲಿಪಿಗಾರರು | – | 10 | 10 |
| 69. | ಸಬೀತಾದೇವಿ. ಎಸ್ | ಶೀಘ್ರಲಿಪಿಗಾರರು | 10 | – | 10 |
| 70. | ಧನರಾಜ್. ಎಸ್ | ಪ್ರ.ದ.ಸ. | – | 9 | 9 |
| 71. | ಮಂಜುನಾಥ್. ಎಸ್ | ಪ್ರ.ದ.ಸ. | – | 10 | 10 |
| 72. | ಪ್ರೇಮ. ಪಿ | ದ್ವಿ.ದ.ಸ | – | 10 | 10 |
| 73. | ಜಿ. ಕೃಷ್ಣ | ದ್ವಿ.ದ.ಸ | 10 | – | 10 |
| 74. | ಜೈರಾಜು. ಎನ್ | ದ್ವಿ.ದ.ಸ | 10 | 10 | 20 |
| 75. | ಜಸ್ಟೀನ್ ಕ್ರೂಸ್ | ದ್ವಿ.ದ.ಸ | 10 | 8 | 18 |
| 76. | ಗಂಗಾಧರಯ್ಯ | ಚಾಲಕರು | 10 | 10 | 10 |
| 77. | ಪಳನಿ. ಡಿ | ಚಾಲಕರು | 10 | 10 | 20 |
| 78. | ಡಿ. ವೆಂಕಟೇಶ್ | ನಾ.ದ.ನೌ | – | 10 | 10 |
| 79. | ನರಸಿಂಹ | ನಾ.ದ.ನೌ | | 10 | 10 |
| 80. | ವೀರೇಶ್ | ನಾ.ದ.ನೌ | 10 | 10 | 20 |
| ಬಿ.ಬಿ.ಎಂ.ಪಿ.ಯಿಂದಓಓಡಿಆಧಾರದ ಮೇಲೆ ನಗರಾಭಿವೃದ್ದಿಇಲಾಖೆಯಲ್ಲಿಕಾರ್ಯನಿರ್ವಹಿಸುತ್ತಿರುವವರು | | | | | |
| 81. | ಎಸ್. ಅಶೋಕ್‌ಕುಮಾರ್ | ಬೆರಳಚ್ಚುಗಾರರು ವಿದ್ಯಾಧಿಕಾರಿಗಳ ಕಛೇರಿ | 10 | 10 | 20 |
| 82. | ಆರ್. ತಂಗವೇಲು | ಚಾಲಕರು ಆಯುಕ್ತರಕಛೇರಿ ಆಡಳಿತ ಶಾಖೆ | 10 | 10 | 20 |
| 83. | ಬಿ. ತ್ಯಾಗರಾಜ್ | ನಾ.ದ.ನೌ., ಆ.ವೈ. (ತಾಮಕುಕ) | 10 | 10 | 20 |
| 84. | ಎಂ. ಬಸವರಾಜು | ಪೌ.ಕಾ. | – | 10 | 10 |
| 85. | ಸಿದ್ದಯ್ಯ | ಚಾಲಕರು | 10 | 10 | 20 |
| 86. | ಬಿ.ಎಂ. ಹರೀಶ್ | ಶೀಘ್ರಲಿಪಿಗಾರರು | 10 | 10 | 20 |
| 87. | ಈರಣ್ಣ ಬೋರಾವತ್ | ಶೀಘ್ರಲಿಪಿಗಾರರು | 10 | 10 | 20 |

–ಮುಂದೂಡಿದೆ–

## *31]. ವಿಷಯದ ಸಂಖ್ಯೆ: ತೆಆಸ್ಥಾಸ/193/2016-17*

ಆಯುಕ್ತರ ದಿನಾಂಕ: 01.02.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ದಿನಾಂಕ: 31.01.2017ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಾಂಧಿನಗರ ವಿಧಾನಸಭಾಕ್ಷೇತ್ರ ಶಾಸಕರಾದ ಮಾನ್ಯ ದಿನೇಶ್ ಗುಂಡೂರಾವ್ ರವರು ತಮ್ಮ ಮತ ಕ್ಷೇತ್ರ ವ್ಯಾಪ್ತಿಯ ಮಾಗಡಿರಸ್ತೆ, ಪ್ರಥಮ ದರ್ಜೆ ಕಾಲೇಜಿನಲ್ಲಿ 2013 ರಿಂದ ಬಿ.ಎ ಮತ್ತು ಬಿ.ಕಾಂ., ಕೋರ್ಸ್ ತರಗತಿಗಳು ನಡೆಯುತ್ತಿರುತ್ತದೆ. ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಬಹುತೇಕ ವಿದ್ಯಾರ್ಥಿಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರಾಗಿರುತ್ತಾರೆ. ಈ ಕಾಲೇಜಿನಲ್ಲಿ ಪದವಿ ಶಿಕ್ಷಣ ಪೂರೈಸುವ ವಿದ್ಯಾರ್ಥಿಗಳು ಮುಂದಿನ ಸ್ನಾತಕೋತ್ತರ ಶಿಕ್ಷಣಕ್ಕಾಗಿ ದೂರದ ಕಾಲೇಜುಗಳಿಗೆ ದುಬಾರಿ ಶುಲ್ಕ ನೀಡಿ ವ್ಯಾಸಂಗ ಮಾಡುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಈ ಪ್ರದೇಶದಲ್ಲಿ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ನೀಡುವ ಸಲುವಾಗಿ ಸದರಿ ಕಾಲೇಜಿನಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಎಂ.ಎ ಮತ್ತು ಎಂ.ಕಾಂ., ಸ್ನಾತಕೋತ್ತರಗಳನ್ನು ಪ್ರಾರಂಭಿಸಲು ಕೋರಿ ಪತ್ರ ಬರೆದಿರುತ್ತಾರೆ.

ಅದರಂತೆ ಪ್ರಾಂಶುಪಾಲರು ಪ್ರಥಮ ದರ್ಜೆ ಕಾಲೇಜು ಮಾಗಡಿರಸ್ತೆ ರವರು ಇಲ್ಲಿ 2013ರಿಂದ ಬಿ.ಎ./ಬಿ.ಕಾಂ., ಕೋರ್ಸ್‌ಗಳ ತರಗತಿಗಳು ನಡೆಯುತ್ತಿದ್ದು, ಈಗಾಗಲೇ ಇಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಕೊಠಡಿಗಳ ಸೌಲಭ್ಯ, ಆಟದ ಮೈದಾನ, ಇನ್ನೂ ಮುಂತಾದ ಸೌಲಭ್ಯಗಳನ್ನು ಹೊಂದಿದ್ದು, ನಮ್ಮ ಕಾಲೇಜಿನ ಸುತ್ತ ಮುತ್ತಲು ಯಾವುದೇ ಸ್ನಾತಕೋತ್ತರ ಕಾಲೇಜುಗಳು ಇರುವುದಿಲ್ಲ ಹಾಗೂ ಇಲ್ಲಿನ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ದೂರದ ಕಾಲೇಜುಗಳಿಗೆ ದುಬಾರಿ ಶುಲ್ಕ ನೀಡಿ ವ್ಯಾಸಂಗ ಮಾಡುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಆದ್ದರಿಂದ ಮುಂದಿನ ಶೈಕ್ಷಣಿಕ ಸಾಲಿನಿಂದ ಈ ಕಾಲೇಜಿನಲ್ಲಿ ಹೆಚ್ಚುವರಿಯಾಗಿ ಸ್ನಾತಕೋತ್ತರ ಕೋರ್ಸ್‌ಗಳಾದ ಎಂ.ಎ ಮತ್ತು ಎಂ.ಕಾಂ., ತರಗತಿಗಳನ್ನು ನಡೆಸಲು ಕಾಲೇಜು ಮೂಲ ಸೌಲಭ್ಯಗಳನ್ನು ಹೊಂದಿದ್ದು ಕಾಲೇಜಿನ ಕಟ್ಟಡದ ಪಕ್ಕದಲ್ಲಿ ಸದರಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಯಾವುದೇ ಸಮಸ್ಯೆಯಾಗುವುದಿಲ್ಲ ಎಂಬುದಾಗಿ ವರದಿ ನೀಡಿರುತ್ತಾರೆ ಮತ್ತು ಬೆಂಗಳೂರು ವಿಶ್ವವಿದ್ಯಾಲಯರವರ ಶುಲ್ಕದ ವಿವರ ಈ ಕೆಳಕಂಡಂತಿರುತ್ತದೆ.

| | |
|---|---|
| ಅರ್ಜಿಯ ಶುಲ್ಕ | ರೂ. 1,000/- |
| ದಂಡ ಶುಲ್ಕ | ರೂ. 5,000/- |
| ಎಂ.ಎ ಶುಲ್ಕ | ರೂ. 66,000/- (ಪ್ರತಿ ವಿಭಾಗಕ್ಕೆ) |
| ಎಂ.ಕಾಂ., ಶುಲ್ಕ | ರೂ.1,33,000/- (ಪ್ರತಿ ವಿಭಾಗಕ್ಕೆ) |

ಆದ್ದರಿಂದ ಮಾಗಡಿರಸ್ತೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ (2017-18) ಜಾರಿಗೆ ಬರುವಂತೆ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಹಿತದೃಷ್ಟಿಯಿಂದ ಎಂ.ಎ ಮತ್ತು ಎಂ.ಕಾಂ., ಸ್ನಾತಕೋತ್ತರ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ಆದೇಶ ಕೋರಿ ಶಿಕ್ಷಣ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಆಯುಕ್ತರವರ ದಿನಾಂಕ: 31.01.2017ರ ಟಿಪ್ಪಣಿಯನ್ನು ಮಂಡಿಸಿದೆ.

*-ಮುಂದೂಡಿದೆ-*

***32]. ವಿಷಯದ ಸಂಖ್ಯೆ: ತೆಆಸ್ಥಾಸ/194/2016-17***

ಆಯುಕ್ತರ ದಿನಾಂಕ: 13.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ನೇತಾಜಿ ನಾಗರೀಕರ ಜಾಗೃತಿ ವೇದಿಕೆ (ನೊಂದಣಿ) ಬೆಂಗಳೂರು-560079. ರವರು ಸುಮಾರು 17 ವರ್ಷಗಳಿಂದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಶಾಲಾ ಮಕ್ಕಳಿಗೆ ಉಚಿತ ಪುಸ್ತಕ ಹಾಗೂ ಸಮವಸ್ತ್ರಗಳನ್ನು ವಿತರಿಸಿಕೊಂಡು ಬರುತ್ತಿರುವುದಾಗಿ ತಮ್ಮ ಮನವಿಯಲ್ಲಿ ತಿಳಿಸಿರುತ್ತಾರೆ. 2016-17ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಂಘ ಸಂಸ್ಥೆಗಳಿಗೆ ಪಿ ಕೋಡ್-0048, ಅಡಿಯಲ್ಲಿ ಮೀಸಲಿಟ್ಟಿರುವ ಮೊತ್ತ ರೂ.500.00 (ಐದು ನೂರು) ಲಕ್ಷಗಳಲ್ಲಿ, ಲೆಕ್ಕಶೀರ್ಷಿಕೆ 24, ಅನುಬಂಧ-2 ಕ್ರಮ ಸಂಖ್ಯೆ: 1ರಲ್ಲಿ ಸದರಿ ಸಂಸ್ಥೆಗೆ ಮೀಸಲಿಟ್ಟಿರುವ ಮೊತ್ತ ರೂ.5.00 (ಐದು) ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಈ ಸಂಬಂಧವಾಗಿ ಸದರಿ ಸಂಸ್ಥೆಯವರ ಕೋರಿಕೆಯಂತೆ 2016-17ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಂಘ ಸಂಸ್ಥೆಗಳಿಗೆ ಪಿ ಕೋಡ್-0048, ಕೊಡುಗೆಗಳು ಮತ್ತು ಸಹಾಯಧನದ ಅಡಿಯಲ್ಲಿ ಮೀಸಲಿಟ್ಟಿರುವ ಮೊತ್ತ ರೂ.500.00 (ಐದು ನೂರು) ಲಕ್ಷಗಳಲ್ಲಿ, ಸದರಿ ಸಂಸ್ಥೆಯವರಿಗೆ ಲೆಕ್ಕಶೀರ್ಷಿಕೆ 24 ಅನುಬಂಧ-2, ಕ್ರಮಸಂಖ್ಯೆ. 1ರಲ್ಲಿ ಮೀಸಲಿಟ್ಟಿರುವ ಮೊತ್ತ ರೂ.5.00 (ಐದು) ಲಕ್ಷಗಳನ್ನು ಬಿಡುಗಡೆ ಮಾಡಲು ಮುಖ್ಯಲೆಕ್ಕಾಧಿಕಾರಿಗಳು ಕಂಡಿಕೆ (2)ರಲ್ಲಿ ಸೂಚಿಸಿರುವ ಮೇರೆಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆಯವ್ಯಯ ಅನುಬಂಧ-2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.3.00 (ಮೂರು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***33]. ವಿಷಯದ ಸಂಖ್ಯೆ: ತೆಆಸ್ಥಾಸ/195/2016-17***

ಆಯುಕ್ತರ ದಿನಾಂಕ: 09.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ರಕ್ಷಣಾ ವೇದಿಕೆ (ರಿ) ನಂ.31, 2ನೇ ಅಡ್ಡರಸ್ತೆ, ಈಜುಕೊಳ ಬಡಾವಣೆ, ಮಲ್ಲೇಶ್ವರಂ, ಬೆಂಗಳೂರು-560003. ರವರು ರಾಷ್ಟ್ರಕವಿ ಕುವೆಂಪು ರವರ ಕಂಚಿನ ಪ್ರತಿಮೆ ಕಾರ್ಯವನ್ನು ದಿನಾಂಕ: 01-11-2014ರಂದು ನೇರವೇರಿಸಿದ್ದು, ಸದರಿ ಕಾರ್ಯಕ್ರಮ್ಮಕ್ಕೆ ವೆಚ್ಚವಾಗಿರುವ ಮೊತ್ತ 20.00 (ಇಪ್ಪತ್ತು) ಲಕ್ಷಗಳನ್ನು 2016-17ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಂಘ ಸಂಸ್ಥೆಗಳಿಗೆ ಪಿ ಕೋಡ್-0048, ಅಡಿಯಲ್ಲಿ ಮೀಸಲಿಟ್ಟಿರುವ ಮೊತ್ತ ರೂ.500.00 (ಐದು ನೂರು) ಲಕ್ಷಗಳಲ್ಲಿ, ಮಂಜೂರು ಮಾಡಲು ಸಂಸ್ಥೆಯವರು ಕೋರಿರುತ್ತಾರೆ.

ಈ ಸಂಬಂಧವಾಗಿ ಸದರಿ ಸಂಸ್ಥೆಯವರ ಕೋರಿಕೆಯಂತೆ 2016-17ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಂಘ ಸಂಸ್ಥೆಗಳಿಗೆ ಪಿ ಕೋಡ್-0048, ಕೊಡುಗೆಗಳು ಮತ್ತು ಸಹಾಯಧನದ ಅಡಿಯಲ್ಲಿ ಮೀಸಲಿಟ್ಟಿರುವ ಮೊತ್ತ ರೂ.500.00 (ಐದು ನೂರು) ಲಕ್ಷಗಳಲ್ಲಿ, ಸದರಿ ಸಂಸ್ಥೆಯವರು ಕೋರಿರುವ ಮೊತ್ತ ರೂ.20.00 (ಇಪ್ಪತ್ತು) ಲಕ್ಷಗಳನ್ನು ಮಂಜೂರು ಮಾಡುವ ಬಗ್ಗೆ ಪರಿಗಣಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ.10.00 (ರೂ. ಹತ್ತು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***34]. ವಿಷಯದ ಸಂಖ್ಯೆ: ತೆಆಸ್ಥಾಸ/196/2016–17***

ಆಯುಕ್ತರ ದಿನಾಂಕ: 09.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಆಶಾ (Academy for severe Handicaps and Autism (ASHA) Charetable trust L-76A, Kirloskar Kolony 5th main 3rd cross, Basaveswaranagara 4th block Bangalore 560079. ರವರು ಬುದ್ದಿಮಾಂದ್ಯ ಮಕ್ಕಳ ಏಳ್ಗೆಗಾಗಿ ದುಡಿಯುತ್ತಿದ್ದು, 2016–17ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಂಘ ಸಂಸ್ಥೆಗಳಿಗೆ ಪಿ ಕೋಡ್–0048, ಅಡಿಯಲ್ಲಿ ಮೀಸಲಿಟ್ಟಿರುವ ಮೊತ್ತ ರೂ.500.00 (ಐದು ನೂರು) ಲಕ್ಷಗಳಲ್ಲಿ, ಲೆಕ್ಕಶೀರ್ಷಿಕೆ 24, ಅನುಬಂಧ–2 ಕ್ರಮ ಸಂಖ್ಯೆ: 20ರಲ್ಲಿ ಸದರಿ ಸಂಸ್ಥೆಗೆ ಮೀಸಲಿಟ್ಟಿರುವ ಮೊತ್ತ ರೂ.3.00 (ಮೂರು) ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಈ ಸಂಬಂಧವಾಗಿ ಸದರಿ ಸಂಸ್ಥೆಯವರ ಕೋರಿಕೆಯಂತೆ 2016–17ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಂಘ ಸಂಸ್ಥೆಗಳಿಗೆ ಪಿ ಕೋಡ್–0048, ಕೊಡುಗೆಗಳು ಮತ್ತು ಸಹಾಯಧನದ ಅಡಿಯಲ್ಲಿ ಮೀಸಲಿಟ್ಟಿರುವ ಮೊತ್ತ ರೂ.500.00 (ಐದು ನೂರು) ಲಕ್ಷಗಳಲ್ಲಿ, ಸದರಿ ಸಂಸ್ಥೆಯವರಿಗೆ ಲೆಕ್ಕಶೀರ್ಷಿಕೆ 24 ಅನುಬಂಧ–2, ಕ್ರಮಸಂಖ್ಯೆ. 20ರಲ್ಲಿ ಮೀಸಲಿಟ್ಟಿರುವ ಮೊತ್ತ ರೂ.3.00 (ಮೂರು) ಲಕ್ಷಗಳನ್ನು ಬಿಡುಗಡೆ ಮಾಡಲು ಮುಖ್ಯಲೆಕ್ಕಾಧಿಕಾರಿಗಳು ಕಂಡಿಕೆ (29)ರಲ್ಲಿ ಸೂಚಿಸಿರುವ ಮೇರೆಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2016–17ನೇ ಸಾಲಿನ ಆಯವ್ಯಯ ಅನುಬಂಧ–2ರಲ್ಲಿ ಆಶಾ ಚಾರಿಟಬಲ್ ಟ್ರಸ್ಟ್‌ಗೆ ಹಂಚಿಕೆ ಮಾಡಲಾಗಿರುವ ರೂ.3.00 (ಮೂರು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***35]. ವಿಷಯದ ಸಂಖ್ಯೆ: ತೆಆಸ್ಥಾಸ/197/2016–17***

ಆಯುಕ್ತರ ದಿನಾಂಕ: 18.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ಹೆಚ್. ಕೋದಂಡರಾಮ, ಅಧ್ಯಕ್ಷರು, ಅಂಬೇಡ್ಕರ್ ಯುವಸೇನೆ (ರಿ) ಸಂಖ್ಯೆ: 7977, ಡಾ॥ ಅಂಬೇಡ್ಕರ್ ಸ್ಟೇಡಿಯಂ ಬಸವೇಶ್ವರ ನಗರ ಮುಖ್ಯರಸ್ತೆ, ಅಗ್ರಹಾರ ದಾಸರಹಳ್ಳಿ, ಬೆಂಗಳೂರು–79. ರವರು ವಿವಿಧ ಇಲಾಖೆಗಳು, ಸಂಘ ಸಂಸ್ಥೆಗಳ ಸಹಕಾರದಲ್ಲಿ ಯುವಕ ಯುವತಿಯವರಿಗೆ ಮಾಹಿತಿ ಶಿಕ್ಷಣ, ಕಲೆ, ಸಾಹಿತ್ಯ, ಕ್ರೀಡೆ, ಹಾಗೂ ಸ್ವಯಂ ಉದ್ಯೋಗದ ವೃತ್ತಿ ಪರ ತರಗತಿಗಳನ್ನು ಕಳೆದ ಹತ್ತು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು, ಈ ನಿಟ್ಟಿನಲ್ಲಿ 2016–17ನೇ ಸಾಲಿನಲ್ಲಿ ಸಂಸ್ಕೃತಿ ಮತ್ತು ಕ್ರೀಡೆ ಲೆಕ್ಕಶೀರ್ಷಿಕೆ 24ರ ಪಿಕೋಡ್ 0048ರಲ್ಲಿನ ಕೊಡುಗೆ ಮತ್ತು ಸಹಾಯಧನ ಅಡಿಯಲ್ಲಿನ ರೂ.10.00 (ಹತ್ತು) ಲಕ್ಷಗಳ ಸಹಾಯಧನವನ್ನು ಕೋರಿರುತ್ತಾರೆ.

ತತ್ಸಂಬಂಧ. ಮೇಲಿನ ಅಂಶಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ ಮೆ॥ ಅಂಬೇಡ್ಕರ್ ಯುವಸೇನೆ (ರಿ), ಬೆಂಗಳೂರು ರವರು ಕೋರಿರುವ ಮೊತ್ತ ರೂ.10.00 (ಹತ್ತು) ಲಕ್ಷಗಳ ಸಹಾಯಧನ ಮಂಜೂರಾತಿ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ.50.00 (ರೂ. ಐವತ್ತು ಸಾವಿರ ಮಾತ್ರ) ಸಾವಿರಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***36]. ವಿಷಯದ ಸಂಖ್ಯೆ: ತೆಆಸ್ಥಾಸ/198/2016–17***

ಆಯುಕ್ತರ ದಿನಾಂಕ: 18.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮೆ॥ ಕೆ.ಸಿ.ಜನರಲ್ ಆಸ್ಪತ್ರೆ, ಮಲ್ಲೇಶ್ವರಂ, ಬೆಂಗಳೂರು 560003 ರವರು ಆಸ್ಪತ್ರೆಯ ಸುಣ್ಣ/ಬಣ್ಣ ಹಾಗೂ ಇತರೆ ಕಟ್ಟಡ ದುರಸ್ಥಿ

ಕಾಮಗಾರಿ ಮತ್ತು ಇನ್ನಿತರೆ ಕಾರ್ಯಗಳಿಗೆ ಪಾಲಿಕೆ ಆಯವ್ಯಯದ 2016-17ನೇ ಸಾಲಿನಲ್ಲಿ ಲೆಕ್ಕ್ರ್ರಶೀರ್ಷಿಕೆ 24, ಪಿ-ಕೋಡ್ 0048ರ ಅಡಿಯಲ್ಲಿ ಅನುಬಂಧ-2ರ ಕ್ರಮಸಂಖ್ಯೆ: 26ರಲ್ಲಿ ಮೀಸಲಿಟ್ಟಿರುವ ರೂ.25.00 (ಇಪ್ಪತ್ತೈದು) ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ಶ್ರೀಯುತ ಆರ್.ಎಸ್.ಸತ್ಯನಾರಾಯಣ ಮಾಜಿ ಆಡಳಿತ ಪಕ್ಷದ ನಾಯಕರು ತಮ್ಮ ಮನವಿಯಲ್ಲಿ ಕೋರಿರುತ್ತಾರೆ.

ಈ ಸಂಬಂಧ ಸದರಿ ಮೆ॥ ಕೆ.ಸಿ.ಜನರಲ್ ಆಸ್ಪತ್ರೆ, ಮಲ್ಲೇಶ್ವರಂ, ಬೆಂಗಳೂರು ಸಂಸ್ಥೆಯವರು ಕೈಗೊಂಡಿರುವ ಸುಣ್ಣ/ಬಣ್ಣ ಹಾಗೂ ದುರಸ್ಥಿ ಕಾಮಗಾರಿ ಕುರಿತು ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ ಲೆಕ್ಕಶೀಷಿಕೆ 24, ಪಿ-ಕೋಡ್ 0048ರ ಆಯವ್ಯಯ 2016-17ನೇ ಸಾಲಿನ ಅನುದಾನ ಮತ್ತು ಕೊಡುಗೆ ಅಡಿಯಲ್ಲಿ ಅನುಬಂಧ-2ರ ಕ್ರಮಸಂಖ್ಯೆ 26ರಲ್ಲಿ ಸದರಿ ಸಂಸ್ಥೆಗೆ 25.00 (ಇಪ್ಪತ್ತೈದು) ಲಕ್ಷಗಳನ್ನು ಮೀಸಲಿರಿಸಿದ್ದು ಸದರಿ ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆಯವ್ಯಯ ಅನುಬಂಧ-2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.25.00 (ಇಪ್ಪತ್ತೈದು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

### ***37]. ವಿಷಯದ ಸಂಖ್ಯೆ: ತೆಆಸ್ಥಾಸ/199/2016-17***

ಆಯುಕ್ತರ ದಿನಾಂಕ: 18.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ಹೆಚ್.ಆರ್. ವೀರಭದ್ರ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರಾಹುಲ್ ಗಾಂಧಿ ಯುವಶಕ್ತಿ (ರಿ) ನಂ.1226, 40 ಅಡಿ ರಸ್ತೆ, 7ನೇ ಮೈನ್, ಮುನೇಶ್ವರ ಬ್ಲಾಕ್, ಬೆಂಗಳೂರು-560026. 2016-17ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಸಂಘ/ಸಂಸ್ಥೆಗಳಿಗೆ ಮೀಸಲಿರಿಸಿದ ಅನುದಾನ ರೂ.500.00 ಲಕ್ಷಗಳ ಮೊತ್ತದಲ್ಲಿ ಭಾರತದ ಮಾಜಿ ಪ್ರಧಾನಿ ದಿವಂಗತ ಶ್ರೀಮತಿ ಇಂದಿರಾ ಗಾಂಧಿಯವರ ಪ್ರತಿಮೆಯನ್ನು ವಿಧಾನಸೌಧದ ಪಶ್ಚಿಮ ದ್ವಾರದ ಮುಂಭಾಗದಲ್ಲಿ ಪ್ರತಿಷ್ಠಾಪಿಸುವ ಬಗ್ಗೆ ಅನುದಾನವನ್ನು ಮಂಜೂರು ಮಾಡಲು ಕೋರಿದ್ದು ರೂ.85.00 ಲಕ್ಷಗಳ ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ಸಹಾಯಧನವನ್ನು ಬಿಡುಗಡೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ತತ್ಸಂಬಂಧ ಕೋಡ್ 48ರ ಕೊಡುಗೆ ಮತ್ತು ಅನುದಾನದಡಿಯಲ್ಲಿ ಮಂಜೂರು ಮಾಡಲು ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ ಶ್ರೀ ಹೆಚ್.ಆರ್. ವೀರಭದ್ರ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರಾಹುಲ್ ಗಾಂಧಿ ಯುವಶಕ್ತಿ (ರಿ) ಬೆಂಗಳೂರು ರವರಿಗೆ ಸಹಾಯಧನ ಮಂಜೂರಾತಿ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***-ಮುಂದೂಡಿದೆ-***

### ***38]. ವಿಷಯದ ಸಂಖ್ಯೆ: ತೆಆಸ್ಥಾಸ/200/2016-17***

ಆಯುಕ್ತರ ದಿನಾಂಕ: 18.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ ಟಿ.ಜಿ. ದಾಮೋಧರನ್ ಅಧ್ಯಕ್ಷರು, ತಮಿಳು ಸಂಘ (ನೊಂದಣಿ), ಸಂಖ್ಯೆ.59, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ, ಬೆಂಗಳೂರು-560042. 2016-17ನೇ ಸಾಲಿನ ತಿರುವಳ್ಳುವರ್ ಜನ್ಮದಿನೋತ್ಸವ ಹಾಗೂ ಕನ್ನಡೇತರರಿಗೆ ಕನ್ನಡ ಕಲಿಕೆ ಕಾರ್ಯಗಳನ್ನು ಕೈಗೊಳ್ಳಲು, 2016-17ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಂಘ/ಸಂಸ್ಥೆಗಳಿಗೆ ಮೀಸಲಿಟ್ಟಿರುವ ಮೊತ್ತ ರೂ.500.00 (ಐದುನೂರು) ಲಕ್ಷಗಳಲ್ಲಿ, ಸದರಿ ಸಂಸ್ಥೆಯವರಿಗೆ ಲೆಕ್ಕಶೀರ್ಷಿಕೆ

24 ಪಿ–ಕೋಡ್ 0048, ಸಹಾಯಧನ ಹಾಗೂ ಕೊಡುಗೆಗಳು ಅಡಿಯಲ್ಲಿ ಅನುಬಂಧ–02, ಕ್ರಮ ಸಂಖ್ಯೆ: 17ರಲ್ಲಿ ಬೆಂಗಳೂರು ತಮಿಳು ಸಂಘದವರಿಗೆ ಮೀಸಲಿಟ್ಟಿರುವ ಮೊತ್ತ ರೂ.10.00 (ಹತ್ತು) ಲಕ್ಷಗಳನ್ನು ಬಿಡುಗಡೆ ಮಾಡಲು ಸದರಿ ಸಂಸ್ಥೆಯವರು ಕೋರಿದ್ದು, ಪೂಜ್ಯ ಮಹಾಪೌರರು ರವರು ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಈ ಸಂಬಂಧವಾಗಿ ಸದರಿ ಸಂಸ್ಥೆಯವರ ಕಾರ್ಯಕ್ರಮಕ್ಕೆ 2016–17ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಂಘ/ಸಂಸ್ಥೆಗಳಿಗೆ ಮೀಸಲಿಟ್ಟಿರುವ ಮೊತ್ತ ರೂ.500.00 (ಐದುನೂರು) ಲಕ್ಷಗಳಲ್ಲಿ ಸದರಿ ಸಂಸ್ಥೆಯವರಿಗೆ ಮುಖ್ಯ ಲೆಕ್ಕಾಧಿಕಾರಿಯವರ ವರದಿಯಲ್ಲಿನ ಮಾನ್ಯ ಆಯುಕ್ತರ ನಿರ್ದೇಶನದಂತೆ, ಮೀಸಲಿರಿಸಿರುವ ಮೊತ್ತದಲ್ಲಿ ಶೇಕಡ 50% ರಷ್ಟು ಅಥವಾ ಸೂಕ್ತ ಮೊತ್ತ ಬಿಡುಗಡೆ ಮಾಡುವ ಬಗ್ಗೆ ಕ್ರಮಕೈಗೊಳ್ಳಲು ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2016–17ನೇ ಸಾಲಿನ ಆಯವ್ಯಯ ಅನುಬಂಧ–2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.10.00 (ಹತ್ತು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***39]. ವಿಷಯದ ಸಂಖ್ಯೆ: ತೆಆಸ್ಥಾಸ/201/2016–17***

ಆಯುಕ್ತರ ದಿನಾಂಕ: 19–01–2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ನಅಇ 253 ಎಂಎನ್‌ಜಿ 2016, ದಿನಾಂಕ: 23–12–2016 ರಲ್ಲಿ ಡಾ॥ ಕೆ.ವಿ.ವೇಣುಗೋಪಾಲ್, ಉಪ ನಿರ್ದೇಶಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೊ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಉಪ ನಿರ್ದೇಶಕರು (ಪಶುಪಾಲನೆ) ಹುದ್ದೆಗೆ ನಿಯೋಜಿಸಲಾಗಿರುತ್ತದೆ.

ಡಾ॥ ಕೆ.ವಿ.ವೇಣುಗೋಪಾಲ್, ಉಪ ನಿರ್ದೇಶಕರು (ಪಶುಪಾಲನೆ) ರವರು ಮಾನ್ಯ ಆಯುಕ್ತರವರ ಕಛೇರಿಯಲ್ಲಿ ದಿನಾಂಕ: 02.01.2017 ರಂದು ಕರ್ತವ್ಯದ ಮೇಲೆ ಹಾಜರಾತಿಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಪಾಲಿಕೆಯಲ್ಲಿ ಉಪ ನಿರ್ದೇಶಕರು (ಪಶುಪಾಲನೆ) ಹುದ್ದೆ ಖಾಲಿ ಇರುತ್ತದೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಡಾ॥ ಕೆ.ವಿ.ವೇಣುಗೋಪಾಲ್, ಉಪ ನಿರ್ದೇಶಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ಉಪ ನಿರ್ದೇಶಕರು (ಪಶುಪಾಲನೆ) ಹುದ್ದೆಯಲ್ಲಿ ಕರ್ತವ್ಯದ ಮೇಲೆ ತೆಗೆದುಕೊಳ್ಳುವ ಬಗ್ಗೆ ಕಡತವನ್ನು ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮೇರೆಗೆ, **ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳಡಿ ಪಶುವೈದ್ಯಕೀಯ ವಿಭಾಗ ಕಛೇರಿ ಹಾಗೂ ಸದರಿ ಕಛೇರಿಗೆ ಯಾವುದೇ ಹುದ್ದೆಗಳು ಮಂಜೂರಾಗದೆ ಇದ್ದಾಗ್ಯೂ ಹಲವಾರು ಅಧಿಕಾರಿಗಳು ಪಶುವೈದ್ಯಕೀಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಪ್ರಸ್ತುತ ಪಾಲಿಕೆಯ ಅಧೀನದಲ್ಲಿರುವ 04 ವಧಾಗಾರಗಳ ಮೇಲುಸ್ತುವಾರಿ ಹಾಗೂ ಕೋಳಿ ಮತ್ತು ಮಾಂಸದ ಅಂಗಡಿಗಳಿಗೆ ಉದ್ದಿಮೆ ಪರವಾನಗಿ ನೀಡುವ ಕೆಲಸ ಕಾರ್ಯಗಳನ್ನು ಮಾತ್ರ ಈ ವಿಭಾಗದಿಂದ ನಿರ್ವಹಿಸುತ್ತಿದ್ದು, ಪಶು ವೈದ್ಯಕೀಯ ವಿಭಾಗ ಜಾರಿಯಲ್ಲಿ ಇಲ್ಲದ ಸಮಯದಲ್ಲಿ, ಸದರಿಯವರು ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳನ್ನು ಪಾಲಿಕೆಯ ಆರೋಗ್ಯ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿದುದ್ದರಿಂದ, ಪಶುಪಾಲನೆ ವಿಭಾಗದಲ್ಲಿ ಸುಮಾರು 28**

ಮಂದಿ ಅಧಿಕಾರಿ / ನೌಕರರುಗಳು ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಇದರಿಂದಾಗಿ ಸದರಿಯವರುಗಳಿಗೆ ವೇತನ ಹಾಗೂ ಇತರೆ ಭತ್ಯೆಗಳ ಪಾವತಿಯಿಂದಾಗಿ ಪಾಲಿಕೆಗೆ ಆರ್ಥಿಕ ಹೊರೆ ಹೆಚ್ಚಾಗಿರುತ್ತದೆ.

ಆದ್ದರಿಂದ, ಅನಗತ್ಯ ಹಾಗೂ ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿ ಪಶುವೈದ್ಯಕೀಯಕ್ಕೆ ಸಂಬಂಧಿಸಿದ ಅಧಿಕಾರಿ/ನೌಕರರುಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಇವರುಗಳ ಅವಶ್ಯಕತೆ ಕಂಡು ಬರುತ್ತಿಲ್ಲವಾದ್ದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ವ್ಯತಿರಿಕ್ತವಾಗಿ ಪಶುಪಾಲನೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಕಡತವನ್ನು ಮಂಡಿಸುವುದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಢಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 18.03.2017ರ ಸಭೆಯ ನಿರ್ಣಯ.

**_–ಮುಂದೂಡಿದೆ–_**

## *40]. ವಿಷಯದ ಸಂಖ್ಯೆ: ತೆಆಸ್ಥಾಸ/202/2016–17*

ಆಯುಕ್ತರ ದಿನಾಂಕ: 24.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕಲ್ಯಾಣ ನಗರ ನಾಗರೀಕರ ಸಾಂಸ್ಕೃತಿಕ ವೇದಿಕೆ (ರಿ) ನಂ 423, 2ನೇ ಮುಖ್ಯರಸ್ತೆ, 3ನೇ ಬ್ಲಾಕ್, ಹೆಚ್.ಆರ್.ಬಿ.ಆರ್.ಲೇಔಟ್, ಕಲ್ಯಾಣನಗರ, ಬೆಂಗಳೂರು 560043 ರವರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಸದರಿ ಕಾರ್ಯಕ್ರಮಗಳಿಗೆ 2016–17ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಸಂಘ/ಸಂಸ್ಥೆಗಳಿಗೆ ಪಿ–ಕೋಡ್ 0048ರ ಅಡಿಯಲ್ಲಿ ಮೀಸಲಿಟ್ಟಿರುವ ಮೊತ್ತ ರೂ.500.00 (ಐದುನೂರು) ಲಕ್ಷಗಳಲ್ಲಿ, ಲೆಕ್ಕಶೀರ್ಷಿಕೆ 24, ಅನುಬಂಧ 2 ಕ್ರಮಸಂಖ್ಯೆ: 05ರಲ್ಲಿ ಸದರಿ ಸಂಸ್ಥೆಗೆ ಮೀಸಲಿಟ್ಟಿರುವ ಮೊತ್ತ ರೂ.5.00 (ಐದು) ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಈ ಸಂಬಂಧವಾಗಿ ಸದರಿ ಸಂಸ್ಥೆಯವರ ಕೋರಿಕೆಯಂತೆ 216–17ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಂಘ ಸಂಸ್ಥೆಗಳಿಗೆ ಪಿ–ಕೋಡ್ 00048ರ ಕೊಡುಗೆಗಳು ಮತ್ತು ಸಹಾಯಧನದ ಅಡಿಯಲ್ಲಿ ಮೀಸಲಿಟ್ಟಿರುವ ಮೊತ್ತ ರೂ.500.00 (ಐದುನೂರು) ಲಕ್ಷಗಳಲ್ಲಿ, ಸದರಿ ಸಂಸ್ಥೆಯವರಿಗೆ ಲೆಕ್ಕಶೀರ್ಷಿಕೆ 24, ಅನುಬಂಧ–2 ಕ್ರಮಸಂಖ್ಯೆ 05ರಲ್ಲಿ ಮೀಸಲಿಟ್ಟಿರುವ ಮೊತ್ತ ರೂ.5.00 (ಐದು) ಲಕ್ಷಗಳನ್ನು ಬಿಡುಗಡೆ ಮಾಡಲು ಮುಖ್ಯಲೆಕ್ಕಾಧಿಕಾರಿಗಳು ಕಂಡಿಕೆ (20)ರಲ್ಲಿ ಅನುಮೋದಿಸಿರುವ ಮೇರೆಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2016–17ನೇ ಸಾಲಿನ ಆಯವ್ಯಯ ಅನುಬಂಧ–2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.5.00 (ಐದು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

## *41]. ವಿಷಯದ ಸಂಖ್ಯೆ: ತೆಆಸ್ಥಾಸ/203/2016–17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 24.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಗಾಂಧಿನಗರ ವಿಧಾನಸಭಾಕ್ಷೇತ್ರದ ವಾರ್ಡ್ ಸಂಖ್ಯೆ: 94 ಮತ್ತು 120ರಲ್ಲಿ ಹೊಸದಾಗಿ ಸಾಮೂಹಿಕ ಶೌಚಾಲಯಗಳನ್ನು ನಿರ್ಮಿಸುವ 11 ಕಾಮಗಾರಿಗಳ ಅಂದಾಜು ಮೊತ್ತ ರೂ.295.00 ಲಕ್ಷಗಳಿಗೆ **ಸ್ವಚ್ಛ ಭಾರತ್ ಮಿಷನ್ ಅಡಿ** ಅನುದಾನ ಒದಗಿಸಲು ಮಾನ್ಯ ಶಾಸಕರು, ಗಾಂಧಿನಗರ ವಿಧಾನಸಭಾಕ್ಷೇತ್ರ ರವರು ಕೋರಿದ್ದು, ಸದರಿ ಸಂಬಂಧ ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು

2016-17ರ ಆಯವ್ಯಯದ ಪಿ3112 ಅಡಿ ಅನುದಾನ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಸೂಕ್ತ ಕ್ರಮಕೈಗೊಳ್ಳಲು ತಿಳಿಸಿರುತ್ತಾರೆ. ಜಂಟಿ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) **ಸ್ವಚ್ಛ ಭಾರತ್ ಮಿಷನ್ ಅಡಿ** ಕೈಗೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ. ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ. ಪಾಲಿಕೆಗೆ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ರೂ.41.15 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು, 2016-17ರ ಆಯವ್ಯಯದ (ಪುಟಸಂಖ್ಯೆ-180) ರಲ್ಲಿ ಕೇಂದ್ರ ಸರ್ಕಾರದ ಅನುದಾನದ ಕಾಮಗಾರಿಗಳು-ಸ್ವಚ್ಛ ಭಾರತ್ ಅಭಿಯಾನದಡಿ ಶೌಚಾಲಯಗಳ ನಿರ್ಮಾಣ ಪಿ-3112 ಅಡಿ ರೂ. 150.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಅನುದಾನ ಅಳವಡಿಸಿಕೊಂಡು ರೂ.949.78 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. 2016-17ರ ಆಯವ್ಯಯದ ಪಿ3112 ಅಡಿ ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ಈಗಾಗಲೇ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ರೂ. 41.15 ಕೋಟಿ ಅನುದಾನ ಬಿಡುಗಡೆಗೊಳಿಸಿರುವುದರಿಂದ ಲೆಕ್ಕಶೀರ್ಷಿಕೆ ಪಿ-3112 ಅಡಿ ರೂ. 295.00 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

***42]. ವಿಷಯದ ಸಂಖ್ಯೆ: ತೆಆಸ್ಥಾಸ/204/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 24.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ಸಂಖ್ಯೆ: 175 ಬೊಮ್ಮನಹಳ್ಳಿ ವ್ಯಾಪ್ತಿಗೆ ಒಳಪಟ್ಟ ದೇವರಚಿಕ್ಕನಹಳ್ಳಿ ಗ್ರಾಮದ ನ್ಯಾನಪ್ಪನಹಳ್ಳಿ ಬಂಡೆ ಸರ್ವೆ ನಂ.39ರಲ್ಲಿ 10ಎಕರೆ 29 ಗುಂಟೆ ಕಸ ತುಂಬಿರುವ ಜಾಗವು ಕೊಳೆತು ನಾರುತ್ತಿದ್ದ, ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಾಗರೀಕರಿಗೆ ಅನಾರೋಗ್ಯ ಮತ್ತು ಮಾಲಿನ್ಯ ಕಲುಷಿತ ತಡೆಯಲು, ಸುತ್ತಮುತ್ತಲಿನ 20 ಹಳ್ಳಿಯ, ಬಡಾವಣೆಯ 200 ಪಾಠಶಾಲೆಗಳ ಮಕ್ಕಳಿಗೆ, ನಾಗರೀಕರಿಗೆ ಅನುಕೂಲವಾಗುವಂತೆ ಆಟದ ಮೈದಾನ ಹಾಗೂ ಇನ್ನಿತರೆ ಕ್ರೀಡೆಗಳ ವ್ಯವಸ್ಥೆ ಮಾಡಲು ನಿರ್ಧರಿಸಿ ರೂ.2.00 ಕೋಟಿಗಳ ಅನುದಾನವನ್ನು ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಮಂಜೂರು ಮಾಡಲು ಕಾ.ಪಾ.ಅ (ಬೊಮ್ಮನಹಳ್ಳಿ) ರವರು ಕೋರಿರುತ್ತಾರೆ. ಜಂಟಿ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) ರವರು ರೂ.1.00 ಕೋಟಿಗಳ ಅನುದಾನವನ್ನು ಮಾಡಲು ಶಿಫಾರಸ್ಸು ಮಾಡಿರುತ್ತಾರೆ. ಮಾನ್ಯ ಆಯುಕ್ತರು ಸ್ವಚ್ಛ ಭಾರತ್ ಮಿಷನ್ ಅಡಿ ಕೈಗೊಳ್ಳಲು ಅನುಮೋದಿಸಿರುತ್ತಾರೆ. ಪಾಲಿಕೆಗೆ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ರೂ.41.15 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು, 2016-17ರ ಆಯವ್ಯಯದ (ಪುಟಸಂಖ್ಯೆ-180) ರಲ್ಲಿ ಕೇಂದ್ರ ಸರ್ಕಾರದ ಅನುದಾನದ ಕಾಮಗಾರಿಗಳು-ಸ್ವಚ್ಛ ಭಾರತ್ ಅಭಿಯಾನದಡಿ ಶೌಚಾಲಯಗಳ ನಿರ್ಮಾಣ ಪಿ-3112 ಅಡಿ ರೂ. 150.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಅನುದಾನ ಅಳವಡಿಸಿಕೊಂಡು ರೂ.949.78 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. 2016-17ರ ಆಯವ್ಯಯದ ಪಿ3112 ಅಡಿ ಅನುದಾನ ಕೊರತೆ ಇರುವುದರಿಂದ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ಈಗಾಗಲೇ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ರೂ. 41.15 ಕೋಟಿ ಅನುದಾನ ಬಿಡುಗಡೆಗೊಳಿಸಿರುವುದರಿಂದ ಲೆಕ್ಕಶೀರ್ಷಿಕೆ ಪಿ-3112 ಅಡಿ ರೂ. 100.00 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

***43]. ವಿಷಯದ ಸಂಖ್ಯೆ: ತೆಆಸ್ಥಾಸ/205/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 24.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ದಾಸನಪುರ ಹೋಬಳಿ ಗಿಡ್ಡೇನಹಳ್ಳಿ ಸರ್ವೆ ನಂ.80ರಲ್ಲಿ 50 ಎಕರೆ ಜಮೀನು ಸರ್ಕಾರದಿಂದ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ಆದೇಶದ ಸಂಖ್ಯೆ: ಎಲ್.ಎನ್.ಡಿ.(ಎನ್)/ಸಿ.ಆರ್/135/1998-99, ದಿನಾಂಕ: 01.02.2000ರಂತೆ ಮಂಜೂರಾಗಿದ್ದು, ಈ ಪೈಕಿ 25ಎಕರೆ ಜಮೀನನ್ನು ಭೂಮಿ ಹಸ್ತಾಂತರ ಪತ್ರದ ಸಂಖ್ಯೆ: ಎಲ್.ಎನ್.ಡಿ.(ಡಿ)ಸಿ.ಆರ್/132/2015-16, ದಿನಾಂಕ: 14.03.2016ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರ ಮಾಡಲಾಗಿರುತ್ತದೆ. ಸದರಿ ಜಮೀನನ್ನು ಒತ್ತುವರಿದಾರರಿಂದ ಸಂರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಸುತ್ತುಗೋಡೆ (ಕಾಂಪೌಂಡ್) ನಿರ್ಮಿಸುವುದು ಅತ್ಯವಶ್ಯಕವಾಗಿರುತ್ತದೆ. ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಗೆ ಅತ್ಯವಶ್ಯಕ ಅಂಶಗಳನ್ನೊಳಗೊಂಡಂತೆ ರೂ.226.00 ಲಕ್ಷಗಳಿಗೆ ಬೆಂಗಳೂರು ವೃತ್ತದ 2015-16ನೇ ಸಾಲಿನ ದರಗಳನ್ನು ಆಧರಿಸಿ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆ ಮತ್ತು ಜಾಬ್ ನಂಬರ್ ನೀಡಲು ಕೋರಿ 2016-17ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ0607 ಅಡಿಯಲ್ಲಿ ಸಲ್ಲಿಸಲಾಗಿತ್ತು.

ಮುಖ್ಯಲೆಕ್ಕಾಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು 2016-17ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ0607 ಅಡಿಯಲ್ಲಿ ಅನುದಾನ ಲಭ್ಯವಿಲ್ಲವೆಂದು ತಿಳಿಸಿರುತ್ತಾರೆ. ಪಾಲಿಕೆಯ ಆಸ್ತಿಯನ್ನು ಸಂರಕ್ಷಿಸಿಕೊಳ್ಳಲು 2016-17ನೇ ಸಾಲಿನ ಬೇರೆ ಲೆಕ್ಕಶೀರ್ಷಿಕೆಗಳಲ್ಲಿ ಉಳಿತಾಯವಾಗುವ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಿ ಸದರಿ ರೂ.226.00 ಲಕ್ಷಗಳ ಕಾಮಗಾರಿಗೆ ಅನುಮೋದನೆ ಮತ್ತು ಜಾಬ್ ನಂಬರ್ ನೀಡಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

***ಹೆಚ್ಚುವರಿ ವಿಷಯಗಳು:-***

***44]. ವಿಷಯದ ಸಂಖ್ಯೆ: ತೆಆಸ್ಥಾಸ/206/2016-17***

ಆಯುಕ್ತರ ದಿನಾಂಕ: 27.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್.ಎಂ.ವಿಶ್ವೇಶ್ವರಯ್ಯ ಕ್ಷೇಮಾಭಿವೃದ್ಧಿ ಸಮಿತಿ ಸಂಖ್ಯೆ: 483, ಚಂದ್ರಪ್ಪ ರಸ್ತೆ, ಚಂದ್ರ ನಗರ, ಕಮಲಾನಗರ, ಬೆಂಗಳೂರು-560079 ರವರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು 2016-17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 24, ಪಿ-ಕೋಡ್ 0048ರ ಅಡಿಯಲ್ಲಿ ಅನುಬಂಧ-2ರ ಕ್ರಮಸಂಖ್ಯೆ: 12ರಲ್ಲಿ ಮೀಸಲಿಟ್ಟಿರುವ ರೂ.5.00 (ಐದು) ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ಕೋರಿ ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂಧ ಸದರಿ ಸಂಸ್ಥೆಯವರು ಕೈಗೊಂಡಿರುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮುಂದುವರಿಸಲು ಲೆಕ್ಕಶೀರ್ಷಿಕೆ 24, ಪಿ-ಕೋಡ್ 0048ರ ಆಯವ್ಯಯ 2016-17ನೇ ಸಾಲಿನ ಅನುದಾನ ಮತ್ತು ಕೊಡುಗೆ ಅಡಿಯಲ್ಲಿ ಅನುಬಂಧ-2ರ ಕ್ರಮ ಸಂಖ್ಯೆ: 12ರಲ್ಲಿ ಸದರಿ ಸಂಸ್ಥೆಗೆ 5.00 (ಐದು) ಲಕ್ಷಗಳನ್ನು ಮೀಸಲಿರಿಸಿರುವ ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆಯವ್ಯಯ ಅನುಬಂಧ-2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.5.00 (ಐದು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

***45]. ವಿಷಯದ ಸಂಖ್ಯೆ: ತೆಆಸ್ಥಾಸ/207/2016-17***

ಆಯುಕ್ತರ ದಿನಾಂಕ: 28.03.2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಆರ್. ರಂಗಸ್ವಾಮಿ ಪ್ರಧಾನ ಕಾರ್ಯದರ್ಶಿ ರಂಗಶ್ರೀ ಕಲಾ ಸಂಸ್ಥೆ (ನೊಂದಣಿ), ನಂ 3989/ಡಿ, 13ನೇ ಮುಖ್ಯರಸ್ತೆ, ವಜ್ರಮುನಿ ರಸ್ತೆ, ಕುಮಾರಸ್ವಾಮಿ ಬಡಾವಣೆ, ಬೆಂಗಳೂರು-560078. ರವರು ಸುಮಾರು 30 ವರ್ಷಗಳಿಂದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ನಾಟಕಗಳ ಸ್ಪರ್ದೆ ನಡೆಸುವುದು ಹಾಗೂ ಸ್ಪರ್ದಾ ವಿಜೇತರಿಗೆ ಬಹುಮಾನ ಹಾಗೂ ಗೌರವಧನ ವಿತರಣೆ ಕಾರ್ಯಕ್ರಮಕೈಗೊಂಡಿದ್ದು, ಸದರಿ ಕಾರ್ಯಕ್ರಮಕ್ಕೆ 2016-17ರ ಅನುಮೋದಿತ ಆಯವ್ಯಯದಲ್ಲಿ ಸಂಘ ಸಂಸ್ಥೆಗಳಿಗೆ ಪಿ ಕೋಡ್ 0048ರ ಅಡಿಯಲ್ಲಿ ಮೀಸಲಿಟ್ಟಿರುವ ಮೊತ್ತ ರೂ.500.00 (ಐದು ನೂರು) ಲಕ್ಷಗಳಲ್ಲಿ ಲೆಕ್ಕಶೀರ್ಷಿಕೆ 24, ಅನುಬಂಧ-2ರ ಕ್ರಮಸಂಖ್ಯೆ: 06ರಲ್ಲಿ ಸದರಿ ಸಂಸ್ಥೆಗೆ ಮೀಸಲಿಟ್ಟಿರುವ ಮೊತ್ತ ರೂ.5.00 (ಐದು) ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಈ ಸಂಬಂಧವಾಗಿ ಸದರಿ ಸಂಸ್ಥೆಯವರ ಕೋರಿಕೆಯಂತೆ, 2016-17ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಸಂಘ/ಸಂಸ್ಥೆಗಳಿಗೆ ಪಿ ಕೋಡ್ 0048ರ ಕೊಡುಗೆಗಳು ಮತ್ತು ಸಹಾಯಧನದ ಅಡಿಯಲ್ಲಿ ಮೀಸಲಿಟ್ಟಿರುವ ಮೊತ್ತ ರೂ.500.00 (ಐದು ನೂರು) ಲಕ್ಷಗಳಲ್ಲಿ ಲೆಕ್ಕಶೀರ್ಷಿಕೆ 24, ಅನುಬಂಧ-2ರ ಕ್ರಮಸಂಖ್ಯೆ: 06ರಲ್ಲಿ ಸದರಿ ಸಂಸ್ಥೆಗೆ ಮೀಸಲಿಟ್ಟಿರುವ ಮೊತ್ತ ರೂ.5.00 (ಐದು) ಲಕ್ಷಗಳನ್ನು ಬಿಡುಗಡೆ ಮಾಡಲು ಮುಖ್ಯ ಲೆಕ್ಕಾಧಿಕಾರಿಗಳು ಕಂಡಿಕೆ (20)ರಲ್ಲಿ ಅನುಮೋದಿಸಿರುವ ಮೇರೆಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆಯವ್ಯಯ ಅನುಬಂಧ-2ರಲ್ಲಿ ಸದರಿ ಸಂಸ್ಥೆಗೆ ಹಂಚಿಕೆ ಮಾಡಲಾಗಿರುವ ರೂ.5.00 (ಐದು ಲಕ್ಷ ಮಾತ್ರ) ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲು ಸಮಿತಿಯು ಒಪ್ಪಿತು.**

**(ಎಂ.ಕೆ. ಗುಣಶೇಖರ್)**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**